

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜುಲೈ 28 ಗುರುವಾರ 2022

ಸಂಪುಟ: 43 | ಸಂಚಿಕೆ: 103 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774,
ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಸುಳ್ಯಾದಲ್ಲಿ ಬಿಜೆಪಿ ಮುಖಂಡನ ಬರ್ಬರ ಹತ್ಯೆಗೆ ಪಕ್ಷದಲ್ಲೇ ತೀವ್ರ ಆಕ್ರೋಶ

ಮಧ್ಯರಾತ್ರಿ ತುರ್ತು ಪತ್ರಿಕಾಗೋಷ್ಠಿಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ

ದೊಡ್ಡಬಳ್ಳಾಪುರ ಜನೋತ್ಸವ ರದ್ದು

ಬೆಂಗಳೂರು, ಜು.27– ದಕ್ಷಿಣ ಕನ್ನಡದಲ್ಲಿ ಮಂಗಳವಾರ ರಾತ್ರಿ ನಡೆದ ಬಿಜೆಪಿ ಕಾರ್ಯಕರ್ತ ಪ್ರವೀಣ್ ಹತ್ಯೆ ಹಿನ್ನೆಲೆಯಲ್ಲಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಒಂದು ವರ್ಷ ಪೂರೈಸಿದ ಸಂಭ್ರಮಕ್ಕಾಗಿ ಗುರುವಾರ ದೊಡ್ಡಬಳ್ಳಾಪುರದಲ್ಲಿ ಆಯೋಜಿಸಲಾಗಿದ್ದ ಜನೋತ್ಸವ ಕಾರ್ಯಕ್ರಮವನ್ನು ರದ್ದು ಮಾಡಿರುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದ್ದಾರೆ.

ಇಂದು ಬೆಳ್ಳಾರೆಯಲ್ಲಿ ಪ್ರವೀಣ್ ನೆಟ್ಟಾರು ಅಂತ್ಯಕ್ರಿಯೆ ವೇಳೆ ಬಿಜೆಪಿ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿ, ಪಕ್ಷದ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್ ಅವರ ಕಾರನ್ನೇ ಜಖಂಗೊಳಿಸಲು ಮುಂದಾಗಿದ್ದು, ಹಾಗೂ ರಾಜ್ಯಾದ್ಯಂತ ಹಲವು ಜಿಲ್ಲೆಗಳಲ್ಲಿ ಯುವಮೋರ್ಚಾ ಪದಾಧಿಕಾರಿಗಳು ರಾಜೀನಾಮೆ ಘೋಷಣೆ ಮಾಡಿದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರಾತ್ರಿ 12.30ಕ್ಕೆ ತುರ್ತು ಸುದ್ದಿಗೋಷ್ಠಿ ಕರೆದು ದೊಡ್ಡಬಳ್ಳಾಪುರದ ಜನೋತ್ಸವ ಕಾರ್ಯಕ್ರಮ ಹಾಗೂ ವಿಧಾನಸೌಧದಲ್ಲಿ ಏರ್ಪಡಿಸಿದ್ದ ಸರ್ಕಾರಿ ಕಾರ್ಯಕ್ರಮವನ್ನು ರದ್ದುಪಡಿಸಿರುವುದಾಗಿ ಪ್ರಕಟಿಸಿದರು. ನಿನ್ನೆ ರಾತ್ರಿ ಪ್ರವೀಣ್ ಹತ್ಯೆಯಾದ ಸುದ್ದಿ ಕೇಳಿ ಬಹಳ ಸಂಕಟವಾಯಿತು. ರಾತ್ರಿ ಇಲ್ಲಿವರೆಗೆ



ಪೊಲೀಸ್ ಅಧಿಕಾರಿಗಳಿಗೆ ಹಲವಾರು ಸೂಚನೆಗಳನ್ನು ಕೊಟ್ಟಿದ್ದೇನೆ. ಪ್ರವೀಣ್ ಹತ್ಯೆ ಅಮಾನವೀಯ ಕೃತ್ಯವಾಗಿದ್ದು, ಶಿವಮೊಗ್ಗದಲ್ಲಿ ಹರ್ಷನ ಕೊಲೆಯಾದ ಕೆಲವೇ ತಿಂಗಳಲ್ಲಿ ಪ್ರವೀಣ್ ಕೊಲೆ ನಡೆದಿರುವುದು ಮನಸ್ಸಿಗೆ ಘಾಸಿಯುಂಟು ಮಾಡಿದೆ. ಪಕ್ಷದ ರಾಜ್ಯಾಧ್ಯಕ್ಷ ಕಟೀಲ್ ಅವರು ಬೆಳ್ಳಾರೆಗೆ ತೆರಳಿ ಕುಟುಂಬದವರಿಗೆ ಸಾಂತ್ವನ ಹೇಳಿ ಬಂದಿದ್ದಾರೆ. ನಾಳೆ ಯಡಿಯೂರಪ್ಪನವರ ಸರ್ಕಾರ ಅಧಿಕಾರಕ್ಕೆ ಬಂದು 3 ವರ್ಷ ತುಂಬುತ್ತಿದೆ. ▶ 11ನೇ ಪುಟಕ್ಕೆ

ಪ್ರತ್ಯೇಕ ಭಯೋತ್ಪಾದನಾ ನಿಗ್ರಹ ಕಮಾಂಡೋ ಪಡೆ

ಬೆಂಗಳೂರು, ಜು.27– ರಾಜ್ಯದಲ್ಲಿ ಜನರ ನಡುವೆ ದ್ವೇಷ ಬೆಳೆಸಿ ಶಾಂತಿ ಕದಡುವ ಕೃತ್ಯಗಳಲ್ಲಿ ಭಾಗಿಯಾಗುತ್ತಿರುವ ಸಂಘಟನೆಗಳನ್ನು ದಮನ ಮಾಡುವ ಸಲುವಾಗಿ ಹೊಸದಾಗಿ ಭಯೋತ್ಪಾದನಾ ನಿಗ್ರಹ ಕಮಾಂಡೋ ಪಡೆಯನ್ನು ರಚಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಈ ಕೃತ್ಯಗಳನ್ನು ಎಸಗುವ ದೊಡ್ಡ ಜಾಲವೇ ಇದೆ. ರಾಜ್ಯದಲ್ಲಿ ಈವರೆಗೂ 25ಕ್ಕೂ ಹೆಚ್ಚು ಹಿಂದೂ ಕಾರ್ಯಕರ್ತರ ಹತ್ಯೆಯಾಗಿದೆ. ಹತ್ಯೆ ನಡೆದಾಗ ಅದರಲ್ಲಿ ಭಾಗಿಯಾದವರನ್ನು ಮಾತ್ರ ಬಂಧಿಸಿ, ಜೈಲಿಗೆ ಹಾಕಿದರೆ ಸಾಲದು. ಅವರ ಹಿಂದೆ ಇರುವಂತಹ ಸಂಘಟನೆಗಳ ಮೇಲೂ ಕಠಿಣ ಕ್ರಮ ಕೈಗೊಳ್ಳಬೇಕು. ಆದರೆ ಈ ಹಿಂದೆ ಅಂತಹ ಸಂಘಟನೆಗಳ ವಿರುದ್ಧ ದಾಖಲಾಗಿದ್ದ ಕೇಸುಗಳನ್ನು ಹಿಂಪಡೆದದ್ದು ಆ ಸಂಘಟನೆಗಳಿಗೆ ಪ್ರೋತ್ಸಾಹ ನೀಡಿದಂತಾಗಿ, ಇಂತಹ ಕೃತ್ಯಗಳು ಹೆಚ್ಚಾಗುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು. ಕೇರಳ ಹೈಕೋರ್ಟ್ ಪಿಎಫ್ಐ ಸೇರಿದಂತೆ ಕೆಲ ಸಂಘಟನೆಗಳು ಭಯೋತ್ಪಾದನಾ ▶ 11ನೇ ಪುಟಕ್ಕೆ

ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಪಿವಿ ಸಿಂಧು ಭಾರತದ ಧ್ವಜಧಾರಿ



ಬರ್ಮಿಂಗ್‌ಹ್ಯಾಮ್: ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಈ ಬಾರಿ ಎರಡು ಬಾರಿ ಒಲಿಂಪಿಕ್ ಪದಕ ವಿಜೇತೆ ಬ್ಯಾಡ್ಮಿಂಟನ್ ತಾರೆ ಪಿವಿ ಸಿಂಧು ಅವರು ಭಾರತದ ಧ್ವಜ ಹಿಡಿದು ತಂಡವನ್ನು ಮುನ್ನಡೆಸಲಿದ್ದಾರೆ. ಬರ್ಮಿಂಗ್‌ಹ್ಯಾಮ್‌ನ ಹೊಸದಾಗಿ ನವೀಕರಿಸಿದ ಅಲೆಕ್ಸಾಂಡರ್ ಕ್ರೀಡಾಂಗಣದಲ್ಲಿ ಗುರುವಾರ ಉದ್ಘಾಟನಾ ಸಮಾರಂಭ ನಡೆಯಲಿದೆ. 11 ದಿನಗಳ ಬಹು–ಕ್ರೀಡಾ ಕಾರ್ಯಕ್ರಮಕ್ಕೆ ನಾಳೆ ಅಧಿಕೃತ ಚಾಲನೆ ದೊರೆಯಲಿದೆ. "ಉದ್ಘಾಟನಾ ಸಮಾರಂಭದ ಭಾರತ ತಂಡದ ಧ್ವಜಧಾರಿಯಾಗಿ ಪಿವಿ ಸಿಂಧು ಅವರನ್ನು ಹೆಸರಿಸಲಾಗಿದೆ" ಎಂದು ಭಾರತೀಯ ಒಲಿಂಪಿಕ್ ಸಂಸ್ಥೆಯ(ಐಒಎ) ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಾಳೆ ನಡೆಯಲಿರುವ ಉದ್ಘಾಟನಾ ಸಮಾರಂಭದಲ್ಲಿ ಒಟ್ಟು 164 ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ಭಾರತದಿಂದ ಒಟ್ಟು 215 ಅಥ್ಲೀಟ್‌ಗಳು ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಸ್ಪರ್ಧಿಸಲಿದ್ದಾರೆ.

ಬಿಜೆಪಿ ಕಾರ್ಯಕರ್ತರ ಆಕ್ರೋಶದ ನಡುವೆ ಮುಖಂಡ ಪ್ರವೀಣ್ ನೆಟ್ಟಾರು ಅಂತ್ಯಕ್ರಿಯೆ



ಉದ್ರಿಕ್ತರ ಚದುರಿಸಲು ಪೊಲೀಸರ ಲಾಠಿ ಚಾರ್ಜ್



ಮಂಗಳೂರು,ಜು.27–ನಿನ್ನೆ ದುಷ್ಕರ್ಮಿಗಳಿಂದ ಹತ್ಯೆಗೀಡಾದ ಬಿಜೆಪಿ ಯುವ ಮುಖಂಡ ಪ್ರವೀಣ್‌ಕುಮಾರ್ ನೆಟ್ಟಾರು ಅಂತ್ಯಕ್ರಿಯೆ ಇಂದು ಸ್ವಗ್ರಾಮ ಬೆಳ್ಳಾರೆನಲ್ಲಿ ನಡೆಯಿತು. ಪ್ರವೀಣ್ ಮೃತದೇಹದ ಮೆರವಣಿಗೆ ಹಾಗೂ ಅಂತ್ಯಸಂಸ್ಕಾರದ ವೇಳೆ ಬಿಜೆಪಿ ಹಾಗೂ ಹಿಂದೂ ಪರ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್ ಕಾರನ್ನು ಪಲ್ಟಿ ಮಾಡಲು ಪ್ರಯತ್ನಿಸಿದರು. ಉದ್ರಿಕ್ತರು ಕಲ್ಲು ತೂರಾಟ ನಡೆಸಿದ್ದು, ಪೊಲೀಸರು ಲಾಠಿ ಚಾರ್ಜ್ ಮಾಡಿ ಪರಿಸ್ಥಿತಿ ತಹಬದಿಗೆ ತಂದರು. ಸದ್ಯ ಬೆಳ್ಳಾರೆಯಲ್ಲಿ ಸೆಕ್ಷನ್ 144 ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಪ್ರವೀಣ್ ಮೃತದೇಹವನ್ನು ಪುತ್ತೂರಿನಿಂದ ಮೆರವಣಿಗೆ ಮೂಲಕ ಅವರ ಸ್ವಗ್ರಾಮಕ್ಕೆ ತರಲಾಯಿತು. ಸಾರ್ವಜನಿಕರ ಅಂತಿಮ ದರ್ಶನದ ಬಳಿಕ ಬಿಲ್ಲವ ▶ 11ನೇ ಪುಟಕ್ಕೆ

ಅಗತ್ಯವಿದ್ದರೆ ಎನ್‌ಐಎ ತನಿಖೆ: ಮುಖ್ಯಮಂತ್ರಿ

ಬೆಂಗಳೂರು, ಜು.27–ಬಿಜೆಪಿ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣವನ್ನು ಅಗತ್ಯವಿದ್ದರೆ ಎನ್‌ಐಎ ತನಿಖೆಗೆ ವಹಿಸುತ್ತೇವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಇಂದು ಸುದ್ದಿಗಾರರ ಜೊತೆ ಮಾತನಾಡಿದ ಅವರು, ಆದಷ್ಟು ಬೇಗ ಕೊಲೆ ಆರೋಪಿಗಳನ್ನು ಬಂಧಿಸುತ್ತೇವೆ. ಉಗ್ರ ಶಿಕ್ಷೆ ಕೊಡಿಸುತ್ತೇವೆ, ಯಾವುದೇ ಅನುಮಾನಬೇಡ. ದುಷ್ಕರ್ಮಿಗಳನ್ನು ದಮನ ಮಾಡುವವರೆಗೂ ವಿಶ್ರಮಿಸಲ್ಲ. ಹೀಗಾಗಿ ಎಲ್ಲರೂ ಶಾಂತಿ ಕಾಪಾಡಬೇಕು ಎಂದು ಮನವಿ ಮಾಡಿದರು. ಪ್ರಕರಣವನ್ನು ಎನ್‌ಐಎ ತನಿಖೆಗೆ ವಹಿಸಬೇಕಾದರೆ ಪ್ರಾಥಮಿಕ ಮಾಹಿತಿ ಪಡೆಯಬೇಕು. ಕೆಲ ನಿಯಮಗಳು ಇರುತ್ತವೆ. ಅವೆಲ್ಲವನ್ನೂ ಗಮನಿಸಿ ಅಗತ್ಯವಿದ್ದರೆ ಎನ್‌ಐಎ ತನಿಖೆಗೆ ವಹಿಸುತ್ತೇವೆ. ಯಾರೂ ಪ್ರಚೋದನೆ ಹೇಳಿಕೆ ನೀಡಬಾರದು. ಘಟನೆ ನಡೆದ ತಕ್ಷಣ ಅಗತ್ಯಕ್ರಮ ಕೈಗೊಳ್ಳಲು ಸೂಚಿಸಿದ್ದೇನೆ. ದಕ್ಷಿಣ ಕನ್ನಡ ಜಿಲ್ಲಾ ಪೊಲೀಸರ ಜೊತೆ ಹಿರಿಯ ಅಧಿಕಾರಿಗಳು ನಿರಂತರ ಸಂಪರ್ಕದಲ್ಲಿದ್ದಾರೆ. ಪೊಲೀಸರ ವಿಶೇಷ ತಂಡ ರಚಿಸಿ ಹತ್ಯೆ ಆರೋಪಿಗಳಿಗಾಗಿ ಶೋಧ ನಡೆಯುತ್ತಿದೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ತಿಳಿಸಿದರು.

ಪೊಲೀಸ್ ವಶಕ್ಕೆ 10 ಮಂದಿ ಶಂಕಿತರು

ಮಂಗಳೂರು, ಜು.27–ಬಿಜೆಪಿ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ 10 ಮಂದಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.

ಇಂದು ಸಿಎಂ ಬಸವರಾಜ ಬೊಮ್ಮಾಯಿ ಜೊತೆ ಚರ್ಚೆ ನಡೆಸಿದ ನಂತರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಪ್ರಕರಣ ಸಂಬಂಧ 10 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ. ಪರಿಸ್ಥಿತಿಯ ಬಗ್ಗೆ ಡಿಜಿ ಪ್ರವೀಣ್ ಸೂದ್ ಎಲ್ಲಾ ಮಾಹಿತಿಯನ್ನು ನೀಡಿದ್ದಾರೆ. ಪೊಲೀಸರು ಕೇರಳಾಗೆ ತೆರಳಿ ಹಂತಕರ ಹುಡುಕಾಟ ನಡೆಸುತ್ತಿದ್ದಾರೆ. ಕೇರಳ ಪೊಲೀಸರ ಜೊತೆ ನಮ್ಮ ಡಿಜಿ ಮಾತನಾಡಿದ್ದಾರೆ. ಪೊಲೀಸರು ಜಂಟಿಯಾಗಿ ಕಾರ್ಯಾಚರಣೆ ಮಾಡುತ್ತಿದ್ದಾರೆ ಎಂದರು. ಹತ್ಯೆ ಪ್ರಕರಣವನ್ನು ಎನ್‌ಐಎಗೆ ಕೊಡಲು ತಯಾರಿದ್ದೇವೆ. ಶಾಂತಿ–ಸುವ್ಯವಸ್ಥೆ ಕಾಪಾಡಲಾಗುತ್ತದೆ. ಅಪರಾಧಿಗಳನ್ನು ಬಂಧಿಸಲಾಗುತ್ತದೆ. ಶಾಂತಿ ಸುವ್ಯವಸ್ಥೆ ಕಾಪಾಡಲು ಮನವಿ ಮಾಡುತ್ತೇವೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.











ಮೈಸೂರು ಮಿತ್ರ

ಮೌಖಿಕ ಒಪ್ಪಂದದಂತೆ ಸ್ಮಾರಕ ಜಾಗದಲ್ಲಿ ಎನ್‌ಟಿಎಂ ಶಾಲೆ ನಿರ್ಮಿಸಿಕೊಡಲಿ

ಹೋರಾಟ ಸಮಿತಿಯಿಂದ ಮತ್ತೆ ಪ್ರತಿಭಟನೆ ಆರಂಭ



ಮೈಸೂರು,ಜು.27(ಆರ್‌ಕೆಬಿ)–ಶಾಲೆಯನ್ನು ಕೆಡವಿ ಹಾಕಿರುವ ರಾಮಕೃಷ್ಣ ಆಶ್ರಮ ಅದಕ್ಕೂ ಮುಂಚೆ ಮಾಡಿಕೊಂಡ ಮೌಖಿಕ ಒಪ್ಪಂದದಂತೆ ಸ್ಮಾರಕದ ಜಾಗದಲ್ಲಿ ಶಾಲೆಯನ್ನು ನಿರ್ಮಿಸಬೇಕು ಎಂದು ಆಗ್ರಹಿಸಿ ಎನ್‌ಟಿಎಂ ಶಾಲೆ ಉಳಿಸಿ ಹೋರಾಟ ಸಮಿತಿ ಕಾರ್ಯಕರ್ತರು ಬುಧವಾರದಿಂದ ಪ್ರತಿಭಟನೆಯನ್ನು ಮರು ಪ್ರಾರಂಭಿಸಿದ್ದಾರೆ.

ಎನ್‌ಟಿಎಂ ಶಾಲಾ ಕಟ್ಟಡ ಕೆಡವಿದ ನಿವೇಶನದ ಎದುರು ಜಮಾಯಿಸಿದ ಕಾರ್ಯಕರ್ತರು, ರಾಮಕೃಷ್ಣ ಆಶ್ರಮದವರು ಮೌಖಿಕ ಒಪ್ಪಂದದ ಪ್ರಕಾರ ಸ್ಮಾರಕದ ಜೊತೆಗೆ ಎನ್‌ಟಿಎಂ ಶಾಲೆಯನ್ನು ನಿರ್ಮಿಸಿ, ಮಾತಿನಂತೆ ನಡೆದುಕೊಳ್ಳುವಂತೆ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಮೇಯರ್ ಪುರುಷೋತ್ತಮ್, ಕನ್ನಡ ಹೋರಾಟಗಾರ ಎಂ.ಮೋಹನ್‌ಕುಮಾರ್ ಗೌಡ, ಉಗ್ರನರಸಿಂಹೇಗೌಡ, ರೈತ ಹೋರಾಟಗಾರರಾದ ಪಿ.ಮರಂಕಯ್ಯ, ಸುರೇಶ್‌ಬಾಬು, ಎಸ್.ಬಾಲಕೃಷ್ಣ, ಭೋಗನಂದೀಶ್, ಆರ್. ಗೋವಿಂದರಾಜ್, ರವೀಂದ್ರ, ಬಿ.ಡಿ.ನಿಂಗಪ್ಪ ಇನ್ನಿತರರು ಉಪಸ್ಥಿತರಿದ್ದರು.



ಆಗಸ್ಟ್ 3ರಂದು ದಾವಣಗೆರೆಯಲ್ಲಿ ಆಯೋಜಿಸಿರುವ ಸಿದ್ದರಾಮಯ್ಯನವರ 75ನೇ ಹುಟ್ಟುಹಬ್ಬದ ಅಮೃತ ಮಹೋತ್ಸವದ ಲಾಂಛನವನ್ನು ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ಬಿಡುಗಡೆಗೊಳಿಸಿದರು. ಚಿತ್ರದಲ್ಲಿ ಹಿಂದುಳಿದ ವರ್ಗಗಳ ಒಕ್ಕೂಟದ ಅಧ್ಯಕ್ಷ ರಾಮಚಂದ್ರಪ್ಪ, ಅಮೃತ ಮಹೋತ್ಸವ ಸಮಿತಿ ಸದಸ್ಯ ಕೃಷ್ಣಮೂರ್ತಿ, ರಾಮಕೃಷ್ಣ, ರವಿ ಇನ್ನಿತರರಿದ್ದಾರೆ.



ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯಲ್ಲಿ ನಡೆದ ಪದಗ್ರಹಣ ಸಮಾರಂಭವನ್ನು ಪೊಲೀಸ್ ಇನ್ಸ್‌ಪೆಕ್ಟರ್ ಮಹೇಶ್ ಉದ್ಘಾಟಿಸಿದರು. ಈ ವೇಳೆ ಪ್ರಾಂಶುಪಾಲರಾದ ಶಿಲ್ಪಾ ಪ್ರಶಾಂತ್, ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಆನ್‌ಲೈನ್ ದೋಖಾ: ಲಕ್ಷ ಲಕ್ಷ ವಂಚನೆ

ಮೈಸೂರು, ಜು. 27– ಬಹುಮಾನ ಬಂದಿದೆ ಎಂದು ವಾಟ್ಸಾಪ್ ಸಂದೇಶ ಕಳುಹಿಸಿ ಗೃಹಿಣಿಗೆ 6.40 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ರಾಘವೇಂದ್ರನಗರ ನಿವಾಸಿ ಎಂ.ಆರ್.ರೂಪಾ(42) ಅವರ ಮೊಬೈಲ್‌ಗೆ ಕೆಬಿಸಿ ಕಂಪನಿಯಿಂದ ಬಹುಮಾನ ಬಂದಿದೆ ಎಂದು ಸಂದೇಶ ರವಾನಿಸಲಾಗಿದ್ದು, ವಿವಿಧ ಚಾರ್ಜ್‌ಗಳು ಎಂದು ಹಂತಹಂತವಾಗಿ ಅವರ ಖಾತೆಯಿಂದ 6.40 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಚಾಮುಂಡಿಪುರಂನ ಗೃಹಿಣಿ ಶೃತಿ(27) ಎಂಬುವರಿಗೆ ನ್ಯಾಪ್‌ಟಾಲ್‌ನಿಂದ ಕಾರು ಬಹುಮಾನ ಬಂದಿದೆ ಎಂದು ಸಂದೇಶ ರವಾನಿಸಿ, ಜಿಎಸ್‌ಟಿ, ಇನ್ಸೂರೆನ್ಸ್ ಮತ್ತಿತರ ಚಾರ್ಜ್‌ಗಳೆಂದು 2,22,800 ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡು ಕಾರನ್ನು ನೀಡದೇ ವಂಚಿಸಲಾಗಿದೆ.

ಇನ್ನೊಂದು ಪ್ರಕರಣದಲ್ಲಿ ರಾಮಕೃಷ್ಣನಗರ ನಿವಾಸಿ ಶ್ರೀನಿವಾಸರಾವ್(59) ಅವರ ಮೊಬೈಲ್‌ಗೆ ಕಳೆದ ತಿಂಗಳ ವಿದ್ಯುತ್ ಬಿಲ್ ಅಪ್‌ಡೇಟ್ ಮಾಡಿಲ್ಲ ಎಂದು ಸಂದೇಶ ರವಾನಿಸಲಾಗಿದೆ. ಸಂದೇಶ ಬಂದ ನಂಬರ್‌ಗೆ ಅವರು ಕರೆ ಮಾಡಿದಾಗ Quick Support App Instal ಮಾಡಿಕೊಂಡು 20 ರೂ. ವರ್ಗಾವಣೆ ಮಾಡುವಂತೆ ತಿಳಿಸಲಾಗಿದೆ. ಅವರು ಹಾಗೆ ಮಾಡಿದಾಗ ಅವರ ಬ್ಯಾಂಕ್ ಖಾತೆ ಹ್ಯಾಕ್ ಮಾಡಿ 99 ಸಾವಿರ ರೂ.ಗಳನ್ನು ಅಕ್ರಮವಾಗಿ ವರ್ಗಾವಣೆ ಮಾಡಿಕೊಳ್ಳಲಾಗಿದೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೋಳಿ ವ್ಯಾಪಾರಿಗೆ 7 ಕೋಟಿ ರೂ. ನಷ್ಟ: ಸುಗುಣ ಫುಡ್ ಪ್ರೈವೇಟ್ ಲಿ. ವಿರುದ್ಧ ದೂರು

ಮೈಸೂರು,ಜು.27–ಭದ್ರತೆಗಾಗಿ ನೀಡಿದ್ದ ಚೆಕ್‌ಗಳನ್ನು ದುರುಪಯೋಗಪಡಿಸಿಕೊಳ್ಳುವ ಮೂಲಕ 7 ಕೋಟಿ ನಷ್ಟವನ್ನುಂಟು ಮಾಡಲಾಗಿದೆ ಎಂದು ಕೋಳಿ ವ್ಯಾಪಾರಿಯೊಬ್ಬರು ಸುಗುಣ ಫುಡ್ ಪ್ರೈವೇಟ್ ಲಿ. ವಿರುದ್ಧ ದೂರು ದಾಖಲಿಸಿದ್ದಾರೆ.

ಕ್ರೈಂ ಬಾಕ್ಸ್

ಮೈಸೂರಿನ ದೇವರಾಜ ಮಟನ್ ಮಾರುಕಟ್ಟೆಯಲ್ಲಿ ಮಹಾಲಕ್ಷ್ಮಿ ಗಣೇಶ್ ಪೌಲ್ಟ್ರಿ ಸೆಂಟರ್ ನಡೆಸುತ್ತಿರುವ ಕೆ.ಕುಬೇರ್‌ರಾಜ್(58) 1989ರಿಂದಲೂ ಸುಗುಣ ಕಂಪನಿಯಲ್ಲಿ ವಹಿವಾಟು ನಡೆಸುತ್ತಿದ್ದು, ಕಂಪನಿ ಅವರನ್ನು ಡೈಮಂಡ್ ಗ್ರಾಹಕರೆಂದು ಗುರುತಿಸಿ, ಅವರಿಗೆ 30 ಲಕ್ಷ ರೂ.ವರೆಗೆ ಸಾಲ ನೀಡುತ್ತಿತ್ತು. ಅದಕ್ಕಾಗಿ 2 ಖಾಲಿ ಚೆಕ್‌ಗಳನ್ನು ಕಂಪನಿ ಪಡೆದಿತ್ತು ಎಂದು ದೂರಿನಲ್ಲಿ ತಿಳಿಸಲಾಗಿದೆ.

ಕಂಪನಿಯು ಇತ್ತೀಚೆಗೆ ರಾಸ್ ಎಂಬ ತಳಿಯ ಬದಲು ಎಫ್–15 ಎಂಬ ತಳಿಯನ್ನು ಪರಿಚಯಿಸಿ, ಅದನ್ನು ಖರೀದಿಸುವಂತೆ ಸೂಚಿಸಿದ್ದು, ಈ ತಳಿ ಖರೀದಿಸಿ ವಹಿವಾಟು ನಡೆಸಿದ್ದರಲ್ಲಿ ತನಗೆ ದಿನಕ್ಕೆ 80 ಸಾವಿರದಿಂದ 1 ಲಕ್ಷ ರೂ.ವರೆಗೂ ನಷ್ಟ ಉಂಟಾಗುತ್ತಿತ್ತು. ಈ ವಿಷಯವನ್ನು ಕಂಪನಿಯವರಿಗೆ ಇ–ಮೇಲ್ ಮತ್ತು ದೂರವಾಣಿ ಮೂಲಕ ತಿಳಿಸಲಾಗಿ, ಸಮಸ್ಯೆ ಸರಿಪಡಿಸುತ್ತೇವೆ ಎಂದು ಹೇಳುತ್ತಾ ಬಂದಿದ್ದ ಕಂಪನಿಯವರು, ನಷ್ಟದ ಹಣವನ್ನು ತಾನು ವಸೂಲು ಮಾಡುವುದನ್ನು ತಡೆಯುವ ಉದ್ದೇಶದಿಂದ ಭದ್ರತೆಗಾಗಿ ನೀಡಿದ್ದ ಖಾಲಿ ಚೆಕ್‌ಗಳನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಇದರಿಂದಾಗಿ ತನಗೆ 7 ಕೋಟಿಗೂ ಹೆಚ್ಚು ನಷ್ಟವಾಗಿದೆ ಎಂದು ಕುಬೇರ್‌ರಾಜ್ ನೀಡಿದ ದೂರಿನನ್ವಯ ಸುಗುಣ ಫುಡ್ ಪ್ರೈವೇಟ್ ಲಿಮಿಟೆಡ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಸುಂದರರಾಜನ್, ಕರ್ನಾಟಕ ರೀಜನಲ್ ಜನರಲ್ ಮ್ಯಾನೇಜರ್ ಕಾರ್ತಿಕೇಯನ್, ಮೈಸೂರು ರೀಜನಲ್ ಅಸಿಸ್ಟೆಂಟ್ ಮ್ಯಾನೇಜರ್ ಪುಟ್ಟರಾಜು ಮತ್ತು ಮಾರ್ಕೆಟಿಂಗ್ ಮ್ಯಾನೇಜರ್ ಅಪ್ಪಾದೊರೆ ಅವರುಗಳ ವಿರುದ್ಧ ದೇವರಾಜ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮನೆಯಲ್ಲಿದ್ದ ಚಿನ್ನಾಭರಣ ನಾಪತ್ತೆ: ಕೆಲಸದವಳ ವಿರುದ್ಧ ದೂರು

ಮೈಸೂರು, ಜು. 27– ಮನೆಯ ಬೀರುವಿನಲ್ಲಿ ಇಟ್ಟಿದ್ದ 2.07 ಲಕ್ಷ ರೂ. ಮೌಲ್ಯದ ಚಿನ್ನಾಭರಣ ನಾಪತ್ತೆಯಾಗಿದ್ದು, ಮನೆಯ ಕೆಲಸದವಳ ವಿರುದ್ಧ ಸಂಶಯ ವ್ಯಕ್ತಪಡಿಸಿ ಪೊಲೀಸರಿಗೆ ದೂರು ನೀಡಿರುವ ಬಗ್ಗೆ ವರದಿಯಾಗಿದೆ.

ಕೆಜಿ ಕೊಪ್ಪಲು ಜನಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಮ್ಯಾನೇಜರ್ ಆಗಿದ್ದು, ಮೈಸೂರಿನ ಬಸವೇಶ್ವರ ರಸ್ತೆಯಲ್ಲಿ ವಾಸವಾಗಿರುವ ತಿರುಮಲ್ಲೇಶ್(27) ಅವರ ತಾಯಿಯ ವರ್ಷದ ಕಾರ್ಯ ಕಳೆದ ಮೇ 5ರಂದು ನಡೆದಾಗ ಮನೆಯಲ್ಲಿದ್ದ ಚಿನ್ನಾಭರಣವನ್ನು ಪೂಜೆಗಿಟ್ಟು, ನಂತರ ಅದನ್ನು ಬೀರುವಿನಲ್ಲಿ ಇರಿಸಲಾಗಿತ್ತು. ಆದರೆ ಬೀರುವಿಗೆ ಲಾಕ್ ಮಾಡಿರಲಿಲ್ಲ. ಜುಲೈ 25ರಂದು ಬೀರುವಿನಲ್ಲಿ ನೋಡಿದಾಗ ಚಿನ್ನಾಭರಣ ನಾಪತ್ತೆಯಾಗಿತ್ತು. ತಮ್ಮ ಮನೆಗೆ ಕೆಜಿ ಕೊಪ್ಪಲು ನಿವಾಸಿ ಅಶ್ವಿನಿ(35) ಎಂಬಾಕೆ ಮನೆ ಕೆಲಸಕ್ಕೆ ಬರುತ್ತಿದ್ದು, ನಮ್ಮ ಮನೆಯ ಬೀರು ಲಾಕ್ ಮಾಡುತ್ತಿರಲಿಲ್ಲ ಎಂಬ ವಿಚಾರ ಆಕೆಗೆ ಗೊತ್ತಿದೆ. ಚಿನ್ನಾಭರಣವನ್ನು ಆಕೆಯೇ ಕಳವು ಮಾಡಿರಬಹುದು ಎಂದು ಅನುಮಾನವಿರುವುದಾಗಿ ತಿರುಮಲ್ಲೇಶ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕೆಆರ್ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ನಾಳೆ ಯುದ್ಧ ಸ್ಮಾರಕ ನಿರ್ಮಾಣಕ್ಕೆ ಶಂಕುಸ್ಥಾಪನೆ

ಮೈಸೂರು,ಜು.27–ಜಿಲ್ಲಾಡಳಿತ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಸಹಯೋಗದೊಂದಿಗೆ ಯುದ್ಧ ಸ್ಮಾರಕಕ್ಕೆ ಜು.29ರಂದು ಮಧ್ಯಾಹ್ನ 12.05ಕ್ಕೆ ಹಳೆಯ ಡಿಸಿ ಕಚೇರಿ ಸಮೀಪ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಶಂಕುಸ್ಥಾಪನೆ ನೆರವೇರಿಸುವರು. ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭಾಗವಹಿಸುವರು. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಮೇಯರ್ ಸುನಂದಾ ಪಾಲನೇತ್ರ ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್‌ಪ್ರಸಾದ್, ಸುಮಲತಾ ಅಂಬರೀಷ್, ಪರಿಷತ್ ಶಾಸಕರು, ನಿಗಮ ಮಂಡಳಿ ಅಧ್ಯಕ್ಷರು ಉಪಸ್ಥಿತರಿರುವರು.

ಕಲಾವಿದ ಶ್ರೀಹರಿಗೆ ಫೆಲೋಶಿಪ್



ಮೈಸೂರು,ಜು. 27– ಅತ್ಯುನ್ನತ ಕಲಾ ಸೇವೆ ಸಲ್ಲಿಸಿರುವ ತಿ.ನರಸೀಪುರ ಪಟ್ಟಣದ ಕಲಾವಿದ ಕೆ.ಎಸ್. ಶ್ರೀಹರಿ ಅವರು ಕರ್ನಾಟಕ ಲಲಿತ ಕಲಾ ಅಕಾಡೆಮಿಯ 2021–22ನೇ ಸಾಲಿನ ಗೌರವ ಫೆಲೋಶಿಪ್‌ಗೆ ಭಾಜನರಾಗಿದ್ದಾರೆ. ಆಗಸ್ಟ್‌ನಲ್ಲಿ ದಾವಣಗೆರೆಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

59, 64ನೇ ವಾರ್ಡ್‌ನಲ್ಲಿ ವಾರದಿಂದ ನೀರಿಗೆ ಹಾಹಾಕಾರ

ನಾಗರಿಕರಿಂದ ಪಾಲಿಕೆ ಎದುರು ಪ್ರತಿಭಟನೆ



ಮೈಸೂರು, ಜು.27(ಆರ್‌ಕೆಬಿ)– ಮೈಸೂರಿನ ಹಲವು ಬಡಾವಣೆಗಳಲ್ಲಿ ನೀರಿನ ಸಮಸ್ಯೆ ತಲೆದೋರಿದೆ. ವಾರದಿಂದ ಕುಡಿಯುವ ನೀರು ಬರುತ್ತಿಲ್ಲ ಎಂದು 59 ಮತ್ತು 64ನೇ ವಾರ್ಡ್ ವ್ಯಾಪ್ತಿಯ ನಾಗರಿಕರು ಮೈಸೂರು ನಗರಪಾಲಿಕೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಪ್ರತಿಭಟನೆ ನಡೆಸಿದರು.

ಖಾಲಿ ಬಿಂದಿಗೆಗಳನ್ನು ಹಿಡಿದ ಮಹಿಳೆಯರು, ಹಿರಿಯ ನಾಗರಿಕರು ವಿವೇಕಾನಂದ ವೃತ್ತದಲ್ಲಿ ಕೆಲ ಹೊತ್ತು ಶ್ರೀರಾಮಪುರ ರಸ್ತೆ ತಡೆ ನಡೆಸಿದರು. ಬಳಿಕ ಅಲ್ಲಿಂದ ನಗರಪಾಲಿಕೆ ಕಚೇರಿ ಪ್ರವೇಶ ದ್ವಾರದಲ್ಲಿ ಜಮಾಯಿಸಿ, ಪಾಲಿಕೆ ಮೇಯರ್, ಆಯುಕ್ತರು ಮತ್ತು ಪಾಲಿಕೆ ಸದಸ್ಯರ ವಿರುದ್ಧ ಘೋಷಣೆ ಕೂಗಿದರು. ಮೂಲ ಸೌಕರ್ಯಗಳಲ್ಲಿ ಪ್ರಮುಖವಾದ ನೀರಿಗಾಗಿ ಮಹಿಳೆಯರು, ಹಿರಿಯ ನಾಗರಿಕರು ಪ್ರತಿಭಟನೆ ನಡೆಸುತ್ತಿದ್ದರೂ ಸ್ಥಳಕ್ಕಾಗಮಿಸದ ಮೇಯರ್ ಮತ್ತು ಆಯುಕ್ತರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಮೇಯರ್ ವಾರ್ಡ್‌ನಲ್ಲೇ 5 ದಿನಗಳಿಂದ ನೀರಿಲ್ಲದೆ ನಾಗರಿಕರು ಹಾಹಾಕಾರ ಪಡುವಂತಾಗಿದೆ. ಟ್ಯಾಂಕರ್‌ಗಳಲ್ಲಿ ಬರುವ ನೀರಿಗಾಗಿ ಜನರಿಂದಲೇ 700 ರೂ. ಕೇಳಲಾಗುತ್ತಿದೆ ಎಂದು ಪಾಲಿಕೆ ಅಧಿಕಾರಿಗಳ ವಿರುದ್ಧ ಕಿಡಿಕಾರಿದರು.

ಬಿಂದಿಗೆ ಹಿಡಿದು ಪ್ರತಿಭಟನೆಯ ನೇತೃತ್ವ ವಹಿಸಿದ್ದ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಕ್ಷೇತ್ರವನ್ನು ಮಾದರಿ ಕ್ಷೇತ್ರವಾಗಿ ಮಾರ್ಪಡಿಸಿರುವುದಾಗಿ ಹೇಳಿಕೊಳ್ಳುವ ಶಾಸಕರಿಗೆ ಕ್ಷೇತ್ರದ ಜನರ ನೀರಿನ ಗೋಳು ತಿಳಿಯುತ್ತಿಲ್ಲವೇಕೆ? ವಾರದಿಂದ ನೀರಿಗಾಗಿ ತೊಂದರೆ ಅನುಭವಿಸುತ್ತಿದ್ದರೂ ಶಾಸಕರಾಗಲೀ, ನಗರಪಾಲಿಕೆ ಅಧಿಕಾರಿಗಳಾಗಲೀ ಗಮನ ಹರಿಸಿಲ್ಲದಿರುವ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್ ಕುಮಾರ್ ಮಾತನಾಡಿ, ನೀರಿನ ಸಮಸ್ಯೆ ಇದ್ದರೂ ಯಾರೊಬ್ಬರೂ ಗಮನ ಹರಿಸುತ್ತಿಲ್ಲ ಎಂದು ನಾಗರಿಕರು ಪ್ರತಿಭಟನೆ ನಡೆಸಿದ್ದಾರೆ. ನಿರ್ಲಕ್ಷ್ಯದ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದರೂ ಸೌಜನ್ಯಕ್ಕಾದರೂ ಜನಪ್ರತಿನಿಧಿಗಳು, ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಬಳಿಕ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಪ್ರತಿಭಟನಾನಿರತರ ಭೇಟಿ ಮಾಡಿ, ಸಮಸ್ಯೆ ಆಲಿಸಿದರು. ತಾಂತ್ರಿಕ ಕಾರಣಗಳಿಂದಾಗಿ ನೀರಿನ ಸಮಸ್ಯೆ ಉಂಟಾಗಿತ್ತು. ಈಗ ಅದನ್ನು ಸರಿಪಡಿಸಲಾಗಿದೆ. ಸಂಜೆಯೊಳಗೆ ನೀರು ಸರಬರಾಜು ಮಾಡಲಾಗುವುದು ಎಂದು ಭರವಸೆ ನೀಡಿದರು. ಪ್ರತಿಭಟನೆಯಲ್ಲಿ ಬಡಾವಣೆಯ ಶಶಿಕಲಾ, ಮಾಲತಿ ಗುರುರಾಜ್, ನಯನಶ್ರೀ, ಶ್ರೀಲಕ್ಷ್ಮಿ, ಗುರುರಾಜ್, ಡೈರಿ ವೆಂಕಟೇಶ್, ರಾಜೇಶ್, ರಮೇಶ್, ಬಿ.ಸೋಮಶೇಖರ್, ಮಹದೇವಸ್ವಾಮಿ, ಗುಣಶೇಖರ್ ಇನ್ನಿತರರು ಭಾಗವಹಿಸಿದ್ದರು.

ಬಡವರ ಆಹಾರದ ಮೇಲಿನ ಜಿಎಸ್‌ಟಿ ಹಿಂಪಡೆಯಲು ಆಗ್ರಹಿಸಿ ಮೈಸೂರಲ್ಲಿ ವಾಟಾಳ್ ಪ್ರತಿಭಟನೆ



ಮೈಸೂರು,ಜು.27(ಆರ್‌ಕೆಬಿ)–ಬಡವರು, ಮಧ್ಯಮ ವರ್ಗದವರು ಉಪಯೋಗಿಸುವ ಆಹಾರ ಪದಾರ್ಥಗಳ ಮೇಲೆ ಜಿಎಸ್‌ಟಿ ವಿಧಿಸಿರುವುದನ್ನು ಕೂಡಲೇ ಹಿಂಪಡೆಯಬೇಕು ಎಂದು ಆಗ್ರಹಿಸಿ ಕನ್ನಡ ಚಳವಳಿ ನಾಯಕ, ಮಾಜಿ ಶಾಸಕ ವಾಟಾಳ್ ನಾಗರಾಜ್ ಮೈಸೂರಲ್ಲಿ ಪ್ರತಿಭಟನೆ ನಡೆಸಿದರು.

ಜಯಚಾಮರಾಜ ಒಡೆಯರ್ ವೃತ್ತ (ಹಾರ್ಡಿಂಜ್ ವೃತ್ತ)ದಲ್ಲಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದ ಅವರು, ಸಾಮಾನ್ಯ ಜನರು ಬಳಸುವ ಮಜ್ಜಿಗೆ, ಮೊಸರು, ಲಸ್ಸಿ ಸೇರಿದಂತೆ ಎಲ್ಲದರ ಮೇಲೂ ಜಿಎಸ್ಟಿ ಹಾಕುವ ಮೂಲಕ ಸಾಮಾನ್ಯ ಜನರ ಮೇಲೆ ಗದಾಪ್ರಹಾರ ಮಾಡಿದೆ. ಕೇಂದ್ರ ಸರ್ಕಾರ ಅವೈಜ್ಞಾನಿಕ ಜಿಎಸ್‌ಟಿ ಹೆಸರಿನಲ್ಲಿ ಹಗಲು ದರೋಡೆ ಮಾಡುತ್ತಿದೆ. ನರೇಂದ್ರ ಮೋದಿ ಸರ್ಕಾರ ಬೆವರು ಸುರಿಸಿ ದುಡಿಯುವ ಬಡವರು ತಿನ್ನುವ ಆಹಾರದ ಮೇಲೂ ಜಿಎಸ್‌ಟಿ ಹೊರೆ ಹಾಕಿದೆ. ಕೇಂದ್ರ ಸರ್ಕಾರ ಜನಪರವಾಗಿರದೆ ಬಡವರ ವಿರೋಧಿಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಡಾ ಅಧ್ಯಕ್ಷರನ್ನಾಗಿ ಸರ್ಕಾರ ರಿಯಲ್ ಎಸ್ಟೇಲ್, ಜಮೀನು ಇರುವವರನ್ನು ನೇಮಕ ಮಾಡದೇ ಪ್ರಾಮಾಣಿಕ, ಜನಪರವಾಗಿರುವ ವ್ಯಕ್ತಿಯನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡುವಂತೆ ಆಗ್ರಹಿಸಿದರು. ಮೇಕೆದಾಟು ಯೋಜನೆಯನ್ನು ಒಂದಿಂಚು ಕಡಿಮೆ ಮಾಡಬಾರದು, ಯಾವುದೇ ಕಾರಣಕ್ಕೂ ತಮಿಳುನಾಡು ಸರ್ಕಾರದ ವಿರೋಧಕ್ಕೆ ಭಯಪಡದೆ ಯೋಜನೆ ಕಾರ್ಯಗತಕ್ಕೆ ಕೆಚ್ಚೆದೆಯಿಂದ ಮುಂದಾಗಬೇಕು ಎಂದು ಸಿಎಂಗೆ ಒತ್ತಾಯಿಸಿದರು. ಬೇಬಿಬೆಟ್ಟದ ಬಳಿ ಟ್ರಯಲ್ ಬ್ಲಾಸ್ಟ್ ಕುರಿತು ಪ್ರತಿಕ್ರಿಯಿಸಿದ ಅವರು, ಯಾವುದೇ ಕಾರಣಕ್ಕೂ ಕಲ್ಲು ಗಣಿ ನಿಷೇಧ ತೆಗೆಯಬಾರದು, ಕಲ್ಲು ಗಣಿಗಾರಿಕೆ ನಿಲ್ಲಿಸಬೇಕು. ಕೆಆರ್‌ಎಸ್ ಉಳಿಸಿಕೊಳ್ಳಲು ರಾಜ್ಯಾದ್ಯಂತ ಹೋರಾಟ ನಡೆಯಬೇಕು. ಕೆಆರ್‌ಎಸ್ ಸುತ್ತಮುತ್ತ ಗಣಿಗಾರಿಕೆ ನಿಷೇಧಿಸದಿದ್ದರೆ ಉಗ್ರ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದರು.

ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಕಾರ್ಗಿಲ್ ವಿಜಯ್ ದಿವಸ್ ಆಚರಣೆ



ಮಂಗಳವಾರ ಮೈಸೂರಿನ ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಕಾರ್ಗಿಲ್ ವಿಜಯ್ ದಿವಸ್ ಆಚರಿಸಲಾಯಿತು. 22 ವರ್ಷಗಳ ಹಿಂದೆ ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ಎಲ್ಲಾ ಕೆಚ್ಚೆದೆಯ ಸೈನಿಕರ ತ್ಯಾಗ, ಬಲಿದಾನಕ್ಕೆ ಗೌರವ ಸಲ್ಲಿಸುವುದರ ಜೊತೆಗೆ ಮಾಜಿ ಸೈನಿಕರನ್ನು ನೆಕ್ಸಸ್ ಮಾಲ್ ಮ್ಯಾನೇಜ್‌ಮೆಂಟ್ ಮತ್ತು ಸಿಬ್ಬಂದಿ ಅಭಿನಂದಿಸಿದರು. ಈ ವೇಳೆ ದೆಹಲಿ ಪಬ್ಲಿಕ್ ಶಾಲೆ ವಿದ್ಯಾರ್ಥಿಗಳು ಸಾಂಸ್ಕೃತಿಕ ಮತ್ತು ದೇಶಭಕ್ತಿಯ ಪ್ರದರ್ಶನಗಳನ್ನು ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಪ್ರದರ್ಶಿಸಿ, ಪ್ರೇಕ್ಷಕರನ್ನು ರಂಜಿಸಿದರು.

ಜನನ–ಮರಣ ನೋಂದಣಿ ಕಾಯ್ದೆ ತಿದ್ದುಪಡಿ ಸಂಬಂಧಿತ ನ್ಯಾಯಾಂಗದ ವ್ಯಾಪ್ತಿ ಬದಲಾವಣೆಗೆ ವಿರೋಧ

ಮೈಸೂರಲ್ಲಿ ವಕೀಲರ ಪ್ರತಿಭಟನಾ ಮೆರವಣಿಗೆ

ಮೈಸೂರು,ಜು.27(ಆರ್‌ಕೆಬಿ)–ಜನನ ಮತ್ತು ಮರಣ ನೋಂದಣಿ ಕಾಯ್ದೆ ತಿದ್ದುಪಡಿಗೆ ಸಂಬಂಧಿಸಿದ ನ್ಯಾಯಾಂಗದ ವ್ಯಾಪ್ತಿಯನ್ನು ಬದಲಾವಣೆ ಮಾಡಿರುವುದನ್ನು ರದ್ದುಗೊಳಿಸಿ, ಮೊದಲಿನಂತೆ ಜೆಎಂಎಂಸಿ ನ್ಯಾಯಾಲಯಗಳಲ್ಲಿ ಮುಂದುವರಿಸಬೇಕು ಎಂದು ಆಗ್ರಹಿಸಿ, ಮೈಸೂರು ವಕೀಲರು ಬುಧವಾರ ನ್ಯಾಯಾಲಯದ ಕಲಾಪಗಳಿಂದ ಹೊರಗುಳಿದು ಪ್ರತಿಭಟನೆ ನಡೆಸಿದರು.



ಮೈಸೂರು ವಕೀಲರ ಸಂಘದ ಆಶ್ರಯದಲ್ಲಿ ವಕೀಲರು ನ್ಯಾಯಾಲಯದ ಎದುರಿನಿಂದ ಡಿಸಿ ಕಚೇರಿಗೆ ಮೆರವಣಿಗೆಯಲ್ಲಿ ತೆರಳಿ, ಪ್ರತಿಭಟನೆ ನಡೆಸಿದರು.

ಜನನ, ಮರಣ ನೋಂದಣಿ ಕಾಯ್ದೆ ತಿದ್ದುಪಡಿಗೆ ಈ ಹಿಂದೆ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ (ಜೆಎಂಎಫ್‌ಸಿ) ನ್ಯಾಯಾಲಯದ ವ್ಯಾಪ್ತಿಗೆ ಇತ್ತು. ಈಗ ಅದಕ್ಕೆ ಬದಲಾಗಿ ಇನ್ನು ಮುಂದೆ ಉಪವಿಭಾಗಾಧಿಕಾರಿಗಳು (ಎ.ಸಿ. ಕೋರ್ಟ್) ನ್ಯಾಯಾಲಯಕ್ಕೆ ಜನನ ಮತ್ತು ಮರಣ ಪ್ರಕರಣಗಳನ್ನು ಇತ್ಯರ್ಥಪಡಿಸುವ ಅಧಿಕಾರವನ್ನು ನೀಡಿ ಸುತ್ತೋಲೆಯನ್ನು ಹೊರಡಿಸಿದೆ. ಇದರಿಂದ ಕಕ್ಷಿದಾರರಿಗೆ ತುಂಬಾ ಅನ್ಯಾಯವಾಗುತ್ತದೆ. ಕರ್ನಾಟಕ ಜನನ ಮತ್ತು ಮರಣ ನೋಂದಣಿ (ತಿದ್ದುಪಡಿ) ನಿಯಮ 2022 ನ್ಯಾಯದ ಹಿತದೃಷ್ಟಿಯಿಂದ ರದ್ದುಪಡಿಸಿ, ಈ ಮೊದಲಿನಂತೆ ಜನನ ಮತ್ತು ಮರಣ ಪ್ರಕರಣಗಳನ್ನು ಜೆಎಂಎಫ್‌ಸಿ ನ್ಯಾಯಾಲಯಗಳಲ್ಲಿ ಸಂಬಂಧಪಟ್ಟಂತೆ ಪ್ರತ್ಯೇಕ ರೆವೆನ್ಯೂ ನ್ಯಾಯಾಲಯಗಳನ್ನು ಸ್ಥಾಪನೆ ಮಾಡಿ ನಿವೃತ್ತ ಜಿಲ್ಲಾ ನ್ಯಾಯಾಧೀಶರ ನೇಮಕ ಮಾಡಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಎಸ್.ಉಮೇಶ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಉಪಾಧ್ಯಕ್ಷ ಪುಟ್ಟಸಿದ್ದೇಗೌಡ, ಹಿರಿಯ ವಕೀಲರಾದ ಶಿವಣ್ಣೇಗೌಡ, ಎಂ.ಆರ್.ಆನಂದ್, ಸುಧೀರ್, ಗಿರೀಶ್, ಮೈತ್ರಿ, ಭಾಗ್ಯ, ಕವಿತಾ ಕಾಳೆ ಇತರರಿದ್ದರು.

ಇಂಜಿನಿಯರ್ ಸರ ಕಳವು

ಮೈಸೂರು,ಜು.27–ಸರಗಳ್ಳರು ಗೃಹಿಣಿಯೋರ್ವರ ಮಾಂಗಲ್ಯ ಸರ ಅಪಹರಿಸಿದ ಘಟನೆ ಮೈಸೂರಿನ ವಿಜಯನಗರ 1ನೇ ಹಂತದಲ್ಲಿ ನಡೆದಿದೆ. ವಿಜಯನಗರ 1ನೇ ಹಂತದ 4ನೇ ಕ್ರಾಸ್‌ನಲ್ಲಿ ವಾಸವಿರುವ ಹಿನಕಲ್ ಕೆಇಬಿ ಕಚೇರಿಯ ಅಸಿಸ್ಟೆಂಟ್ ಇಂಜಿನಿಯರ್ ಆರ್.ಬಿಂದು ಸರ ಕಳೆದುಕೊಂಡವರು. ಇವರು ಜುಲೈ 25ರಂದು ಸಂಜೆ 7.20ರ ಸುಮಾರಿನಲ್ಲಿ ಅಲ್ಲಿನ ರಫಾಲಾಲ್ ಮೆಡಿಕಲ್ ಸ್ಟೋರ್‌ನಲ್ಲಿ ಔಷಧಿ ಖರೀದಿಸಿ, ನಡೆದುಕೊಂಡು ಹೋಗುತ್ತಿದ್ದಾಗ, 4ನೇ ಕ್ರಾಸ್ ಜಂಕ್ಷನ್‌ನಲ್ಲಿ ಹೋಂಡಾ ಡಿಯೋ ಸ್ಕೂಟರ್‌ನಲ್ಲಿ ಬಂದ ಸರಗಳ್ಳ, 36 ಗ್ರಾಂ ತೂಕದ ಮಾಂಗಲ್ಯ ಸರವನ್ನು ಕಸಿದುಕೊಂಡು ಪರಾರಿಯಾಗಿದ್ದಾನೆ. ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.07.2022 ಗುರುವಾರ, ಮಳೆ ನಕ್ಷತ್ರ : ಪುಷ್ಯ, 20.07.2022 ರಿಂದ 02.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ
ತಿಥಿ: ಅಮಾವಾಸ್ಯೆ, ನಕ್ಷತ್ರ : ಪುನರ್ವಸು, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ–ಬಾನುಲಿ ಸರಣಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಪಿ.ಸುರಭೀ, ವ್ಯಾಖ್ಯಾನ– ಡಾ.ಲತಾ ಮೈಸೂರು, 6.50 ರೈತರಿಗೆ ಸಲಹೆ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳುವಳಿಯ ಪಯಣ– ಆಕಾಶವಾಣಿಯೊಂದಿಗೆ", 10.00 ಎಂ.ಎ. ಜ್ಯೋತಿ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರನಾಮ, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ – ಪ್ರಭುಸ್ವಾಮಿ ಮಳಿಮಠ್ ಮತ್ತು ಕೆ.ಬಿ. ಮೀನಾ, 1.20 ಭಾವಗೀತೆ–ವೃಂದಗಾನ, 3.00 ರಾಗಲಹರಿ, ಪ್ರಸ್ತುತಿ– ಜಿ.ಪುಷ್ಪಲತಾ, 4.00 ಕಥಾಕಾಲಕ್ಷೇಪ–ಪ್ರಸಂಗ "ಭೀಮೇಶ್ವರ ವ್ರತದ ಮಹಾತ್ಮೆ", ಪ್ರಸ್ತುತಿ– ಹರಿಕಥಾ ವಿದುಷಿ ಮಾಲಿನಿ, 4.30 ಕನ್ನಡ ಭಾರತಿ–ಡಾ. ಸುಮಾರಾಣಿ ಪಿ. ಅವರಿಂದ ಸಣ್ಣಕಥೆ "ರಾಜಿ", ಕಾವ್ಯಧಾರೆ–ಡಾ. ಸಂತೋಷ್ ಚೊಕ್ಕಾಡಿ ಅವರಿಂದ ಸ್ವರಚಿತ ಕವನಗಳ ವಾಚನ, 6.50 ಕೃಷಿರಂಗ–ಕಿಸಾನ್ ವಾಣಿ –ಸಮಗ್ರ ಕೃಷಿಯಲ್ಲಿನ ಅನುಭವ ಕುರಿತು ಅವರೊಂದಿಗೆ ಸಂದರ್ಶನ, 9.00 ಯುವವಾಣಿ, 10.00 ರಾಷ್ಟ್ರೀಯ ನಾಟಕ–ಕ್ರಾಂತಿ ಮೂರ್ತಿ ದುರ್ಗಾಭಾಭಿ, ನಿರ್ದೇಶನ ಮತ್ತು ನಿರ್ಮಾಣ– ಪ್ರಭುಸ್ವಾಮಿ ಮಳಿಮಠ್, 10.30 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿ ಮುದ್ರಣ

■ **ಅಖಿಲ ಭಾರತೀಯ ಗ್ರಾಹಕ ಪಂಚಾಯತ್, ಮೈಸೂರು ವಿಭಾಗ:** ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್ ನಿಷೇಧ ಬಗ್ಗೆ ಜನಜಾಗೃತಿ ಅಭಿಯಾನ, ಉಪಸ್ಥಿತರು: ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಕೆ.ಆರ್.ಪೊಲೀಸ್ ಆರಕ್ಷಕ ನಿರೀಕ್ಷಕ ಡಾ.ಡಿ.ಜಿ.ನಾಗರಾಜ್, ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ವಲಯ ಅಧ್ಯಕ್ಷ ರವಿಶಂಕರ್, ಸಂಘಟನಾ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಸ್ಥಳ: ತರಕಾರಿ ಮಾರುಕಟ್ಟೆ, ಬೆಳಗ್ಗೆ 8ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಜಾಂಡಿಸ್ ಕಾಯಿಲೆಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.

■ **ಸೇಂಟ್ ಜೋಸೆಫ್ ಕಾಲೇಜ್ ಆಫ್ ಎಜುಕೇಷನ್:** ವಿಚಾರ ಸಂಕಿರಣ, ಅಧ್ಯಕ್ಷತೆ: ಡಾ. ಅಂತೋಣಿ ವಾಜಪಿಳ್ಳೈ, ಉಪಸ್ಥಿತರು: ವಿಜಯಕುಮಾರ್, ಅವಿನಾಶ್, ಸಂಪನ್ಮೂಲ ವ್ಯಕ್ತಿಗಳು : ಡಾ. ಜಿಲ್‌ಕಾರ್ ಹಾರಿಸ್, ಡಾ.ಜಗನ್ನಾಥ ಡಾಂಗೆ, ಡಾ.ಸೋನಿ ಮೇರಿ ವರ್ಗೀಸ್, ಸ್ಥಳ: ಸೇಂಟ್ ಜೋಸೆಫ್ ಕಾಲೇಜ್ ಆಫ್ ಎಜುಕೇಷನ್ ಆವರಣ, ಜಯಲಕ್ಷ್ಮಿಪುರಂ, ಬೆಳಗ್ಗೆ 10ಕ್ಕೆ.

■ **ಕೆ.ಹರೀಶ್‌ಗೌಡರ ಸ್ನೇಹ ಬಳಗ, ಉದ್ಯೋಗದಾತ ಸಂಸ್ಥೆ:** ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡರ 50ನೇ ವರ್ಷದ ಹುಟ್ಟುಹಬ್ಬ ಆಚರಣೆ, ಬೃಹತ್ ಉದ್ಯೋಗ ಮೇಳ, ಅಂಗವಿಕಲರ ಗುರುತಿನ ಚೀಟಿ ವಿತರಣೆ, ಉದ್ಘಾಟನೆ : ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಸಾನ್ನಿಧ್ಯ ಶ್ರೀ ಸೋಮನಾಥ ಸ್ವಾಮೀಜಿ, ಶ್ರೀ ಚಿದಾನಂದ ಸ್ವಾಮೀಜಿ, ಶ್ರೀ ಶಿವಾನಂದಪುರಿ ಸ್ವಾಮೀಜಿ, ಶ್ರೀಜ್ಞಾನಪ್ರಕಾಶ ಸ್ವಾಮೀಜಿ, ಮೌಲಾನ ಅಬ್ದುಲ್ ಸಲಾಂ ರಜ್ವಿಖಾಜಿ ಷರಿಯತ್, ಡಾ.ಕೆ.ಎ.ವಿಲಿಯಂ, ಮೌಲಾನ ಶಮೂನ್, ಅಧ್ಯಕ್ಷತೆ: ಮಾಜಿ ಸಚಿವ ಎನ್.ಚೆಲುವರಾಯಸ್ವಾಮಿ, ಸ್ಥಳ: ಮೈಸೂರು ಒನ್ ಮೈದಾನ್ ಡಾಕ್ಟರ್ಸ್ ಕಾರ್ನರ್, ಗೋಕುಲಂ 3ನೇ ಹಂತ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ:** ನಾಗರಾಜ್ ತಲಕಾಡು ವಿರಚಿತ "ಬುದ್ಧಭಾರತ ಕಾವ್ಯ" ಕಾವ್ಯ ಬಿಡುಗಡೆ ಮತ್ತು ಸಂವಾದ, ಅಧ್ಯಕ್ಷತೆ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ. ವಿಜಯಕುಮಾರಿ ಕರಿಕಲ್, ಕಾವ್ಯ ಬಿಡುಗಡೆ: ಹಿರಿಯ ರಂಗಕರ್ಮಿ ಪ್ರೊ.ಉಮೇಶ್, ಕಾವ್ಯ ನಿರ್ವಚನ: ಪ್ರಾಧ್ಯಾಪಕಿ ಪ್ರೊ. ಲೋಲಾಕ್ಷಿ, ಉಪಸ್ಥಿತರು: ಪ್ರಾಧ್ಯಾಪಕರಾದ ಪ್ರೊ. ನಂಜಯ್ಯ ಹೊಂಗನೂರು, ಡಾ.ರವೀಂದ್ರನಾಥ್, ಲೇಖಕಿ ಡಾ.ಸೌಮ್ಯ, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಅನ್ವೇಷಣಾ ಸೇವಾ ಟ್ರಸ್ಟ್:** ಅರಸು ಚುಟುಕು ಹಿಲಾಲುಗಳು ಕೃತಿ ಲೋಕಾರ್ಪಣೆ ಸಮಾರಂಭ, ಕೃತಿ ಲೋಕಾರ್ಪಣೆ: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ: ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ. ಶಿವಣ್ಣ, ಉದ್ಘಾಟನೆ : ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ, ಕೃತಿ ಕುರಿತು ಮಾತನಾಡುವವರು : ಮೈಸೂರು ವಿವಿ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥ ಮುಜಾಫರ್ ಅಸ್ಸಾದಿ, ಮುಖ್ಯ ಅತಿಥಿಗಳು : ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವಲಯ ಅಧ್ಯಕ್ಷ ಬಿ.ಆರ್. ನಟರಾಜ್ ಜೋಯಿಸ್, ಟ್ರಸ್ಟ್ ಅಧ್ಯಕ್ಷ ಡಾ. ಎಂ.ಜಿ.ಆರ್. ಅರಸ್, ಅಮರನಾಥ ರಾಜೇ ಅರಸ್, ಸ್ಥಳ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಗ್ರೀನ್ ಗ್ರಾಮೀಣಾಭಿವೃದ್ಧಿ ಮತ್ತು ತರಬೇತಿ ಸಂಸ್ಥೆ:** ಡಾ.ದ.ರಾ.ಬೇಂದ್ರೆ ನೆನಪು, ಕವಯತ್ರಿ ಶ್ರೀಮತಿ ನಾಗಮ್ಮ ರಚಿಸಿರುವ 'ಜೀವನ ಯಾನ' ಕವನ ಸಂಕಲನ ಲೋಕಾರ್ಪಣೆ ಹಾಗೂ ಸಾಧಕರಿಗೆ ಸನ್ಮಾನ, ಉದ್ಘಾಟನೆ: ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕೃತಿ ಬಿಡುಗಡೆ: ಡಾ.ಹೆಚ್.ಎಸ್.ಸುಧಾ, ಕೃತಿ ಕುರಿತು ಮಾತನಾಡುವವರು: ಯೂನಿವರ್ಸಲ್ ಅಕಾಡೆಮಿ ಅಧ್ಯಕ್ಷ ಪ್ರಕಾಶ್ ಜಿ.ಎಸ್. ಹಳ್ಳಿ, ಮುಖ್ಯ ಅತಿಥಿಗಳು: ಡಾ. ಕೆ. ರಘುರಾಂ ವಾಜಪೇಯಿ, ಡಾ.ಎ.ಎಸ್.ಚಂದ್ರಶೇಖರ್, ಗಣೇಶ್ ಪ್ರಸಾದ್, ಲತಾ ಮೋಹನ್, ಪ್ರಭುಸ್ವಾಮಿ, ಸ್ಥಳ: ಹಿರಿಯ ನಾಗರಿಕರ ಹಗಲು ಯೋಗ ಕ್ಷೇಮ ಕೇಂದ್ರ, ನಿಮಿಷಾಂಬನಗರ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್:** ಪ್ರತಿಜ್ಞಾವಿಧಿ ಸ್ವೀಕಾರ, ಮುಖ್ಯ ಅತಿಥಿಗಳು: ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪ್ರಸಾದ್, ಡಾ.ಮಧು, ಅಧ್ಯಕ್ಷತೆ: ಜೆಎಸ್‌ಎಸ್ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಮಹೇಶ್, ಸ್ಥಳ: ರಾಜೇಂದ್ರ ಶತಮಾನೋತ್ಸವ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 11ಕ್ಕೆ.

■ **ಸುಯೋಗ್ ಆಸ್ಪತ್ರೆ :** ಮೆದುಳಿನ ಸ್ಟ್ರೋಕ್ ಘಟಕ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಅಧ್ಯಕ್ಷತೆ : ಶಾಸಕ ಸಾ.ರಾ.ಮಹೇಶ್, ಪ್ರಾಸ್ತಾವಿಕ ಭಾಷಣ: ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ.ಯೋಗಣ್ಣ, ಮುಖ್ಯ ಅತಿಥಿಗಳು: ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ನ್ಯೂರೋ ಸರ್ಜನ್ ಡಾ. ರಾಜೇಶ್, ಡಾ. ರೂಪಾ ಶೇಷಾದ್ರಿ, ಡಾ. ಸುಹಾಸ್, ಸ್ಥಳ: ಸುಯೋಗ್ ಆಸ್ಪತ್ರೆ ಸಭಾಂಗಣ, ರಾಮಕೃಷ್ಣನಗರ, ಸಂಜೆ 5ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಕಡಾಂಬಿ ಪದ್ಮ ಮೆಮೋರಿಯಲ್ ಟ್ರಸ್ಟ್:** 'ಮಂಕುತಿಮ್ಮನ ಕಗ್ಗ' ಪ್ರವಚನ, ಸಂಜೆ 6ರಿಂದ ಗೀತಗಾಯನ, ಸಂಜೆ 6.30ರಿಂದ ಪ್ರವಚನ, ಸ್ಥಳ: ಗಣಪತಿ ದೇವಸ್ಥಾನ 'ಐ' ಬ್ಲಾಕ್, ರಾಮಕೃಷ್ಣನಗರ.

ಸುತ್ತೂರಿನಲ್ಲಿಂದು

■ **ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ:** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಶ್ರೀ ಉಕ್ಕಿನಕಂತೆ ಮಠದ ಶ್ರೀ ಸಾಂಬಸದಾಶಿವ ಸ್ವಾಮಿಗಳು, ಉದ್ಘಾಟನೆ : ಜಿಪಂ ಸಿಇಓ ಬಿ.ಆರ್. ಪೂರ್ಣಿಮಾ, ಅತಿಥಿಗಳು: ಎಡಿಸಿ ಡಾ.ಬಿ.ಎಸ್.ಮಂಜುನಾಥಸ್ವಾಮಿ, ಸ್ಥಳ: ಸುತ್ತೂರು, ಸಂಜೆ 6.30ಕ್ಕೆ.

ಗ್ರೂಪ್-ಡಿ ಹುದ್ದೆಗಳಿಗೆ ಅರ್ಜಿ ಆಹ್ವಾನ

ಮೈಸೂರು,ಜು.27–ನಂಜನಗೂಡು ತಾಲೂಕು ಕಾನೂನು ಸೇವಾ ಸಮಿತಿಯಿಂದ ಸಮಿತಿ ಕಚೇರಿಯಲ್ಲಿ ದಲಾಯತ್ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಆ.4ರೊಳಗಾಗಿ ಅರ್ಜಿ ಸಲ್ಲಿಸಲು ತಿಳಿಸಿದೆ. ಅರ್ಜಿ ಸಲ್ಲಿಸುವ ಆಸಕ್ತರು ನಿವೃತ್ತ ಸರ್ಕಾರಿ ಗ್ರೂಫ್–ಡಿ ನೌಕರರು ಅಥವಾ ಎಸ್‌ಎಸ್.ಎಲ್.ಸಿ ಉತ್ತೀರ್ಣರಾಗಿರಬೇಕು. ಮಾಸಿಕ ಸಂಚಿತ ವೇತನ 10,887 ರೂಗಳು ನೀಡಲಾಗುವುದು. ಆಸಕ್ತ ನಿವೃತ್ತ ಸರ್ಕಾರಿ ನೌಕರರು ಅಥವಾ ಅರ್ಹ ಅಭ್ಯರ್ಥಿಗಳು ತಮ್ಮ ವೈಯಕ್ತಿಕ ವಿವರಗಳೊಂದಿಗೆ ಸ್ವ ಅಕ್ಷರದಿಂದ ಭರ್ತಿ ಮಾಡಿದ ಅರ್ಜಿಗಳನ್ನು, ಸದಸ್ಯ ಕಾರ್ಯದರ್ಶಿಗಳು, ತಾಲ್ಲೂಕು ಕಾನೂನು ಸೇವಾ ಸಮಿತಿ, ನ್ಯಾಯಾಲಯಗಳ ಆವರಣ ಊಟಿ ರಸ್ತೆ, ನಂಜನಗೂಡು–571301 ಇಲ್ಲಿಗೆ ಅರ್ಜಿ ಸಲ್ಲಿಸಬಹುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕಾಮಗಾರಿ ವಿಭಾಗ, ಮೈಸೂರು

ಸಂ.: ಕರಾಸಾ/ಕಾನಿಅ/ಮೈ/ಕಿಅ/231/2022–23 ದಿನಾಂಕ: 26.07.2022

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂ: 02/03/04/05/06/07/08/09/10/2022–23

ಕರ್ನಾಟಕ ಲೋಕೋಪಯೋಗಿ ಇಲಾಖೆ / ಸಿ.ಪಿ.ಡಬ್ಲ್ಯೂ.ಡಿ ನಲ್ಲಿ ನೋಂದಾಯಿತರಾಗಿರುವ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆಳಗಿನ ಕಾಮಗಾರಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಪ್ರಕಟಣೆ ಸಂ. 02, 03 ಮತ್ತು 05ಕ್ಕೆ ಶೇಖಡವಾರು ಟೆಂಡರ್ ಮತ್ತು ಪ್ರಕಟಣೆ ಸಂ. 01, 04, 06, 07, 08, 09 ಮತ್ತು 10ಕ್ಕೆ ಐಟಂವಾರು ಟೆಂಡರ್ ಆಹ್ವಾನಿಸಲಾಗಿದೆ.
ಅರ್ಹ ಗುತ್ತಿಗೆದಾರರು ವೆಬ್‌ಸೈಟ್ https://eproc.karnataka.gov.in ನಲ್ಲಿ ಪ್ರಕಟಿಸಿದಂತೆ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದು.

ಕ್ರ. ಸಂ.	ಕೆಲಸದ ಹೆಸರು	ಟೆಂಡರ್ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಮುಂಗಡ ಠೇವಣಿ ಮೊತ್ತ
1	ಹೆಚ್.ಡಿ. ಕೋಟೆ ಬಸ್ ಘಟಕದ ಮುಂಭಾಗದಲ್ಲಿ ನೌಕರರ ವಸತಿಗೃಹಗಳನ್ನು ನಿರ್ಮಿಸುವ ಕಾಮಗಾರಿ (ಮೊದಲನೇ ಮಹಡಿ–1&2 ಬ್ಲಾಕ್). (2ನೇ ಕರೆ)	ರೂ. 44.49	ರೂ. 88,980.00
2	ಚಾಮರಾಜನಗರ ಬಸ್ ನಿಲ್ದಾಣದಲ್ಲಿನ ಶೌಚಾಲಯಗಳ ದುರಸ್ತಿ ಕಾಮಗಾರಿ. (ಪರಿಶಿಷ್ಟ ಜಾತಿಗೆ ಮೀಸಲಿಡಲಾಗಿದೆ).	ರೂ. 4.47	ರೂ. 5,588.00
3	ಗುಂಡ್ಲುಪೇಟೆ ಬಸ್ ನಿಲ್ದಾಣದಲ್ಲಿನ ಶೌಚಾಲಯಗಳ ದುರಸ್ತಿ ಕಾಮಗಾರಿ.	ರೂ. 4.47	ರೂ. 11,175.00
4	ಮಂಡ್ಯ ಬಸ್ ನಿಲ್ದಾಣದಲ್ಲಿನ ಶೌಚಾಲಯಗಳ ದುರಸ್ತಿ ಕಾಮಗಾರಿ.	ರೂ. 8.04	ರೂ. 20,100.00
5	ಶ್ರೀರಂಗಪಟ್ಟಣ ಬಸ್ ನಿಲ್ದಾಣದಲ್ಲಿನ ಶೌಚಾಲಯಗಳ ದುರಸ್ತಿ ಕಾಮಗಾರಿ.	ರೂ. 4.46	ರೂ. 11,150.00
6	ಕೆ.ಆರ್. ಪೇಟೆ ಬಸ್ ನಿಲ್ದಾಣದಲ್ಲಿನ ಶೌಚಾಲಯಗಳ ದುರಸ್ತಿ ಕಾಮಗಾರಿ.	ರೂ. 7.14	ರೂ. 17,850.00
7	ಮೈಸೂರಿನ ಕುವೆಂಪುನಗರ ಬಸ್ ಘಟಕದ ದಕ್ಷಿಣ ದಿಕ್ಕಿನಲ್ಲಿ ಕುಸಿದು ಬಿದ್ದಿರುವ ಸುತ್ತುಗೋಡೆಯನ್ನು ಪುನರ್ ನಿರ್ಮಿಸುವುದು.	ರೂ. 8.27	ರೂ. 20,675.00
8	ಸುಬ್ರಮಣ್ಯ ಬಸ್ ನಿಲ್ದಾಣದಲ್ಲಿನ ಶೌಚಾಲಯಗಳ ದುರಸ್ತಿ ಕಾಮಗಾರಿ. (ಪರಿಶಿಷ್ಟ ಪಂಗಡಕ್ಕೆ ಮೀಸಲಿಡಲಾಗಿದೆ).	ರೂ. 8.04	ರೂ. 10,050.00
9	ಧರ್ಮಸ್ಥಳ ಬಸ್ ನಿಲ್ದಾಣದಲ್ಲಿನ ಶೌಚಾಲಯಗಳ ದುರಸ್ತಿ ಕಾಮಗಾರಿ. (ಪರಿಶಿಷ್ಟ ಜಾತಿಗೆ ಮೀಸಲಿಡಲಾಗಿದೆ).	ರೂ. 8.04	ರೂ. 10,050.00

(1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **24.08.2022.** (2) ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ವಿವರಗಳನ್ನು ದಿನಾಂಕ: **04.08.2022**ರ ನಂತರ ಪಡೆಯಬಹುದು. (3) ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಕ.ರಾ.ರ.ಸಾ. ನಿಗಮ, ಮೈಸೂರು, ನೆಲ್ಸನ್ ಮಂಡೇಲ ರಸ್ತೆ, ಬನ್ನಿಮಂಟಪ, ಮೈಸೂರು ಇಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂ.: **0821–2498828.**

ಸಹಿ/–, ಕಾರ್ಯನಿರ್ವಾಹಕ ಅಭಿಯಂತರರು
ಕಾಮಗಾರಿ ವಿಭಾಗ, ಮೈಸೂರು

ವಾಸಾಸಂಇ/ವಾಪ್ರ/ಎಲ್‌ಸಿ/1518/2022–23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಕ್ಕರೆ ಅದೇ ಸ್ವರ್ಗ

ವೈದ್ಯರು : ನನ್ನ ಕ್ಲಿನಿಕ್ ವೇಳೆ ಸಂಜೆ ನಾಲ್ಕರಿಂದ ಏಳು ಎಂದು ನಿಮಗೆ ತಿಳಿದಿಲ್ಲವೇ?

ರೋಗಿ : ಗೊತ್ತಿದೆ ಡಾಕ್ಟ್ರೆ, ಆದರೆ ನನ್ನನ್ನು ಕಚ್ಚಿದ ನಾಯಿಗೆ ಗೊತ್ತಿಲ್ವಲ್ಲ?!

ಮೈಸೂರು ಮಿತ್ರ

ಗುರುವಾರ, 28 ಜುಲೈ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

'ಮುಗ್ಧತೆ' ಹಾಗೂ 'ಆತ್ಮ ವಿಶ್ವಾಸ' ಜೀವನದಲ್ಲಿ ಇರಬೇಕಾದ ಎರಡು ಅಂಶಗಳು. ಇವುಗಳಿಂದ ಜೀವನದಲ್ಲಿ ಯಶಸ್ಸು ನಿಶ್ಚಿತ. –ಮಾರ್ಕ್‌ಟ್ವೈನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಪುಣ್ಯವಂತ ಮಾಡಿದ್ದೇ ಯಾಗ, ವೈದ್ಯ ಹೇಳಿದ್ದೇ ರೋಗ

ನಿಮ್ಮ ಪತ್ರಗಳು

ಸಿಟಿ ಬಸ್‌ಗಳ ಅವ್ಯವಸ್ಥೆ ಗಮನಿಸಿ

ಮಾನ್ಯರೆ,

ನಾನು ಪ್ರತಿದಿನ ಮೈಸೂರು ನಗರ ಸಾರಿಗೆ ಬಸ್ಸಿನಲ್ಲಿ ಪ್ರಯಾಣಿಸುತ್ತೇನೆ. ಮೈಸೂರು ನಗರದಲ್ಲಿ ನಗರ ಸಾರಿಗೆ ಬಸ್ಸುಗಳ ಕೊರತೆಯಿಂದಾಗಿ ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆಯನ್ನು ಶಾಸಕರ ಗಮನಕ್ಕೆ ತರಬಯಸುತ್ತೇನೆ.

ಕುವೆಂಪುನಗರ ಘಟಕಕ್ಕೆ ಸೇರಿದ ನಗರ ಸಾರಿಗೆ ಬಸ್ಸುಗಳಾದ ಜೆ.ಪಿ.ನಗರ ಕೊನೆಯ ನಿಲ್ದಾಣದಿಂದ ಚಾಮುಂಡಿಪುರಂ, ರಾಮಸ್ವಾಮಿ ವೃತ್ತ, ದಾಸಪ್ಪ ವೃತ್ತ, ಒಂಟಿಕೊಪ್ಪಲು ಮಾರ್ಗವಾಗಿ ಎಲ್ ಅಂಡ್ ಟಿ ಗೆ ತೆರಳುತ್ತಿದ್ದ ಮಾರ್ಗಸಂಖ್ಯೆ 10ಎ, ಜೆ.ಪಿ.ನಗರ ಕೊನೆಯ ನಿಲ್ದಾಣದಿಂದ ಚಾಮುಂಡಿಪುರಂ, ರಾಮಸ್ವಾಮಿ ವೃತ್ತ, ಕೆ.ಆರ್. ಆಸ್ಪತ್ರೆ ಮಾರ್ಗವಾಗಿ ನಗರ ಬಸ್ ನಿಲ್ದಾಣಕ್ಕೆ ತೆರಳುತ್ತಿದ್ದ ಮಾರ್ಗ ಸಂಖ್ಯೆ 11ಆರ್, ನಗರ ಬಸ್ ನಿಲ್ದಾಣದಿಂದ ವರ್ತುಲ ರಸ್ತೆ ಮೂಲಕ ಗೆಜ್ಜಗಳ್ಳಿಗೆ ತೆರಳುತ್ತಿದ್ದ ಮಾರ್ಗ ಸಂಖ್ಯೆ 11 ಆರ್‌ಜಿ ಮತ್ತು ಜೆ.ಪಿ.ನಗರ ಕೊನೆ ನಿಲ್ದಾಣದಿಂದ ಅಶೋಕ ವೃತ್ತದ (ಬಲ್ಲಾಳ್ ವೃತ್ತ) ಮಾರ್ಗವಾಗಿ ವಿವೇಕಾನಂದ ನಗರಕ್ಕೆ ತೆರಳುತ್ತಿದ್ದ ಮಾರ್ಗಸಂಖ್ಯೆ 62 ಆರ್‌ಜೆ ಮತ್ತು ಸಾತಗಳ್ಳಿ ಘಟಕದ ಮಾರ್ಗಸಂಖ್ಯೆ 11ಆರ್ ಎರಡು ವರ್ಷಗಳ ಹಿಂದೆಯೇ ಸ್ಥಗಿತವಾಗಿದ್ದು ಇದುವರೆವಿಗೂ ಕಾರ್ಯಾಚರಣೆಗೊಳ್ಳುತ್ತಿಲ್ಲ. ಇದರಿಂದಾಗಿ ಪ್ರಯಾಣಿಕರಿಗೆ ಪ್ರತಿದಿನವೂ ಬಹಳ ತೊಂದರೆಯಾಗುತ್ತಿದೆ. ನಿಗದಿತ ಸಮಯಕ್ಕೆ ತಮ್ಮ ಕಾರ್ಯಸ್ಥಾನಗಳಿಗೆ ತಲುಪಲು ಸಾಧ್ಯವಾಗುತ್ತಿಲ್ಲ. ಮಾಸಿಕ ಪಾಸ್ ಇದ್ದರೂ ಪ್ರಯಾಣಿಕರು ದುಬಾರಿ ಹಣ ತೆತ್ತು ಆಟೋದಲ್ಲಿ ತೆರಳುವಂತಾಗಿದೆ. ಈ ಬಗ್ಗೆ ಅನೇಕ ಬಾರಿ ಪತ್ರಿಕೆಗಳ ಮೂಲಕ ಸಂಬಂಧಪಟ್ಟವರ ಗಮನ ಸೆಳೆದಿದ್ದರೂ ಯಾವುದೇ ಪ್ರಯೋಜನವಾಗಿರುವುದಿಲ್ಲ.

ಬೆಳಗಿನ ಸಮಯದಲ್ಲಿ ಗೊಬ್ಬಳಿಮರ ನಿಲ್ದಾಣದಲ್ಲಿ ಬಹಳ ಜನದಟ್ಟಣೆಯಿರುತ್ತದೆ. ಕೆಲವು ಬಸ್ಸುಗಳು ಜೆ.ಪಿ.ನಗರ ಕೊನೆಯ ನಿಲ್ದಾಣದಿಂದ ಭರ್ತಿಯಾಗಿ ಬರುವ ಕಾರಣ ಗೊಬ್ಬಳಿಮರ ಬಸ್ ನಿಲ್ದಾಣದಲ್ಲಿ ನಿಲುಗಡೆ ನೀಡುತ್ತಿಲ್ಲ. ಪ್ರಯಾಣಿಕರು ಬಸ್ ಹತ್ತುತ್ತಾರೆಂದು ಚಾಲಕರು ನಿಲ್ದಾಣದಿಂದ ಮುಂದೆ ಹೋಗಿ ನಿಲ್ಲಿಸುತ್ತಿದ್ದಾರೆ. ಬಸ್ಸು ಹತ್ತಲು ಪ್ರಯಾಣಿಕರು ಬಸ್ಸಿನ ಹಿಂದೆ ಓಡಬೇಕಾಗಿದೆ. ಇದರಿಂದ ಅನಾಹುತಗಳು ಸಂಭವಿಸುವ ಸಾಧ್ಯತೆಗಳಿವೆ. ಕುವೆಂಪುನಗರ ಘಟಕದ ಮಾರ್ಗ ಸಂಖ್ಯೆ 11ಎ ಬಸ್ಸು (ಕೆಎ–09 ಎಫ್ 4515) ಗೊಬ್ಬಳಿಮರ ನಿಲ್ದಾಣದಲ್ಲಿ ಬೆಳಗಿನ ಸಮಯ ದಿನಾಂಕ 19.07.2022 ಮತ್ತು 21.07.2022 ರಂದು ನಿಲುಗಡೆ ನೀಡಿರುವುದಿಲ್ಲ.

ಆದಕಾರಣ ಶಾಸಕರು ಇತ್ತ ಗಮನಹರಿಸಿ ಆದಷ್ಟು ಶೀಘ್ರ ಸ್ಥಗಿತವಾಗಿರುವ ಬಸ್ಸುಗಳನ್ನು ಮರುಕಾರ್ಯಾಚರಣೆಗೊಳಿಸಬೇಕು ಮತ್ತು ಬಸ್ಸುಗಳ ಆಗಮನದ ಬಗ್ಗೆ ಮಾಹಿತಿ ನೀಡುವ ಐಟಿಎಸ್ ಫಲಕವನ್ನು ಚಾಲನೆಗೊಳಿಸಬೇಕೆಂದು ಸಂಬಂಧಪಟ್ಟ ಸಾರಿಗೆ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕೆಂದು ಕಳಕಳಿಯಿಂದ ಮನವಿ ಮಾಡುತ್ತೇನೆ.

– ಪರಶಿವಮೂರ್ತಿ, ಜೆ.ಪಿ.ನಗರ, ಮೈಸೂರು.

ಕೆ.ಆರ್. ವೃತ್ತದ ಪಾದಚಾರಿ ಮಾರ್ಗ ಸರಿಪಡಿಸಿ



ಮಾನ್ಯರೆ,

ಮೈಸೂರಿನ ಹೃದಯಭಾಗದ ಕೆ.ಆರ್. ವೃತ್ತದ ಪಾದಚಾರಿ ಮಾರ್ಗವು ಕೆಲ ಖಾಸಗಿ ಮಂದಿಯ ಬಟ್ಟೆ, ಚಪ್ಪಲಿ ಮತ್ತಿತರೇ ವ್ಯಾಪಾರಿಗಳಿಂದ ತುಂಬಿಹೋಗಿದೆ. ಈ ಕಡೆಯಿಂದ ದೇವರಾಜ ಮಾರುಕಟ್ಟೆಗೆ ದಾಟುವ ಪರಿಯಂತೂ ಅಸಾಧ್ಯವೆನಿಸಿದೆ. ರಸ್ತೆ ಕಿರಿದಾಗಿರುವುದರಿಂದ ಇವೆಲ್ಲದರ ಮಧ್ಯೆ ತಿರುಗಾಡುವುದೇ ಕಷ್ಟವಾಗಿದೆ.

ಈ ಚಿತ್ರದಲ್ಲಿ ಕಾಣುವಂತೆ ಮಧ್ಯೆ ಇರುವ ತಡೆಗೋಡೆ, ಎರಡೂ ಕಡೆಗಳಲ್ಲಿ ವಾಹನಗಳು, ಜತೆಗೆ ಸಣ್ಣಪುಟ್ಟ ವ್ಯವಹಾರದ ಅಂಗಡಿಗಳು, ಪಾದಚಾರಿ ಮಾರ್ಗವನ್ನು ಅತಿಕ್ರಮಣ ಮಾಡಿರುವ ಕೆಲ ಅಂಗಡಿಗಳು ಸೇರಿವೆ. ಇನ್ನೂ ಹಬ್ಬ ಹರಿದಿನ ವಿಶೇಷ ಸಂದರ್ಭಗಳಲ್ಲಿ ಇಲ್ಲಂತೂ ಕಾಲಿಡಲು ಜಾಗವೇ ಇರುವುದಿಲ್ಲ. ಈಗಾಗಲೇ ಇರುವ ಸುರಂಗಮಾರ್ಗವನ್ನು, ಸರಿಯಾದ ಸುರಕ್ಷತೆ ಇರದಿದ್ದರಿಂದ ಯಾರೂ ಸಹ ಬಳಸುತ್ತಿಲ್ಲ. ಈ ಬಗ್ಗೆ ಮೈಸೂರು ಮಹಾನಗರಪಾಲಿಕೆ, ಜಿಲ್ಲಾಡಳಿತ ಗಮನಹರಿಸಿ ಆದಷ್ಟು ಬೇಗ ಕ್ರಮ ಕೈಗೊಳ್ಳಬೇಕೆಂದು ಮನವಿ.

–ಎ.ಎಸ್.ಗೋವಿಂದೇಗೌಡ, ಅರೇನಹಳ್ಳಿ ಗ್ರಾಮ, ಪಿರಿಯಾಪಟ್ಟಣ ತಾ.

ಮೈಸೂರು ವಿಮಾನ ನಿಲ್ದಾಣಕ್ಕೆ ರಾಜರ್ಷಿ ಶ್ರೀ ನಾಲ್ವಡಿ ಹೆಸರು ಸ್ವಾಗತಾರ್ಹ

ಮಾನ್ಯರೆ,

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿರುವ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ವಿಮಾನ ನಿಲ್ದಾಣ ಎಂದು ನಾಮಕರಣ ಮಾಡಿರುವುದು ಸ್ವಾಗತಾರ್ಹ.

ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಮೈಸೂರು ಸೇರಿದಂತೆ ಕರ್ನಾಟಕದಾದ್ಯಂತ ಅಪಾರ ಕೊಡುಗೆ ನೀಡಿದ್ದಾರೆ. ಸಹಕಾರ ಕ್ಷೇತ್ರ, ಶಿಕ್ಷಣ ಕ್ಷೇತ್ರ, ಆರ್ಥಿಕ ಕ್ಷೇತ್ರ, ಕೈಗಾರಿಕಾ ಕ್ಷೇತ್ರ, ಆರೋಗ್ಯ, ಸಂಗೀತ ಕ್ಷೇತ್ರ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ಇವರ ಕೊಡುಗೆ ಅಪಾರ. ಮೈಸೂರು ಬ್ಯಾಂಕ್ ಸ್ಥಾಪನೆ, ಗಂಧದ ಎಣ್ಣೆ, ಉಕ್ಕಿನ, ಕಾಗದ, ರೇಷ್ಮೆ ಕಾರ್ಖಾನೆಗಳು, ಜನರಿಗೆ ಹತ್ತಾರು ಆಸ್ಪತ್ರೆ, ಶಿಕ್ಷಣ ಸಂಸ್ಥೆಗಳು. ಕೃಷ್ಣರಾಜಸಾಗರದಂತಹ ಬೃಹತ್ ಅಣೆಕಟ್ಟೆ, ಜೋಗ ಜಲಪಾತದಿಂದ ವಿದ್ಯುತ್ ಉತ್ಪಾದನೆ ಯೋಜನೆಗಳು ಮರೆಯುವಂತಿಲ್ಲ. ಸಮಾಜದಲ್ಲಿ ಕಳಂಕಪ್ರಾಯವಾಗಿದ್ದ ದೇವದಾಸಿ ಪದ್ಧತಿ, ಬೆತ್ತಲೆ ಸೇವೆಯಂತಹ ಅನಿಷ್ಟ ಪದ್ಧತಿಗಳನ್ನೂ ತಪ್ಪಿಸಿದ್ದಾರೆ.

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು 'ರಾಜರ್ಷಿ' ಎಂದು ಕರೆದು ಮೈಸೂರು ಸಂಸ್ಥಾನವನ್ನು 'ರಾಮರಾಜ್ಯ' ಎಂದು ಶ್ಲಾಘಿಸಿದ್ದರು. ಈ ಕಾರಣದಿಂದ ಇವರನ್ನು ಆದರ್ಶ ದೊರೆ ಎನ್ನುತ್ತಿದ್ದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಸಂಪುಟದ ಸದಸ್ಯರಿಗೆ ಇತಿಹಾಸಕಾರರಿಗೆ, ಸಾಹಿತಿಗಳಿಗೆ ಎಲ್ಲಾ ಜನಪ್ರತಿನಿಧಿಗಳಿಗೆ ಹಾಗೂ ವಿಮಾನ ನಿಲ್ದಾಣಕ್ಕೆ ನಾಮಕರಣ ಮಾಡಲು ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು.

– ಟಿ. ರವೀಂದ್ರ ರಾಜಣ್ಣ, ಅಶೋಕಪುರಂ, ಮೈಸೂರು.

ಕಾಮನ್ ಮ್ಯಾನ್ ಚೀಫ್ ಮಿನಿಸ್ಟರ್

ಬೊಮ್ಮಾಯಿ ರಾಜ್ಯಭಾರಕ್ಕೆ ಒಂದು ವರ್ಷ



ಬೆಂಗಳೂರು, ಜು.27–ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ಅನಿರೀಕ್ಷಿತವಾಗಿ ಮುಖ್ಯಮಂತ್ರಿ ಹುದ್ದೆ ಅಲಂಕರಿಸಿದ್ದ ಬಸವರಾಜ ಬೊಮ್ಮಾಯಿ ಅವರಿಗೆ ಇಂದಿಗೆ (ಜು.28) ವರ್ಷದ ಸಂಭ್ರಮ.

ಜನಪರ ಆಡಳಿತದ ಘೋಷಣೆಯೊಂದಿಗೆ ಆಡಳಿತದ ಚುಕ್ಕಾಣಿ ಹಿಡಿದ ಅವರು ಹಲವಾರು ಸವಾಲುಗಳ ನಡುವೆ 'ಕಾಮನ್‌ಮ್ಯಾನ್ ಚೀಫ್ ಮಿನಿಸ್ಟರ್' ಎಂದು ಕರೆಯುವಷ್ಟರ ಮಟ್ಟಿಗೆ ಆಡಳಿತ ನಡೆಸಿದ್ದಾರೆ.

ಯಡಿಯೂರಪ್ಪ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದು ಖಚಿತವಾದಾಗ ಈ ಸ್ಥಾನಕ್ಕಾಗಿ ಘಟಾನುಘಟಿಗಳೇ ಪೈಪೋಟಿ ನಡೆಸಿದ್ದರು. ಆದರೆ ಯಾರೂ ನಿರೀಕ್ಷಿಸದಂತೆ ಹೈಕಮಾಂಡ್, ಯಡಿಯೂರಪ್ಪ ಸಂಪುಟದಲ್ಲಿ ಗೃಹ ಸಚಿವರಾಗಿದ್ದ ಬಸವರಾಜ ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿಯಾಗಿ ಘೋಷಿಸಿತು.

ಯಡಿಯೂರಪ್ಪರಂತಹ ನಾಯಕನ ಸ್ಥಾನ ತುಂಬುವ ಸವಾಲನ್ನು ಸ್ವೀಕರಿಸಿದ ಬೊಮ್ಮಾಯಿ ಅವರ ಒಂದು ವರ್ಷದ ಆಡಳಿತ ಹುಲ್ಲು ಹಾಸಾಗಿರಲಿಲ್ಲ. ಹೆಜ್ಜೆ–ಹೆಜ್ಜೆಗೂ ಸವಾಲುಗಳನ್ನು ಎದುರಿಸುವಂತಹ ಪರಿಸ್ಥಿತಿ ಅವರಿಗೆ ಒದಗಿ ಬಂತಾದರೂ, ಎಲ್ಲಾ ಸವಾಲುಗಳನ್ನು ಜಾಣ್ಮೆಯಿಂದ ನಿಭಾಯಿಸುತ್ತಾ ಬಂದಿದ್ದಾರೆ. ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಸಂದರ್ಭ ಕೆಲವರಿಂದ ಉಂಟಾಗಿದ್ದ ಅತೃಪ್ತಿಯನ್ನು ಶಮನಗೊಳಿಸಿ ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗುವ ಚಾಕಚಕ್ಯತೆಯನ್ನು ಮೆರೆದರು. ಅದರ ಫಲ ಎಂಬಂತೆ ಬಿಜೆಪಿಯ ಯಾವೊಬ್ಬ ಶಾಸಕರೂ ಬೊಮ್ಮಾಯಿ ವಿರುದ್ಧ ಭಿನ್ನರಾಗ ಹಾಡಿಲ್ಲ. ಮೊದಲಿಗೆ ಸಂಪುಟ ರಚನೆ ಸವಾಲು ಎದುರಾದಾಗ ಹೈಕಮಾಂಡ್ ಮಾರ್ಗದರ್ಶನ ಪಡೆದು ಜಾತಿ ಹಾಗೂ ಪ್ರದೇಶವಾರು ತಕ್ಕ ಮಟ್ಟಿಗೆ ಸಮತೋಲನ ಕಾಪಾಡಿಕೊಂಡು ಸಂಪುಟ ರಚಿಸುವಲ್ಲಿ ಯಶಸ್ವಿಯಾದರು. ಸಚಿವ ಸ್ಥಾನ ವಂಚಿತರಾದ ಕೆಲವರ ಅಸಮಾಧಾನವನ್ನೂ ಕೂಡ ತ್ವರಿತಗತಿಯಲ್ಲೇ ಶಮನಗೊಳಿಸಿ ಆ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋದರು. ಖಾತೆ ಹಂಚಿಕೆ ಸವಾಲನ್ನೂ ಕೂಡ ಹೈಕಮಾಂಡ್ ನೆರವಿನೊಂದಿಗೆ ನಿಭಾಯಿಸಿದರು. ಇದೀಗ ಸಂಪುಟ ವಿಸ್ತರಣೆ ಸವಾಲು ಅವರ ಮುಂದಿದೆ.

ಚುನಾವಣೆ ವರ್ಷವಾದ್ದರಿಂದ ಜನಪರ ಬಜೆಟ್ ಘೋಷಿಸಬೇಕಾದ ಅನಿವಾರ್ಯತೆಯಲ್ಲಿದ್ದ ಬೊಮ್ಮಾಯಿ ಅವರಿಗೆ ಕೊರೊನಾ ಲಾಕ್‌ಡೌನ್‌ನಿಂದ ಉಂಟಾಗಿದ್ದ ನಷ್ಟವೇ ತೊಡಕಾಗಿ ಪರಿಣಮಿಸಿತ್ತು. ಆದರೂ ಜನಪರವಾದ, ತೆರಿಗೆಯ ಹೊರೆ ಇಲ್ಲದ, ಹೆಚ್ಚು ಟೀಕೆಗೆ ಗುರಿಯಾಗದಂತೆ ಚೊಚ್ಚಲ ಬಜೆಟ್ ಮಂಡಿಸಿ ಶಹಭಾಸ್‌ಗಿರಿ ಪಡೆದರು.

ಯಡಿಯೂರಪ್ಪ ಕಾಲದಲ್ಲೇ ಆರಂಭವಾಗಿದ್ದ ಪಂಚಮಸಾಲಿ ಮೀಸಲಾತಿ ಕಿಚ್ಚು ಬೊಮ್ಮಾಯಿ ಸರ್ಕಾರಕ್ಕೆ ದೊಡ್ಡ ಸವಾಲಾಗಿತ್ತು. ಪಂಚಮಸಾಲಿ ಜನಾಂಗದ ಜೊತೆಗೆ ವಿವಿಧ ಸಮುದಾಯಗಳೂ ಕೂಡ ಮೀಸಲಾತಿ ಕೂಗನ್ನು ಗಟ್ಟಿಗೊಳಿಸಿದ್ದವು. ವರ್ಷದ ಆಡಳಿತದಲ್ಲಿ ಬೊಮ್ಮಾಯಿ ಅವರಿಗೆ ಈ ಮೀಸಲಾತಿ ಹೋರಾಟವೇ ದೊಡ್ಡ ಸವಾಲಾಗಿ ಕಂಡು ಬಂತಾದರೂ, ಈ ಹೋರಾಟ ಉಲ್ಬಣಿಸದಂತೆ ಬಸವರಾಜ ಬೊಮ್ಮಾಯಿ ತಕ್ಕಮಟ್ಟಿಗೆ ನಿಭಾಯಿಸುತ್ತಾ ಬಂದಿದ್ದಾರೆ.

ಸರ್ಕಾರಕ್ಕೆ ಮತ್ತೊಂದು ಸವಾಲೆಂದರೆ ಪುನೀತ್ ರಾಜಕುಮಾರ್ ಅವರ ಅಕಾಲಿಕ ಮರಣ. ಈ ಹಿಂದೆ ಡಾ.ರಾಜಕುಮಾರ್ ನಿಧನರಾದಾಗ ಉಂಟಾಗಿದ್ದಂತಹ ಘರ್ಷಣೆಗಳು ಆಗದಂತೆ ಅಪ್ಪು ಅಂತ್ಯಕ್ರಿಯೆಯನ್ನು ಸುಸೂತ್ರವಾಗಿ ನಡೆಸಬೇಕಾದ ಸವಾಲು ಬೊಮ್ಮಾಯಿ ಸರ್ಕಾರಕ್ಕೆ ಒದಗಿ ಬಂದಿತ್ತು. ಆದರೆ ಅಪ್ಪು ಅಂತಿಮ ದರ್ಶನ ಹಾಗೂ ಅಂತ್ಯಕ್ರಿಯೆ ಸುಸೂತ್ರವಾಗಿ ನಡೆಯಲು ವ್ಯವಸ್ಥಿತವಾಗಿ ಯೋಜನೆ ರೂಪಿಸಿ ಈ ಸವಾಲನ್ನು ಅಚ್ಚುಕಟ್ಟಾಗಿ ಬೊಮ್ಮಾಯಿ ನಿಭಾಯಿಸಿದ್ದರು.

ಬೊಮ್ಮಾಯಿ ಸರ್ಕಾರಕ್ಕೆ ಹಿಜಾಬ್ ವಿವಾದ ದೊಡ್ಡ ತಲೆನೋವಾಗಿ ಪರಿಣಮಿಸಿತ್ತು. ಈ ವಿವಾದದಲ್ಲಿ ಪರ–ವಿರೋಧ ಪ್ರತಿಭಟನೆಗಳ ಜೊತೆಗೆ ಕೆಲ ಸಂಘಟನೆಗಳು ವಿವಾದ ಉಲ್ಬಣವಾಗುವಂತೆ ವರ್ತಿಸಿದ ಪರಿಣಾಮ ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆ ಕಾಪಾಡುವುದು ಅತೀ ದೊಡ್ಡ ಸವಾಲಾಗಿತ್ತು. ಈ ವಿವಾದ ಮಿತಿ ಮೀರುತ್ತಿರುವುದನ್ನು ಮನಗಂಡ ಸಿಎಂ, ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳಿಗೂ ರಜೆ ಘೋಷಿಸುವ ಮೂಲಕ ವಿವಾದಕ್ಕೆ ತಾತ್ಕಾಲಿಕವಾಗಿ ಬ್ರೇಕ್ ಹಾಕಿದರು. ಹೈಕೋರ್ಟ್‌ನಿಂದ ತೀರ್ಪು ಹೊರ ಬೀಳುವವರೆಗೂ ಪಿಯು ಕಾಲೇಜುಗಳನ್ನು ತೆರೆಯದೆ, ತೀರ್ಪು ಹೊರ ಬಿದ್ದ ನಂತರ ವಿವಾದ ತಣ್ಣಗಾಗಿ ನಿಟ್ಟುಸಿರು ಬಿಡುವಂತಾಯಿತು.

ಹಿಜಾಬ್ ವಿವಾದ ಮುಗಿಯಿತು ಅನ್ನುವಷ್ಟರಲ್ಲೇ ಹುಟ್ಟಿಕೊಂಡದ್ದು ಹಲಾಲ್‌ಕಟ್ –ಜಟಕಾಕಟ್ ವಿವಾದ. ಇದಂತೂ ಸರಕಾರಕ್ಕೆ ಭಾರೀ ತಲೆನೋವಾಗಿ ಪರಿಣಮಿಸಿದ್ದು, ಹಲಾಲ್ ಮಾಂಸ ಖರೀದಿಸದಂತೆ ಹಿಂದೂ ಸಂಘಟನೆಗಳು ಅಭಿಯಾನ ನಡೆಸಿದರೆ ಮತ್ತೊಂದೆಡೆ ಬುದ್ಧಿಜೀವಿಗಳು ಹಲಾಲ್‌ಕಟ್ ಪರ ನಿಂತಿದ್ದರು. ಈ ವಿವಾದದಲ್ಲಿ ಯಾವುದೇ ರೀತಿಯ ಆತುರ ತೋರದೇ ಸೌಮ್ಯವಾಗಿಯೇ ನಿಭಾಯಿಸುವಲ್ಲಿ ಬೊಮ್ಮಾಯಿ ಯಶಸ್ವಿಯಾದರು. ಅದಾಗುತ್ತಿದ್ದಂತೆಯೇ ಆಜಾನ್ ವಿವಾದ ತಲೆ ಎತ್ತಿತ್ತು. ಈ ಸಂದರ್ಭದಲ್ಲಿ ಸರಕಾರದ ಪ್ರತಿನಿಧಿಗಳು ಮುಸ್ಲಿಂ ಮುಖಂಡರ ಸಭೆ ನಡೆಸಿ ಸುಪ್ರೀಂ ಕೋರ್ಟ್ ಆದೇಶವನ್ನು ಮನವರಿಕೆ ಮಾಡಿಸುವ ಮೂಲಕ ವಿವಾದ ತಣ್ಣಗಾಗುವಂತೆ ಮಾಡಿದರು.

ರಾಜ್ಯದಲ್ಲಿ ಯಾವುದೇ ವಿವಾದವಿಲ್ಲದೆ ಆಡಳಿತ ಸಾಗುತ್ತದೆ ಎಂದಾಗಲೇ ಧುತ್ ಎಂದು ಎದುರಾಗಿದ್ದು ಪಠ್ಯ ಪರಿಷ್ಕರಣೆ ವಿವಾದ. ಪಠ್ಯ ಪರಿಷ್ಕರಣೆ ಬಗ್ಗೆ ವಿಪಕ್ಷಗಳು ಮಾತ್ರವಲ್ಲದೇ ಕೆಲ ಸ್ವಾಮೀಜಿಗಳೂ ಕೂಡ ಸರಕಾರದ ವಿರುದ್ಧ ಧ್ವನಿ ಎತ್ತಲಾರಂಭಿಸಿದರು. ಈ ವೇಳೆ ಸರಕಾರವು ಪಠ್ಯ ಪುಸ್ತಕ ಪರಿಷ್ಕರಣೆ ಸಮಿತಿಯಿಂದ ಕೈಬಿಡಲ್ಪಟ್ಟಿದ್ದ ಪ್ರಮುಖ ಅಂಶಗಳನ್ನು ಸೇರ್ಪಡೆಗೊಳಿಸಿದ್ದಲ್ಲದೇ ರೋಹಿತ್ ಚಕ್ರವರ್ತಿ ಅಧ್ಯಕ್ಷತೆಯ ಪಠ್ಯ ಪರಿಷ್ಕರಣೆ ಸಮಿತಿಯನ್ನು ರದ್ದು ಮಾಡುವ ಮೂಲಕ ವಿವಾದದ ಕಿಡಿಯನ್ನು ಶಮನಗೊಳಿಸಿತು.

ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ದಿನದಿಂದ ಈವರೆಗೂ ಒಂದಲ್ಲಾ ಒಂದು ಸವಾಲು ಎದುರಾದರೂ ಕೂಡ ಸೌಮ್ಯ ಸ್ವಭಾವದಿಂದಲೇ ಅದನ್ನೆಲ್ಲಾ ಎದುರಿಸಿ ಹೆಜ್ಜೆ ಇಡುತ್ತಿರುವ ಬಸವರಾಜ ಬೊಮ್ಮಾಯಿ, ತನ್ನ ಸರಳತೆಯಿಂದ ಹಾಗೂ ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗುವ ಸ್ವಭಾವದಿಂದ 'ಕಾಮನ್ ಮ್ಯಾನ್ ಚೀಫ್ ಮಿನಿಸ್ಟರ್' ಎಂದು ಬಿಜೆಪಿ ಶಾಸಕರು, ಮುಖಂಡರಿಂದ ಕರೆಯಲ್ಪಡುತ್ತಿದ್ದಾರೆ.

ಸವಾಲುಗಳ ಸರಮಾಲೆ

- ಸಂಪುಟ ರಚನೆ
- ಹಲವರ ಭಿನ್ನರಾಗ
- ಚೊಚ್ಚಲ ಬಜೆಟ್ ಮಂಡನೆ
- ಪಂಚಮಸಾಲಿ ಹೋರಾಟ
- ಪುನೀತ್ ರಾಜ್‌ಕುಮಾರ್ ನಿಧನ
- ಹಿಜಾಬ್, ಹಲಾಲ್ ಕಟ್ ಜಟಕಾ ಕಟ್, ಆಜಾನ್
- ಪಠ್ಯಪುಸ್ತಕ ಪರಿಷ್ಕರಣೆ




ದೊಡ್ಡಹೆಜ್ಜೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಆಯ್ಕೆಯಾದ ಸುಭಾಷ್, ಶಾಸಕ ಜಿ.ಟಿ.ದೇವೇಗೌಡ, ಅವರ ಪತ್ನಿ ಕೆ.ಲಲಿತಾ ಜಿ.ಟಿ.ದೇವೇಗೌಡ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಅವರನ್ನು ಅಭಿನಂದಿಸಿದರು. ಈ ವೇಳೆ ಮುಖಂಡರಾದ ಚಂದ್ರಶೇಖರ್, ಬಸವಲಿಂಗಯ್ಯ, ವೆಂಕಟೇಗೌಡ, ಪ್ರಭಾಕರ್, ಬಸವರಾಜ್, ಹನುಮರಾಜೇಗೌಡ ಉಪಸ್ಥಿತರಿದ್ದರು.

ನ್ಯಾಷನಲ್ ಹೆರಾಲ್ಡ್ ಪ್ರಕರಣ
ಸೋನಿಯಾಗಾಂಧಿ ವಿಚಾರಣೆ ಅಂತ್ಯ

ನವದೆಹಲಿ: ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಎದುರಿಸುತ್ತಿದ್ದ ವಿಚಾರಣೆ ಇಂದು ಅಂತ್ಯಗೊಂಡಿದೆ. ಕಳೆದ 3 ದಿನಗಳಿಂದ 12 ಗಂಟೆಗಳ ಕಾಲ ನಡೆದ ವಿಚಾರಣೆಯಲ್ಲಿ 100ಕ್ಕೂ ಅಧಿಕ ಪ್ರಶ್ನೆಗಳನ್ನು ಕೇಳಲಾಗಿದೆ ಎಂದು ಮೂಲಗಳು ತಿಳಿಸಿವೆ. ಇಂದು ದೆಹಲಿಯ ಇಡಿ ಕಚೇರಿಗೆ ಹಾಜರಾಗಿದ್ದ 75 ವರ್ಷದ ಸೋನಿಯಾ ಗಾಂಧಿ ಅವರನ್ನು 3 ಗಂಟೆಗಳ ಕಾಲ ವಿಚಾರಣೆ ನಡೆಸಲಾಗಿದೆ. ಸದ್ಯ ಮತ್ತೆ ಅವರಿಗೆ ಸಮನ್ಸ್ ನೀಡಿಲ್ಲ. ಮಂಗಳವಾರವೂ ಇ.ಡಿ ಕಚೇರಿಗೆ ಆಗಮಿಸಿದ್ದ ಸೋನಿಯಾ ಗಾಂಧಿ ಅವರು 6 ಗಂಟೆಗಳ ಕಾಲ ಇ.ಡಿ ಅಧಿಕಾರಿಗಳ ವಿಚಾರಣೆಯನ್ನು ಎದುರಿಸಿದ್ದರು. ಈ ವೇಳೆ ಅವರು ತುಂಬಾ ವೇಗವಾಗಿ ಕೇಳಿದ್ದ ಎಲ್ಲ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದರು ಎಂದು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಸೋನಿಯಾ ಗಾಂಧಿ ಅವರನ್ನು ನ್ಯಾಷನಲ್ ಹೆರಾಲ್ಡ್ ಪತ್ರಿಕೆ ಮತ್ತು ತನಿಖೆಯಲ್ಲಿರುವ ಯಂಗ್ ಇಂಡಿಯನ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಭಾಗಿಯಾಗಿರುವ ಬಗ್ಗೆ ಸುಮಾರು 30 ಪ್ರಶ್ನೆಗಳನ್ನು ಕೇಳಿದ್ದರು. ಸೋನಿಯಾ ಅವರ ಹೇಳಿಕೆಗಳನ್ನು ರಾಹುಲ್ ಗಾಂಧಿ ಅವರ ಹೇಳಿಕೆಗಳೊಂದಿಗೆ ಹೊಂದಿಸಲಾಗಿದ್ದು, ಯಂಗ್ ಇಂಡಿಯನ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಇಬ್ಬರೂ ಹೆಚ್ಚಿನ ಶೇವಣಿದಾರರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿಚಾರಣೆ ವೇಳೆ ಪುತ್ರಿ ಪ್ರಿಯಾಂಕಾ ಗಾಂಧಿ ಅವರೊಂದಿಗೆ ವೈದ್ಯಕೀಯ ಸಿಬ್ಬಂದಿ ಕೂಡ ಇದ್ದರು.



ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್ ಅವರನ್ನು ಚಾಮುಂಡೇಶ್ವರಿ ಕ್ಷೇತ್ರದ ನಿಕಟಪೂರ್ವ ಅಧ್ಯಕ್ಷ ಎನ್.ಅರುಣ್‌ಕುಮಾರ್‌ಗೌಡ ಅಭಿನಂದಿಸಿದರು. ಈ ವೇಳೆ ರೈತ ಮೋರ್ಚಾ ಅಧ್ಯಕ್ಷ ದೇವರಾಜ್, ಮಾಜಿ ಪ್ರಧಾನ ಕಾರ್ಯದರ್ಶಿ ಸೋಮಶೇಖರ್, ಪಾಲಿಕೆ ಸದಸ್ಯ ರಮೇಶ್, ಹಿಂದುಳಿದ ವರ್ಗ ಮೋರ್ಚಾ ಅಧ್ಯಕ್ಷ ಜೋಗಿ ಮಂಜು, ಮಾಧ್ಯಮ ಪ್ರಮುಖ ರಾಜಕುಮಾರ್, ಮುಖಂಡರಾದ ರವಿ ರಾಜಕೀಯ, ಕುಮಾರಗೌಡ, ಮಂಜುನಾಥ್, ಈರೇಗೌಡ, ಕೃಷ್ಣಕುಮಾರ್, ಸುಬ್ರಮಣ್ಯ, ನಾಣಿ ಇದ್ದರು.

ನಾಳೆ ಗಂಧದ ಉರುಸ್

ಮೈಸೂರು, ಜು.27(ಆರ್‌ಕೆಬಿ)– ಮೈಸೂರಿನ ಅಶೋಕ ರಸ್ತೆಯ ಮಿಲಾದ್ ಪಾರ್ಕ್‌ನಲ್ಲಿ ಜು.29ರಂದು ಮಧ್ಯಾಹ್ನ 3 ಗಂಟೆಗೆ ಹಜ್ರತ್ ನವಾಬ್ ಹೈದರ್ ಅಲಿಖಾನ್ ಬಹದ್ದೂರ್ ಅವರ 246ನೇ ಗಂಧದ ಉರುಸ್ ಆಚರಣೆ ನಡೆಯಲಿದೆ.

ಲಷ್ಕರ್ ಮೊಹಲ್ಲಾದ ಹಜ್ರತ್ ಟಿಪ್ಪು ಸುಲ್ತಾನ್ ವೆಲ್‌ಫೇರ್ ಮತ್ತು ಉರುಸ್ ಸಮಿತಿಯಿಂದ ಗಂಧದ ಉರುಸ್ ಮಧ್ಯಾಹ್ನ 3ರಿಂದ ಸಂಜೆ 5ರವರೆಗೆ ನಡೆಯಲಿದೆ. ಮೈಸೂರಿನ ಸರ್ಖಾಜಿ ಹಜ್ರತ್ ಅಲ್‌ಹಾಜ್ ಮೌಲಾನಾ ಮೊಹಮ್ಮದ್ ಉಸ್ಮಾನ್ ಷರೀಫ್, ಅಶೋಕ ರಸ್ತೆ ದಾರುಲ್ ಖಾಜ ಮಸೀದಿ ಅಜ್ಜುಮನ ಮುಖ್ಯ ಖಾಜಿ ಮೌಲಾನಾ ಮುಫ್ತಿ ಮೊಹಮ್ಮದ್ ಸಮಿ–ಉಲ್ ಹುದಾ ಸಮದಿ, ಟಿಪ್ಪುಸುಲ್ತಾನ್ ವಕ್ಫ್ ಎಸ್ಟೇಟ್ ಅಧ್ಯಕ್ಷರೂ ಆದ ಶಾಸಕ ತನ್ವೀರ್‌ಸೇಠ್, ಮೈಸೂರು ಬಿಷಪ್ ರೆ.ಫಾ.ಕನ್ನಿಕದಾಸ್ ವಿಲಿಯಂ ಅಂತೋಣಿ, ಶ್ರೀ ಬಸವಲಿಂಗ ಸ್ವಾಮೀಜಿ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿದೆ ಬೆಳಗ್ಗೆ 9 ಗಂಟೆಗೆ ಪವಿತ್ರ ಕುರಾನ್ ಪಠಣೆ, ನಂತರ ಶುಕ್ರವಾರದ ಪ್ರಾರ್ಥನೆ, ಗಂಧದ ಉರುಸ್ ನಂತರ ಭಕ್ತಾದಿಗಳ ತಂಡ ವಾಹನಗಳೊಂದಿಗೆ ಸಂಜೆ 6 ಗಂಟೆಗೆ ಶ್ರೀರಂಗಪಟ್ಟಣದ ಟಿಪ್ಪು ಗೋರಿ ತಲುಪಿ, ಅಲ್ಲಿ ಗಂಧವನ್ನು ಲೇಪಿಸಿ, ಹೂವಿನ ಚಾದರ ಹರಡಿ ಕಾರ್ಯಕ್ರಮ ಪೂರ್ಣಗೊಳಿಸಲಾಗುವುದು ಎಂದು ತಿಳಿಸಿದ್ದಾರೆ.

ಗ್ರಾಪಂ ಸಿಬ್ಬಂದಿ ಮನ ಬಂದಂತೆ ವರ್ಗಾವಣೆ
ತಾಪಂ ಇಓ ವಿರುದ್ಧ ಆರೋಪ

ಮೈಸೂರು, ಜು.27(ಎಂಟಿವೈ)– ಕೆ.ಆರ್. ನಗರ ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿ ಹೆಚ್.ಕೆ.ಸತೀಶ್, ಮನ ಬಂದಂತೆ ಗ್ರಾಪಂ ಸಿಬ್ಬಂದಿಗಳನ್ನು ವರ್ಗಾಯಿಸುತ್ತಿರುವುದರಿಂದ ಗ್ರಾಮೀಣ ಪ್ರದೇಶದ ಅಭಿವೃದ್ಧಿ ಕ್ಷೀಣಿಸುತ್ತಿದೆ ಎಂದು ಹೆಬ್ಬಾಳ ಗ್ರಾಪಂ ಸದಸ್ಯ ಹೆಚ್.ಎಸ್.ಜಲೇಂದ್ರ ಆರೋಪಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಆರು ತಿಂಗಳಲ್ಲಿ ಗ್ರಾಮ ಪಂಚಾಯಿತಿ ಪಿಡಿಓ ಹಾಗೂ ಇನ್ನಿತರ ಸಿಬ್ಬಂದಿಗಳ ಮೂರ್ನಾಲ್ಕು ಬಾರಿ ವರ್ಗಾಯಿಸುತ್ತಿದ್ದಾರೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ನಿಯಮಗಳನ್ನು ಪಾಲನೆ ಮಾಡುತ್ತಿಲ್ಲ. ಬದಲಾಗಿ ತಮಗೆ ಬೇಕಾದ ರೀತಿಯಲ್ಲಿ ಅಧಿಕಾರಿಗಳನ್ನು ಒಂದು ಪಂಚಾಯಿತಿಯಿಂದ ಇನ್ನೊಂದು ಗ್ರಾಪಂಗೆ ವರ್ಗಾಯಿಸುತ್ತಿದ್ದಾರೆ. ಇದೊಂದು ದಂಧೆಯಾಗಿದೆ. ಇದರಿಂದಾಗಿ ಗ್ರಾಪಂಗಳಲ್ಲಿ ಅಭಿವೃದ್ಧಿ ಕಾರ್ಯ ನಡೆಯುತ್ತಿಲ್ಲ. ಆದ್ದರಿಂದ ಸಂಬಂಧಿಸಿದ ಹಿರಿಯ ಅಧಿಕಾರಿಗಳು ಕೂಡಲೇ ಹೆಚ್.ಕೆ.ಸತೀಶ್ ಅವರನ್ನು ಅಮಾನತುಗೊಳಿಸಿ, ತನಿಖೆ ನಡೆಸಬೇಕೆಂದು ಒತ್ತಾಯಿಸಿದರು. ಗೋಷ್ಠಿಯಲ್ಲಿ ರೈತ ಸಂಘದ ಮುಖಂಡರಾದ ಕುಬೇರಾಚಾರ್ಯ, ವರಕೋಡು ಕೃಷ್ಣೇಗೌಡ ಇದ್ದರು.

ಕಮಿಷನ್, ಕಮ್ಯುನಲ್ ಕರ್ನಾಟಕ ಮಾಡಿದ್ದೇ ಬಿಜೆಪಿ ಸರ್ಕಾರದ ಸಾಧನೆ

- ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ವಾಗ್ದಾಳಿ
- ಬಿಜೆಪಿ ಸರ್ಕಾರದ ಜನೋತ್ಸವಕ್ಕೆ ವ್ಯಂಗ್ಯೋಕ್ತಿ
- ಭ್ರಷ್ಟಾಚಾರದಲ್ಲಿ ಕರ್ನಾಟಕ ನಂ.1
- ಜನಸಾಮಾನ್ಯರಿಗೆ ಜಿಎಸ್‌ಟಿಯಿಂದ ಬರೆ



ಮೈಸೂರು,ಜು.27(ಎಂಟಿವೈ)– ಕೋಟ್ಯಾಂತರ ರೂ. ಹಣ ನೀಡಿ ಆಪರೇಷನ್ ಕಮಲದ ಮೂಲಕ 17 ಶಾಸಕರನ್ನು ಖರೀದಿಸಿ ಕಲ್ಯಾಣ ಕರ್ನಾಟಕ ಮಾಡುವ ಭರವಸೆಯೊಂದಿಗೆ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರಕ್ಕೆ ಕಮಿಷನ್ ಹಾಗೂ ಕಮ್ಯುನಲ್ ಕರ್ನಾಟಕ ಮಾಡಿದ ಅಪಕೀರ್ತಿ ಸಲ್ಲುತ್ತದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಮಾಜಿ ಸಂಸದ ಆರ್.ಧ್ರುವನಾರಾಯಣ್ ಕಿಡಿಕಾರಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ಕೋಮುಭಾವನೆ ಕಾಪಾಡಿದ್ದ ಕೀರ್ತಿ ಕರ್ನಾಟಕಕ್ಕೆ ಸೇರಿತ್ತು. ಆದರೆ, ಬಿಜೆಪಿ ಸರ್ಕಾರ ಬಂದ ಮೇಲೆ ಕೋಮು ಭಾವನೆಗೆ ಧಕ್ಕೆ ತಂದು ಅಶಾಂತಿ ವಾತಾವರಣ ನಿರ್ಮಿಸಿದ ಸಾಧನೆ ಬಿಜೆಪಿಗೆ ಸಲ್ಲುತ್ತದೆ. ಅಧಿಕಾರಕ್ಕೆ ಬಂದು 3 ವರ್ಷ 4 ತಿಂಗಳಾಗಿದೆ. ಯಾವುದೇ ಬೆಳವಣಿಗೆಯಾಗಿಲ್ಲ. ಇನ್ನು 8 ತಿಂಗಳಿಗೆ ಚುನಾವಣೆ ಬರುತ್ತದೆ. ಏನೂ ಸಾಧನೆ ಮಾಡದಿದ್ದರೂ ಯಾವ ಪುರುಷಾರ್ಥಕ್ಕಾಗಿ ಜನೋತ್ಸವ ಮಾಡುತ್ತೀರಿ. ಪ್ರಣಾಳಿಕೆಯಲ್ಲಿ ಕೊಟ್ಟ ಭರವಸೆಯಲ್ಲಿ ಶೇ.80ರಷ್ಟು ಕಾರ್ಯಕ್ರಮ ಈಡೇರಿಸಿಲ್ಲ. ನೀವು ಕೆಲಸ ಮಾಡಿದ್ದರೆ, ಜನರೇ ಗುರುತಿಸುತ್ತಿದ್ದರು. ಆದರೆ ಈಗ ನೀವೇ ಬೆನ್ನು ತಟ್ಟಿಕೊಳ್ಳಲು ಜನೋತ್ಸವ ಮಾಡುತ್ತಿದ್ದೀರಾ ಎಂದು ಕಿಡಿಕಾರಿದರು.

ಬಸವಣ್ಣನವರ ವಚನಗಳ ಪಠಿಸುವ ಮೂಲಕ ಮುಖ್ಯಮಂತ್ರಿಯಾದ ಬಸವರಾಜ ಬೊಮ್ಮಾಯಿ ಕರ್ನಾಟಕವನ್ನು ಕಲ್ಯಾಣ ಕರ್ನಾಟಕ ಮಾಡುತ್ತೇನೆ ಎಂದು ಹೇಳಿ ರಾಜ್ಯವನ್ನು ಕಮಿಷನ್ ಸರ್ಕಾರ ಮಾಡಿದರು. ಬಿಜೆಪಿಯ ಈ ಮೂರು ವರ್ಷದ ಅಧಿಕಾರ ಅವಧಿಯಲ್ಲಿ ಕೇಂದ್ರದಿಂದ ರಾಜ್ಯಕ್ಕೆ ಬರಬೇಕಿದ್ದ ಸುಮಾರು 921 ಕೋಟಿ ತೆರಿಗೆ ಪಾಲು ಪಡೆಯುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಹೇಳಿದರು.

ಇಂದಿರಾ ಕ್ಯಾಂಟಿನ್‌ಗೆ ಅನುದಾನ ಕಡಿತ: ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗ ಜಾರಿಗೊಳಿಸಿದ ಅನೇಕ ಜನಪರ ಯೋಜನೆಗಳಿಗೆ ಇಂದಿನ ಸರ್ಕಾರ ಅನುದಾನ ಕಡಿತ ಮಾಡಿದೆ. ರಾಜ್ಯದ ಅಸಂಖ್ಯಾತ ಬಡಜನರ ಹಸಿವು ನೀಗಿಸಲು ಆರಂಭ ಮಾಡಿದ ಇಂದಿರಾ ಕ್ಯಾಂಟೀನ್‌ನಿಂದ ಒಂದು ದಿನಕ್ಕೆ ಸುಮಾರು 5 ಲಕ್ಷಕ್ಕೂ ಅಧಿಕ ಜನ ಉಪಯೋಗ ಪಡೆದುಕೊಳ್ಳುತ್ತಿದ್ದರು. ಬೊಮ್ಮಾಯಿ ಸರ್ಕಾರ ಅದಕ್ಕೂ ಅನುದಾನ ನೀಡಲು ಹಿಂಜರಿಯುತ್ತಿರುವ ಕಾರಣ ಫಲಾನುಭವಿಗಳ ಸಂಖ್ಯೆ 1 ಲಕ್ಷಕ್ಕೆ ಬಂದು ತಲುಪಿದೆ ಎಂದರು.

ಕೋಮುವಾದ ಬಿತ್ತಿದರು: ಕರ್ನಾಟಕ ಸರ್ವಜನಾಂಗದ ಶಾಂತಿಯ ತೋಟ ಎಂದು ಹೇಳಲಾಗುತ್ತಿತ್ತು. ಈಗ ಕೋಮುವಾದ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಒಂದು ಧರ್ಮವನ್ನು ಗುರಿಯಾಗಿಸಿಕೊಂಡು ತೊಂದರೆ ನೀಡಲಾಗುತ್ತಿದೆ. ಸರ್ಕಾರಿ ನೇಮಕಾತಿಯಲ್ಲಿ ಸಾಕಷ್ಟು ಹಗರಣ ನಡೆಯುತ್ತಿದ್ದರೂ, ಸರ್ಕಾರ ಏನೂ ಕ್ರಮ ಕೈಗೊಳ್ಳುತ್ತಿಲ್ಲ. ಸರ್ಕಾರದ ಗುತ್ತಿಗೆ ಪಡೆಯಲು ಶೇ.40 ಕಮಿಷನ್ ನೀಡಬೇಕು ಎಂದು ಸ್ವತಃ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಆರೋಪ ಮಾಡಿದ್ದಾರೆ. ಪ್ರಧಾನಿ ಮೋದಿಗೆ ಪತ್ರ ಬರೆದಿದ್ದರು. ಈ ಕುರಿತು ಪ್ರಧಾನಿಗಳು ಒಂದೇ ಒಂದು ಮಾತಾಡಿಲ್ಲ. ಮೈಸೂರಿಗೆ ಮೋದಿ ಅವರನ್ನು ಕರೆತಂದಿದ್ದೇ ಇವರ ಸಾಧನೆ. ಮೋದಿ ಭೇಟಿಯಿಂದ ಮೈಸೂರಿಗೆ ಏನೂ ಪ್ರಯೋಜನವಾಗಿಲ್ಲ. ಆದರೆ 32 ಕೋಟಿ ರೂ. ಖರ್ಚು ಮಾಡಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಆಂತರಿಕ ಸಮೀಕ್ಷೆಯಲ್ಲಿ ರಾಜ್ಯ ನಂಬರ್ ಒನ್ ಭ್ರಷ್ಟ ಸರ್ಕಾರ ಎಂಬ ಕೀರ್ತಿ ಲಭಿಸಿದೆ. ಸಬ್‌ಇನ್ಸ್‌ಪೆಕ್ಟರ್ ಹುದ್ದೆ ಅಕ್ರಮದಲ್ಲಿ ಎಡಿಜಿಪಿ ಬಂಧನವಾಗಿದೆ. ಆ ದಂಧೆಯಲ್ಲಿ ಮೇನ್ ಕಿಂಗ್‌ಪಿನ್‌ಗಳನ್ನು ಕೈಬಿಟ್ಟಿದ್ದಾರೆ. ಅಧಿಕಾರಿಗಳನ್ನು ಬಲಿಪಶು ಮಾಡಿ, ಕಿಂಗ್‌ಪಿನ್ ರಕ್ಷಣೆ ಮಾಡಲು ಸರ್ಕಾರದ ಅಧೀನದಲ್ಲಿರುವ ಸಿಐಡಿ ಸಂಸ್ಥೆಯನ್ನು ಬಳಸಿಕೊಳ್ಳಲಾಗುತ್ತಿದೆ. 7200 ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲೂ ಭ್ರಷ್ಟಾಚಾರ ನಡೆದಿರುವುದು ಬೆಳಕಿಗೆ ಬಂದಿದೆ. ಈ ಎಲ್ಲವನ್ನು ಗಮನಿಸಿದರೆ ಯಾವುದೇ ನೇಮಕಾತಿ ಪಾರದರ್ಶಕವಾಗಿ ನಡೆದಿಲ್ಲ ಎಂದು ಹೇಳಿದರು.

ಭ್ರಷ್ಟಾಚಾರದಲ್ಲಿ ನಂ.1: ಕಳೆದ 3 ವರ್ಷಗಳಲ್ಲಿ ರಾಜ್ಯದ ಸಾಲದ ಪ್ರಮಾಣ 2 ಲಕ್ಷದಿಂದ 5 ಲಕ್ಷ ಕೋಟಿಗೆ ಏರಿಕೆಯಾಗಿದೆ. ಒಂದು ಸಮೀಕ್ಷೆ ಪ್ರಕಾರ ದೇಶದ ಭ್ರಷ್ಟಾಚಾರ ಪಟ್ಟಿಯಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ವಾಸ್ತವ ಈಗಿರುವಾಗ ನಮ್ಮ ಮುಖ್ಯಮಂತ್ರಿಗಳು ಜನೋತ್ಸವ ಕಾರ್ಯಕ್ರಮ ಮಾಡಲು ಹೊರಟಿರುವುದು ನಿಜಕ್ಕೂ ಹಾಸ್ಯಾಸ್ಪದ ಎಂದರು.

ಜಿಎಸ್‌ಟಿ ಬರೆ: ಜಿಎಸ್‌ಟಿಯನ್ನು ಅಗತ್ಯ ವಸ್ತುಗಳ ಮೇಲೆ ಜಾರಿಗೊಳಿಸುವ ಮೂಲಕ ಬಡ ಹಾಗೂ ಮಧ್ಯಮ ವರ್ಗದವರ ಮೇಲೆ ಹೊರೆ ಹಾಕಲಾಗಿದೆ. ಮೊಸರು ಸೇರಿದಂತೆ ದಿನಬಳಕೆ ವಸ್ತುಗಳ ಮೇಲೆ ಜಿಎಸ್‌ಟಿ ಹಾಕಿರುವುದರಿಂದ ಬೆಲೆ ಹೆಚ್ಚಾಗಿದೆ. ಮಲ್ಟಿನ್ಯಾಷನಲ್ ಕಂಪನಿಗೆ ವರದಾನವಾಗುವಂತಹ ನೀತಿಯನ್ನು ಕೇಂದ್ರ ಸರ್ಕಾರ ಅನುಸರಿಸುತ್ತಿದೆ ಎಂದು ಆರೋಪಿಸಿದರು. ಕರ್ನಾಟಕದಲ್ಲಿ ಪ್ರವಾಹದಿಂದ ಹಾನಿಗೊಳಗಾದ ಪ್ರದೇಶಕ್ಕೆ ಪರಿಹಾರ ಕೊಡಲಿಲ್ಲ. 12,719 ಎಕರೆ ಭೂಮಿಗೆ ಹಾನಿ, 3,332 ಎಕರೆ ತೋಟಗಾರಿಕಾ ಬೆಳೆ ನಾಶ, 62 ಜನ ಬಲಿಯಾಗಿದ್ದಾರೆ. ಸರಿಯಾದ ಪರಿಹಾರ ನೀಡುವಲ್ಲಿ ಕೇಂದ್ರ ಸರ್ಕಾರವೂ ಮುಂದಾಗಿಲ್ಲ. ರಾಜ್ಯದ ಸಂಸದರು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿ ಅನುದಾನ ಬಿಡುಗಡೆ ಮಾಡಿಸಲು ಮುಂದಾಗಿಲ್ಲ ಎಂದು ಕಿಡಿಕಾರಿದರು.

ಕ್ರಿಮಿನಲ್ ಪ್ರಕರಣ ಹೆಚ್ಚಳ: ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕ್ರಿಮಿನಲ್ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದೆ. 2022ರ ಫೆಬ್ರವರಿ ಅಂತ್ಯಕ್ಕೆ 3,40,542 ಪ್ರಕರಣ ದಾಖಲಾಗಿದೆ. ದಲಿತರು, ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ಹೆಚ್ಚಾಗಿದೆ. ಸಂಸದ ಪ್ರತಾಪಸಿಂಹ, ಶಾಸಕ ಸಿ.ಟಿ.ರವಿ ಸೇರಿದಂತೆ ಬಿಜೆಪಿ ಮುಖಂಡರ ಮೇಲೆ ಹೂಡಿದ್ದ 330 ಕ್ರಿಮಿನಲ್ ಪ್ರಕರಣವನ್ನು ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ರದ್ದು ಮಾಡಿಕೊಂಡಿದ್ದಾರೆ. ಸರ್ಕಾರದ ವಿರುದ್ಧ ಧ್ವನಿ ಎತ್ತುವವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ. ಮೇಕೆದಾಟು ಪಾದಯಾತ್ರೆ ನಡೆಸಿದ್ದರಿಂದ ನಮ್ಮ ಮೇಲೂ 3–4 ಕೇಸ್ ಹಾಕಿದ್ದಾರೆ. ಧ್ವನಿ ಅಡಗಿಸುವ ಕೆಲಸ ನಿರಂತರವಾಗಿ ನಡೆಯುತ್ತಿದೆ ಎಂದು ಆರೋಪಿಸಿದರು. ಗೋಷ್ಠಿಯಲ್ಲಿ ಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ ವಿಜಯಕುಮಾರ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಸೀತಾರಾಮು, ಅಯೂಬ್‌ಖಾನ್, ರಾಹುಲ್ ಕುಂಬ್ರಳ್ಳಿ ಹಾಜರಿದ್ದರು.

ನನ್ನ ಸ್ಪರ್ಧೆ ಹೈಕಮಾಂಡ್‌ಗೆ ಬಿಟ್ಟದ್ದು

ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಯಾವ ಕ್ಷೇತ್ರದಿಂದ ಸ್ಪರ್ಧಿಸುವಿರಿ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ನನ್ನ ಸ್ಪರ್ಧೆಯನ್ನು ಪಕ್ಷದ ಹೈಕಮಾಂಡ್ ನಿರ್ಧರಿಸಲಿದೆ. ಪಕ್ಷದ ವರಿಷ್ಠರು ಸೂಚಿಸುವ ಕ್ಷೇತ್ರದಿಂದ ನಾನು ಸ್ಪರ್ಧಿಸಲು ಸಿದ್ಧನಿದ್ದೇನೆ

–ಆರ್.ಧ್ರುವನಾರಾಯಣ, ಕೆಪಿಸಿಸಿ ಕಾರ್ಯಾಧ್ಯಕ್ಷ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

50 ಹುಟ್ಟುಹಬ್ಬ

ಚಾಮರಾಜ ಕ್ಷೇತ್ರದ ಮನೆ ಮಗ ಕೆ.ಹರೀಶ್‌ಗೌಡರ ಸಾರ್ಥಕ ಸೇವೆ



"ಕೊಟ್ಟ ಮಾತು, ಇಟ್ಟ ಹೆಜ್ಜೆ ಎಂದೂ ಹಿಂತೆಗೆಯುವುದಿಲ್ಲ"

ಇದು ಮೈಸೂರಿನ ಚಾಮರಾಜ ಕ್ಷೇತ್ರದ ಜನಸೇವಕನಾಗಿ ಗುರುತಿಸಿಕೊಂಡಿರುವ ಕೆ.ಹರೀಶ್‌ಗೌಡರ ದಿಟ್ಟ ಸಂಕಲ್ಪ. ಮೈಸೂರಿಗೆ ಮಹತ್ತರ ಕೊಡುಗೆ ನೀಡಿದ, ಪ್ರತಿಷ್ಠಿತ ಬಡಾವಣೆಗಳ ನಿರ್ಮಾಣಕ್ಕೆ ತಮ್ಮ ಕಾಣಿಕೆ ನೀಡಿರುವ, ಮೈಸೂರು ನಗರದಲ್ಲಿ ಈಗಲೂ ಅಪ್ಪಟ್ಟ ಹಳ್ಳಿ ಸೊಗಡಿನ ಕನ್ನೇಗೌಡನಕೊಪ್ಪಲಿನ ಎಂ.ಕೃಷ್ಣ ಹಾಗೂ ವೈ.ಸಿ.ಯಶೋದಮ್ಮ ದಂಪತಿಯ ಪುತ್ರ ಕೆ.ಹರೀಶ್‌ಗೌಡ, ಯಾವುದೇ ಅಧಿಕಾರವಿಲ್ಲದೆ ಒಂದೂವರೆ ದಶಕದಿಂದ ಜನ ಸೇವೆಯಲ್ಲಿ ತೊಡಗಿದ್ದಾರೆ. ಕೃಷಿಕ, ಉದ್ಯಮಿ, ಕುಸ್ತಿಪಟು, ಸಮಾಜ ಸೇವಕ, ಕ್ರೀಡಾ ಪ್ರೋತ್ಸಾಹಕ ಕೆ.ಹರೀಶ್‌ಗೌಡರು ದಣಿವರಿಯದ ಭಾವಜೀವಿ. ನಂಬಿದವರಿಗಾಗಿ ಎತ್ತಂತೆ ದುಡಿಯುವ ಇವರು ಮೇಲ್ನೋಟಕ್ಕೆ ಒರಟಾದರೂ ಮನಸ್ಸು ಮಲ್ಲಿಗೆಯಷ್ಟೆ ಮೃದು ಎನ್ನುವುದು ಹತ್ತಿರದವರ ಮಾತು. ರಾಜಕೀಯ ಚದುರಂಗದಾಟದಲ್ಲಿ ಬಡವಾದರೂ ಸಮಾಜ ಸೇವೆಯ ಅವರು ಶ್ರೀಮಂತಿಕೆ ಹೆಚ್ಚಿಸಿಕೊಂಡಿರುವುದು ಗಮನಾರ್ಹ.ಕ್ರೈಸ್ತ್ ಕಿಂಗ್ ಕಾನ್ವೆಂಟ್(ಸಿಕೆಸಿ)ನಲ್ಲಿ ಮಾಧ್ಯಮಿಕ, ಮರಿಮಲ್ಲಪ್ಪ ಮತ್ತು ಹಾರ್ಡ್ವಿಕ್ ಶಾಲೆಯಲ್ಲಿ ಹೈಸ್ಕೂಲ್ ಹಾಗೂ ಪದವಿಪೂರ್ವ ಶಿಕ್ಷಣ ಪಡೆದ ಕೆ.ಹರೀಶ್‌ಗೌಡ ಅವರು ಮಹಾರಾಜ ಕಾಲೇಜಿನಲ್ಲಿ ಬಿಎ ಮನಃಶಾಸ್ತ್ರ ಪದವಿ ಪಡೆದಿದ್ದಾರೆ. ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾಲಯದಲ್ಲಿ ಉದ್ಯೋಗಿಯಾಗಿದ್ದ ತಂದೆ ಎಂ.ಕೃಷ್ಣ ಅವರ ಅಕಾಲಿಕ ನಿಧನದಿಂದ ಇಡೀ ಕುಟುಂಬ ಕಂಗಾಲಾದಾಗ ಹರೀಶ್‌ಗೌಡರೇ ಜವಾಬ್ದಾರಿ ಹೊತ್ತರು. ಮೈಸೂರು ವಿವಿಯಲ್ಲಿ 1996ರಿಂದ 2010ರವರೆಗೆ ಸೇವೆ ಸಲ್ಲಿಸಿದ ಇವರು, ನಂತರದಲ್ಲಿ ಸಾಮಾಜಿಕ ಕಾರ್ಯಕ್ಕಿಳಿದರಲ್ಲದೆ ರಾಜಕೀಯ ರಂಗದಲ್ಲೂ ಒಡನಾಟ ಬೆಳೆಸಿಕೊಂಡರು.

ಜು.28ಕ್ಕೆ ಹುಟ್ಟುಹಬ್ಬ; ಬೃಹತ್ ಉದ್ಯೋಗ ಮೇಳ, ಸೇವಾಕಾರ್ಯ



ಭೀಮನ ಅಮಾವಾಸ್ಯೆ ದಿನ(ಜು.28) ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ ಅವರ 50ನೇ ಹುಟ್ಟುಹಬ್ಬದ ಸಂಭ್ರಮ. ಈ ಹಿನ್ನೆಲೆಯಲ್ಲಿ ಕೆ.ಹರೀಶ್‌ಗೌಡ ಸ್ನೇಹ ಬಳಗದ ವತಿಯಿಂದ ಅಂದು ಗೋಕುಲಂನ ಡಾಕ್ಟರ್ಸ್ ಕಾರ್ನರ್ ಮೈದಾನದಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ. ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಸೇರಿದಂತೆ ಸುತ್ತಮುತ್ತಲ ಜಿಲ್ಲೆಗಳ ಸಾವಿರಾರು ಮಂದಿ ಭಾಗವಹಿಸುವ ನಿರೀಕ್ಷೆ ಇದ್ದು, 5 ಸಾವಿರಕ್ಕೂ ಹೆಚ್ಚು ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವ ಗುರಿ ಹೊಂದಲಾಗಿದೆ. 130ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಪಾಲ್ಗೊಂಡು ಅರ್ಹ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲಾಗುವುದು. ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೊಮಾ, ಬಿಇ ಸೇರಿದಂತೆ ಇನ್ನಿತರ ಶಿಕ್ಷಣ ಪಡೆದಿರುವ 18ರಿಂದ 35 ವರ್ಷ ವಯಸ್ಸಿನೊಳಗಿನ ಯುವಕ-ಯುವತಿಯರು ಮೇಳದಲ್ಲಿ ಪಾಲ್ಗೊಂಡು ತಮ್ಮ ವಿದ್ಯಾರ್ಹತೆಗೆ ಅನುಗುಣವಾಗಿ ಉದ್ಯೋಗ ಗಿಟ್ಟಿಸಿಕೊಳ್ಳಬಹುದಾಗಿದೆ. ಇದರೊಂದಿಗೆ ಹುಟ್ಟುಹಬ್ಬದ ಅಂಗವಾಗಿ ಸಾಕಷ್ಟು ಸೇವಾ ಕಾರ್ಯಗಳನ್ನು ನಡೆಸಲು ಅಭಿಮಾನಿಗಳು ಸಿದ್ಧತೆ ಮಾಡಿಕೊಂಡಿದ್ದಾರೆ. ಬಡ ಮಕ್ಕಳಿಗೆ ನೋಟ್ ಪುಸ್ತಕ, ಪೆನ್ನು ಇನ್ನಿತರ ಪಠ್ಯ ಪರಿಕರಗಳು, ವೃದ್ಧಾಶ್ರಮ, ಅನಾಥಾಶ್ರಮಗಳಲ್ಲಿ ಸಿಹಿ ಊಟದ ವ್ಯವಸ್ಥೆ, ಬಡವರಿಗೆ ವಸ್ತ್ರ ವಿತರಣೆ ಸೇರಿದಂತೆ ವಿವಿಧ ಸೇವೆಗಳ ಮೂಲಕ ಹರೀಶ್ ಗೌಡರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಿದ್ದಾರೆ.

ಹರೀಶ್‌ಗೌಡರ ರಾಜಕೀಯ ಪ್ರವೇಶ

ಕೆ.ಹರೀಶ್‌ಗೌಡರು ರಾಜಕೀಯ ಹಿನ್ನೆಲೆಯುಳ್ಳ ಕುಟುಂಬದಿಂದ ಬಂದವರಲ್ಲ. ವಿವಿ ಉದ್ಯೋಗಿಯಾಗಿದ್ದ ಅವರ ತಂದೆ ಸೇರಿದಂತೆ ಮನೆಯವರಿಗೆ ರಾಜಕೀಯದ ಗಂಧ ಗಾಳಿ ಇಲ್ಲ,ಆಸಕ್ತಿಯೂ ಇರಲಿಲ್ಲ. ಆದರೆ ಕೆ.ಹರೀಶ್‌ಗೌಡ ಅವರಿಗೆ ಕಾಲೇಜು ಹಂತದಿಂದಲೂ ಸಂಘಟನೆ ಬಗ್ಗೆ ತುಂಬಾ ಒಲವು. ವಿದ್ಯಾರ್ಥಿ ಸಂಘಟನೆಯಲ್ಲಿದ್ದ ಅವರು, ಡಾ.ಅಂಬೇಡ್ಕರ್ ಜಯಂತಿ, ಗಾಂಧೀ ಜಯಂತಿ ಸೇರಿದಂತೆ ಮಹಾತ್ಮರ ಜನ್ಮೋತ್ಸವ ಹಾಗೂ ಇನ್ನಿತರ ಕಾರ್ಯಕ್ರಮಗಳನ್ನು ಸಂಘಟಿಸುತ್ತಿದ್ದರು. ಆಗಿನಿಂದಲೇ ಅವರಿಗೂ ತಿಳಿಯದಂತೆ ನಾಯಕತ್ವ ಗುಣ ರೂಢಿಸಿಕೊಂಡಿದ್ದರು. ಈ ನಡುವೆ ತಮ್ಮ ದೊಡ್ಡಪ್ಪನ ಮಗ ಪಾಲಿಕೆ ಚುನಾವಣೆಯಲ್ಲಿ ಸ್ಪರ್ಧಿಸಿದಾಗ ರಾಜಕೀಯ ಮಜಲುಗಳ ಅನುಭವವಾಯಿತು. ನಂತರದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ರಾಜಕೀಯ ಜೀವನ, ಸಾಧನೆಯಿಂದ ಪ್ರಭಾವಿತರಾಗಿ, ಅವರದೇ ರಾಜಕೀಯ ಪಕ್ಷದಿಂದ ಆರಂಭಿಸಿದ ಅವರು ಮಾನಸ ಗುರುವಾಗಿದ್ದ ಹೆಚ್.ಡಿ. ದೇವೇಗೌಡರ ಮಾರ್ಗದರ್ಶನದಲ್ಲಿ 9 ವರ್ಷಗಳ ಕಾಲ ಜೆಡಿಎಸ್‌ನಲ್ಲಿ ದುಡಿದರು. ನಗರಾಧ್ಯಕ್ಷರಾಗಿಯೂ ಮೈಸೂರಿನೆಲ್ಲೆಡೆ ಪಕ್ಷವನ್ನು ಸಂಘಟಿಸಿದರು. ಇವರ ಪ್ರೀತಿ ವಿಶ್ವಾಸಕ್ಕೆ ಕಟ್ಟುಬಿದ್ದು ಅಪಾರ ಸಂಖ್ಯೆಯ ಬೆಂಬಲಿಗರು ಜೆಡಿಎಸ್ ಸೇರಿ, ಪಕ್ಷವನ್ನು ಬಲಿಷ್ಠಗೊಳಿಸಿದರು. ಪಕ್ಷ ಸಂಘಟನೆಯನ್ನೇ ಮುಖ್ಯ ಗುರಿಯಾಗಿಸಿಕೊಂಡಿದ್ದ ಹರೀಶ್‌ಗೌಡರು, ಎಂದೂ ಪಕ್ಷದ ಹೆಸರನ್ನು ದುರುಪಯೋಗಪಡಿಸಿಕೊಂಡವರಲ್ಲ. ಪಕ್ಷದ ಮತ್ತ್ಯಾವ ಉನ್ನತ ಸ್ಥಾನವನ್ನೂ ಅಪೇಕ್ಷಿಸದೆ ಪಕ್ಷ ಬಲವರ್ಧನೆಗೆ ಹಗಲಿರುಳು ಶ್ರಮಿಸಿದರು. ಪಕ್ಷದ ಹೆಸರಿನಲ್ಲಿ ಹಲವು ಸಾಮಾಜಿಕ ಕಾರ್ಯಗಳನ್ನು ನಡೆಸುವ ಮೂಲಕ ಜನರಿಗೆ ಜೆಡಿಎಸ್ ಬಗ್ಗೆ ಭಾವನಾತ್ಮಕ ನಂಟನ್ನು ಗಟ್ಟಿಗೊಳಿಸಿದ್ದು ವಿಶೇಷ. ಬೃಹತ್ ಉದ್ಯೋಗ ಮೇಳ, ಸಾಮೂಹಿಕ ವಿವಾಹ ಮಹೋತ್ಸವ, ಕ್ರೀಡಾ ಸ್ಪರ್ಧೆ, ರಕ್ತದಾನ ಶಿಬಿರ ಹೀಗೆ ಹತ್ತಾರು ಸೇವಾ ಕಾರ್ಯಗಳನ್ನು ಪಕ್ಷ ಹಾಗೂ ಪಕ್ಷದ ನಾಯಕರ ಹೆಸರಿನಲ್ಲಿ ಏರ್ಪಡಿಸಿ, ಬಹುತೇಕ ಮೈಸೂರಿನ ಮನೆ-ಮನ ಮುಟ್ಟಿದ್ದರು.



ಸಿದ್ದರಾಮಯ್ಯರ ಸಮ್ಮುಖದಲ್ಲಿ ಕಾಂಗ್ರೆಸ್ ಕೈ ಹಿಡಿದ ಹರೀಶ್‌ಗೌಡ

ಚಾಮರಾಜ ಕ್ಷೇತ್ರದಲ್ಲಿ ಕೆ.ಹರೀಶ್‌ಗೌಡರ ಜನಪ್ರಿಯತೆ, ಸೇವೆ, ಸಂಘಟನೆಯನ್ನು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ದೂರದಿಂದಲೇ ಗಮನಿಸಿದ್ದರು. ಸಂಘಟನಾತ್ಮಕ ನಾಯಕತ್ವ ಗುಣವುಳ್ಳ ಕೆ.ಹರೀಶ್ ಗೌಡರನ್ನು ಕಾಂಗ್ರೆಸ್‌ಗೆ ಆಹ್ವಾನಿಸಿದರು. ಹರೀಶ್‌ಗೌಡ ಕಾಂಗ್ರೆಸ್ ಸೇರ್ಪಡೆ ಬೆನ್ನಲ್ಲೇ ಅವರ ಸಾವಿರಾರು ಹಿತೈಷಿಗಳು, ಬೆಂಬಲಿಗರು ಕಾಂಗ್ರೆಸ್‌ಗೆ ಸೇರಿದ್ದಾರೆ. ಅಲ್ಲದೆ ಹರೀಶ್‌ಗೌಡ ಬೆಂಬಲಿತ ಕಾರ್ಪೊರೇಟರ್‌ಗಳೂ ತಮ್ಮ ಬೆಂಬಲಿಗರೊಂದಿಗೆ ಕಾಂಗ್ರೆಸ್‌ಗೆ ತೆರಳಿದ್ದಾರೆ. ಕಳೆದ ಚುನಾವಣೆಯಲ್ಲಿ ಜೆಡಿಎಸ್ ಟಿಕೆಟ್ ವಂಚಿತರಾದಾಗ ಜನರಿಂದ ವ್ಯಕ್ತವಾದ ಭಾವನೆಯನ್ನು ಅರಿತಿರುವ ಸಿದ್ದರಾಮಯ್ಯನವರು, ಮುಂದಿನ 2023ರ ಚುನಾವಣೆಯಲ್ಲಿ ಕೆ.ಹರೀಶ್ ಗೌಡರಿಗೆ ಅವಕಾಶ ಕಲ್ಪಿಸಲು ಉದ್ದೇಶಿಸಿದ್ದಾರೆ ಎಂದು ಹೇಳಲಾಗುತ್ತಿದೆ. ಅದೇ ವಿಶ್ವಾಸದಲ್ಲಿ ಹರೀಶ್‌ಗೌಡರೂ ಪಕ್ಷ ಹಾಗೂ ಸೇವಾ ಕಾರ್ಯ ಮುಂದುವರೆಸಿದ್ದಾರೆ.





Promotional Feature



ಸೇವೆಯಿಂದಲೇ ಸಾರ್ಥಕ ಬದುಕು

ಕೆ.ಹರೀಶ್‌ಗೌಡರು ತಮ್ಮ ಕುಟುಂಬದ ಬಗ್ಗೆ ಕಾಳಜಿ ವಹಿಸುವುದು ಕಡಿಮೆ. ಸದಾ ಕ್ಷೇತ್ರದ ಜನರ ಕಷ್ಟ–ಸುಖಗಳಿಗೆ ಸ್ಪಂದಿಸುವುದರಲ್ಲೇ ಕಳೆದು ಹೋಗುತ್ತಾರೆ. ಹುಟ್ಟುಹಬ್ಬ ಇನ್ನಿತರ ವಿಶೇಷ ದಿನಗಳಲ್ಲಿ ಶಾಲಾ ಮಕ್ಕಳಿಗೆ ನೋಟ್ ಪುಸ್ತಕ, ಪೆನ್ನು, ಶೂ, ಸಮವಸ್ತ್ರ, ಬ್ಯಾಗ್ ಇನ್ನಿತರ ಪರಿಕರಗಳನ್ನು ನೀಡುವುದರಲ್ಲಿ ತೃಪ್ತಿ ಕಾಣುತ್ತಾರೆ. ಹಲವು ವೃದ್ಧಾಶ್ರಮ, ಅನಾಥಾಶ್ರಮಗಳಿಗೆ ತೆರಳಿ ಆಹಾರ ವ್ಯವಸ್ಥೆ ಮಾಡಿದ್ದಾರೆ. ಆಕಸ್ಮಿಕವಾಗಿ ಮನೆ ಕುಸಿದು ಮನೆ ಯಜಮಾನನ್ನು ಕಳೆದುಕೊಂಡ ಕುಟುಂಬಕ್ಕೆ ಹಣಕಾಸಿನ ಸಹಾಯ ಮಾಡಿದ್ದಾರೆ. ನೃತ್ಯ ಕ್ಷೇತ್ರದಲ್ಲಿ ಬೆಳೆಯುತ್ತಿದ್ದ ಬಾಲಕನೊಬ್ಬ ಅಪಘಾತದಲ್ಲಿ ಕಾಲು ಕಳೆದುಕೊಂಡಾಗ ಮಾತೃಹೃದಯಿ ಕೆ.ಹರೀಶ್ ಗೌಡ, ಸಾವಿರಾರು ರೂ. ಹಣ ನೀಡಿ ಮಾನವೀಯತೆ ಮೆರೆದಿದ್ದಾರೆ. ದಸರಾ ವೇಳೆ ಮನೆಯ ಟೆರೇಸ್‌ನಲ್ಲಿ ನಿಂತು ಹೆಲಿಕಾಪ್ಟರ್ ಹಾರಾಟವನ್ನು ವೀಕ್ಷಿಸುತ್ತಿದ್ದ ಪ್ರತಿಭಾನ್ವಿತ ಬಾಲಕಿ ಆಯತಪ್ಪಿ ವಿದ್ಯುತ್ ತಂತಿ ಹಿಡಿದ ಪರಿಣಾಮ ತೀವ್ರವಾಗಿ ಗಾಯಗೊಂಡಿತ್ತು. ಕೂಡಲೇ ಹರೀಶ್‌ಗೌಡರು ನೆರವಿಗೆ ದಾವಿಸಿ, ಚಿಕಿತ್ಸೆಗೆ ಹಣ ನೀಡುವ ಮೂಲಕ ಜನಪ್ರತಿನಿಧಿಗಳಿಗೆ ಮಾದರಿಯಾಗಿದ್ದರು. ಟೈಲರಿಂಗ್ ತರಬೇತಿ ಸಂಸ್ಥೆಗಳಿಗೆ ಹಾಗೂ ಬಡ ಹೆಣ್ಣು ಮಕ್ಕಳಿಗೆ ಹೊಲಿಗೆ ಯಂತ್ರಗಳನ್ನು ನೀಡಿ ಅವರ ಬದುಕಿಗೆ ದಾರಿ ತೋರಿದ್ದಾರೆ. ಪ್ರತಿ ವರ್ಷ ಇಂತಹ ಆದರ್ಶನೀಯ ಸೇವಾ ಕಾರ್ಯಗಳನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಸೇವೆಯಿಂದಲೇ ಸಾರ್ಥಕ ಬದುಕು ಎಂಬಂತೆ ಮುನ್ನಡೆದಿದ್ದಾರೆ.



50 ಹುಟ್ಟುಹಬ್ಬ

ಸರ್ವಧರ್ಮ ಸಾಮರಸ್ಯ ಮೆರೆದ ಹರೀಶ್‌ಗೌಡ

ಪಕ್ಷಾತೀತ, ಧರ್ಮಾತೀತ, ಜಾತ್ಯಾತೀತವಾಗಿ ಜನ ಕೆ.ಹರೀಶ್‌ಗೌಡರನ್ನು ಪ್ರೀತಿಸುತ್ತಾರೆ. ಎಲ್ಲಾ ಧರ್ಮದವರೂ ಕೆ.ಹರೀಶ್ ಗೌಡರ ಬೆಂಬಲಕ್ಕೆ ನಿಂತಿದ್ದಾರೆ. ಹರೀಶ್ ಗೌಡರೂ ಹಿಂದಿನಿಂದಲೂ ಸರ್ವಧರ್ಮ ಸಾಮರಸ್ಯ ಮೆರೆಯುತ್ತಲೇ ಬಂದಿದ್ದಾರೆ. ಜಾತಿ, ಮತ, ಪಂಥಗಳ ಗೋಜಿಗೆ ಸಿಲುಕದೆ ವಿಶ್ವ ಮಾನವನಂತೆ ಎಲ್ಲರೂ ಬದುಕ ಬೇಕೆಂಬುದು ಇವರ ಆಶಯ. ಇವರು ಜೆಡಿಎಸ್ ತೊರೆದಾಗಲೂ ಅಲ್ಪಸಂಖ್ಯಾತರು ಬೆಂಬಲಕ್ಕೆ ನಿಂತರು. ಪ್ರತಿ ವರ್ಷ ರಂಜಾನ್ ಸಂದರ್ಭದಲ್ಲಿ ಕೆ.ಹರೀಶ್‌ಗೌಡರು ಇಫ್ತಾರ್ ಕೂಟ ಆಯೋಜಿಸಿ, ಮುಸ್ಲಿಂ ಬಾಂಧವರ ಸಂಭ್ರಮದಲ್ಲಿ ಭಾಗಿಯಾಗುತ್ತಾರೆ. ಸ್ನೇಹ–ಬಾಂಧವ್ಯಕ್ಕೆ ಸಾಕ್ಷಿ ಯಾಗಿ ಈ ರೀತಿಯ ಔತಣ ಕೂಟ ಆಯೋಜಿಸಿಕೊಂಡು ಬಂದಿದ್ದಾರೆ. ಕಷ್ಟ–ಸುಖದಲ್ಲಿ ಭಾಗಿಯಾಗುವ ಕೆ.ಹರೀಶ್ ಗೌಡರೆಂದರೆ ಅಲ್ಪ ಸಂಖ್ಯಾತರಲ್ಲಿ ವಿಶೇಷ ಪ್ರೀತಿ–ವಿಶ್ವಾಸ.

ದೇವೇಗೌಡರ ಹುಟ್ಟುಹಬ್ಬಕ್ಕೆ ಸಾರ್ಥಕ ಸೇವೆ



ತಮ್ಮ ಮಾನಸ ಗುರುಗಳಾಗಿದ್ದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ 83ನೇ ಹುಟ್ಟುಹಬ್ಬಕ್ಕೆ ಕೆ.ಹರೀಶ್‌ಗೌಡರ ಸೇವೆ ಅವಿಸ್ಮರಣೀಯ. ಕನ್ನೇಗೌಡನ ಕೊಪ್ಪಲಿನಲ್ಲಿ ಅಂದು 83 ಜೋಡಿಗಳಿಗೆ ಸಾಮೂಹಿಕ ವಿವಾಹ ಮಹೋತ್ಸವ ಏರ್ಪಡಿಸಿದ್ದರು. ಗ್ರಾಮದೆಲ್ಲೆಡೆ ಸಂಭ್ರಮ ಕಳೆಗಟ್ಟಿತ್ತು. ರಾಜ್ಯದ ವಿವಿಧೆಡೆಯಿಂದ ಜನ ಆ ಕಾರ್ಯಕ್ರಮಕ್ಕೆ ಬಂದಿದ್ದರು. ವಧುವಿಗೆ ರೇಷ್ಮೆ ಸೀರೆ, 5 ಗ್ರಾಂ ಚಿನ್ನದ ತಾಳಿ, ವರನಿಗೆ ಉಡುಗೆ, ಸಾವಿರಾರು ಜನರಿಗೆ ಊಟೋಪಚಾರ, ಆತಿಥ್ಯ, ಹಬ್ಬ ಯಾರಿಂದಲೂ ಒಂದು ರೂ. ಹಣ ಪಡೆಯದೆ ತಮ್ಮದೇ ಖರ್ಚಿನಲ್ಲಿ ಸಾಮೂಹಿಕ ವಿವಾಹ ನೆರವೇರಿಸಿದರು. ದೇವೇಗೌಡರ ಕುಟುಂಬವೂ ಆ ಸಂಭ್ರಮದಲ್ಲಿ ಭಾಗಿಯಾಗಿತ್ತು. ದೇವೇಗೌಡರ ಪತ್ನಿ ಚೆನ್ನಮ್ಮ, ಅವರ ಪುತ್ರ ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಭವಾನಿ ರೇವಣ್ಣ ಸಮಾರಂಭದಲ್ಲಿ ಪಾಲ್ಗೊಂಡು ಕೆ.ಹರೀಶ್‌ಗೌಡರ ಸೇವೆಯನ್ನು ಕಂಡು ಮೂಕ ವಿಸ್ಮಿತರಾಗಿ ಕೊಂಡಾಡಿದರು. ಸರ್ಕಾರ ಅಥವಾ ಸಂಸ್ಥೆಗಳು ಮಾಡುವ ಸೇವಾ ಕಾರ್ಯವನ್ನು ಒಂಟಿಯಾಗಿ ನಡೆಸುವಲ್ಲಿ ಯಶಸ್ವಿಯಾಗಿರುವುದಕ್ಕೆ ಅಭಿನಂದನೆ ಹೇಳಿದರು. ಆದಿಚುಂಚನಗಿರಿ ಮೈಸೂರು ಶಾಖಾಮಠದ ಶ್ರೀ ಸೋಮನಾಥ ಸ್ವಾಮೀಜಿ ಅವರೂ ಆಗಮಿಸಿ ವಧು–ವರರಿಗೆ ಆಶೀರ್ವದಿಸಿದರಲ್ಲದೆ, ಕೆ.ಹರೀಶ್ ಗೌಡರಿಗೆ ಮತ್ತಷ್ಟು ಶಕ್ತಿ ಕಲ್ಪಿತವಾಗಲಿ ಎಂದು ಆಶೀರ್ವದಿಸಿದರು.

ಕ್ಷೇತ್ರದ ಸಹೋದರಿಯರಿಗೆ ಹೊಸಬಟ್ಟೆ

ವರಮಹಾಲಕ್ಷ್ಮಿ ಹಬ್ಬದಂದು ಕ್ಷೇತ್ರದ ಹೆಣ್ಣುಮಕ್ಕಳಿಗೆ ಸೀರೆ, ಬಳೆ, ಫಲ–ತಾಂಬೂಲವನ್ನು ನೀಡುವ ಮೂಲಕ ಸಹೋದರನ ಜವಾಬ್ದಾರಿ ನಿಭಾಯಿಸಿದ್ದಾರೆ. ಅದರಲ್ಲೂ ಮುಸ್ಲಿಂ ಸಹೋದರಿಯರಿಗೂ ಮಹಾಲಕ್ಷ್ಮಿ ಹಬ್ಬದಲ್ಲಿ ಹೊಸಬಟ್ಟೆ ನೀಡಿ ಸರ್ವಧರ್ಮ ಸಮಭಾವ ಮೂಡಿಸಿರುವುದು ವಿಶೇಷ. ಧರ್ಮದ ಹೆಸರಿನಲ್ಲಿ ಗದ್ದಲ ಸೃಷ್ಟಿಸುವ ವರ ನಡುವೆ ಕೆ.ಹರೀಶ್‌ಗೌಡ ಮಾದರಿಯಾಗುತ್ತಾರೆ. ಎಲ್ಲಾ ಧರ್ಮೀಯರೂ ಒಂದೇ. ಪರಸ್ಪರ ಪ್ರೀತಿ–ವಿಶ್ವಾಸದಿಂದ ನೆಮ್ಮದಿಯಾಗಿ ಜೀವನ ನಡೆಸಬೇಕು ಎನ್ನುವುದನ್ನು ತಮ್ಮ ನಾನಾ ಸೇವಾ ಕಾರ್ಯಕ್ರಮಗಳ ಮೂಲಕವೇ ಜನರಿಗೆ ಮನದಟ್ಟು ಮಾಡಿದ್ದಾರೆ.



ಅಭಿಮಾನದ ಪರಾಕಾಷ್ಠೆಗೆ ಹರೀಶ್‌ಗೌಡ ಬಾವುಕ

ಚಾಮರಾಜ ಕ್ಷೇತ್ರದ ಜನರಿಗೆ ಕೆ.ಹರೀಶ್‌ಗೌಡರ ಬಗ್ಗೆ ವಿಶೇಷ ಅಭಿಮಾನ, ಪ್ರೀತಿ ಇದ್ದೇ ಇದೆ. 2018ರ ಚುನಾವಣೆಯಲ್ಲಿ ಟಿಕೆಟ್ ಕೈತಪ್ಪಿದಾಗ ಹರೀಶ್‌ಗೌಡರಿಗೆ ಜನರೇ ಧೈರ್ಯ ತುಂಬಿದ್ದರು. ತಮ್ಮ ಬಡಾವಣೆಗಳಲ್ಲಿ ತಾವೇ ಸಭೆ ಏರ್ಪಡಿಸಿ, ಹರೀಶ್‌ಗೌಡರನ್ನು ಆಹ್ವಾನಿಸಿ ಬೆಂಬಲಕ್ಕೆ ನಿಂತರು. ಮನೆ ಮಗನಿಗೆ ಅನ್ಯಾಯವಾದಂತೆ ಕಣ್ಣೀರಿಟ್ಟವರು ಬಹು ಮಂದಿ. ಈಗಲೂ ಅವರ ಮುಖ ಕಂಡಾಗ ನೋವು ವ್ಯಕ್ತಪಡಿಸುತ್ತಾರೆ. ಭಾವನಾತ್ಮಕ ಮಾತುಗಳಿಂದ ಹರೀಶ್ ಗೌಡರ ನೊಂದ ಮನಸ್ಸಿಗೆ ಸಮಾಧಾನ ನೀಡುತ್ತಾರೆ. ಶಾಸಕನಾಗುವುದು ಹರೀಶ್ ಗೌಡರ ಕನಸ್ಸಲ್ಲ, ಬದಲಾಗಿ ಜನರ ಆಶಯ. ಈ ಕಾರಣದಿಂದಲೇ ಟಿಕೆಟ್ ಸಿಗದಿದ್ದಾಗ ಜನರೇ ಹೆಚ್ಚು ನೊಂದುಕೊಂಡಿದ್ದರು. ತಮ್ಮ ಒತ್ತಾಸೆಯಂತೆ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಜಿತರಾದಾಗ ಕೆ.ಹರೀಶ್‌ಗೌಡರ ಮೇಲಿನ ಪ್ರೀತಿ ಮತ್ತಷ್ಟು ಗಟ್ಟಿಯಾಯಿತು. ಒಳ್ಳೆಯ ದಿನಗಳು ಬಂದೇ ಬರುತ್ತವೆ ಎಂಬ ಆಶಾಭಾವನೆಯಿಂದ ಹರೀಶ್‌ಗೌಡರ ಬೆನ್ನಿಗೆ ನಿಂತಿದ್ದಾರೆ. ಹಲವರು ಕೆ.ಹರೀಶ್‌ಗೌಡರ ಮೇಲಿನ ತಮ್ಮ ಅಭಿಮಾನದ ಪರಾಕಷ್ಠೆ ಮೆರೆದಿದ್ದಾರೆ. ಕೈಯ್ಯ ಮೇಲೆ ಹರೀಶ್‌ಗೌಡರ ಭಾವಚಿತ್ರವನ್ನು ಅಚ್ಚೆ ಹಾಕಿಸಿಕೊಂಡಿದ್ದಾರೆ. ಆಟೋ, ಕಾರು ಸೇರಿದಂತೆ ತಮ್ಮ ವಾಹನಗಳ ಗಾಜಿನ ಮೇಲೆ ಹರೀಶ್ ಗೌಡರ ದೊಡ್ಡ ಚಿತ್ರಗಳನ್ನು ಅಂಟಿಸಿಕೊಂಡು ಮೆರೆಸುತ್ತಿದ್ದಾರೆ. ಯಾವ ಅಧಿಕಾರವಿಲ್ಲದಿದ್ದರೂ ಒಬ್ಬ ವ್ಯಕ್ತಿಯ ಬಗ್ಗೆ ಇಷ್ಟೊಂದು ಅಭಿಮಾನ ಇಟ್ಟುಕೊಂಡಿರುವುದು ವಿಶೇಷ. ಒಬ್ಬ ನಿಜವಾದ ಜನ ಸೇವಕನಿಗೆ ಇದಕ್ಕಿಂತ ಮಿಗಿಲಾದ ಸಂತೋಷದಾಯಕ ವಿಚಾರ ಮತ್ತೇನಿದೆ ಹೇಳಿ.

ಕೊರೊನಾ ವಾರಿಯರ್ ಆಗಿ ಸೇವಾ ಕಾರ್ಯ



ಕೊರೊನಾದಿಂದ 2 ವರ್ಷಗಳ ಕಾಲ ಜನ ಜೀವನ ಅಸ್ತವ್ಯಸ್ತವಾಗಿತ್ತು. ಸರ್ಕಾರದ ಉಚಿತ ಅಕ್ಕಿಯಿಂದ ಮಾತ್ರ ಜೀವನ ನಡೆಸುವುದು ಅಸಾಧ್ಯವಾಗಿತ್ತು. ಆಹಾರವಿಲ್ಲದೆ ಅದೆಷ್ಟೋ ಕುಟುಂಬಗಳು ಪರಿತಪಿಸಿದ್ದವು. ಜನಪ್ರತಿನಿಧಿಗಳಿಗಿಂತ ಸಹೃದಯಿಗಳೇ ಹೆಚ್ಚಾಗಿ ನೊಂದವರ ನೆರವಿಗೆ ನಿಂತರು. ಹಾಗೆಯೇ ಕೆ.ಹರೀಶ್ ಗೌಡರೂ ಕೂಡ ಕೊರೊನಾದಿಂದ ಕಂಗಾಲಾಗಿದ್ದ ಜನರ ನೆರವಿಗೆ ನಿಂತು, ಕೊರೊನಾ ವಾರಿಯರ್ ಮಾದರಿಯಲ್ಲಿ ಕೆಲಸ ಮಾಡಿದರು. ತಮ್ಮ ಸ್ವಂತ ಹಣದಲ್ಲಿ ಕಷ್ಟದಲ್ಲಿದ್ದ 45 ಸಾವಿರ ಕುಟುಂಬಗಳಿಗೆ ದಿನಸಿ ಕಿಟ್ ವಿತರಿಸಿದರು. ಕೊರೊನಾ ಸೋಂಕಿನಿಂದ ನಿಧನರಾದ 240 ಜನರ ಕುಟುಂಬಗಳಿಗೆ ತಲಾ 10 ಸಾವಿರ ರೂ.ಗಳಂತೆ 25 ಲಕ್ಷಕ್ಕೂ ಹೆಚ್ಚು ಆರ್ಥಿಕ ಸಹಾಯ ಮಾಡಿದರು. ಅಲ್ಲದೆ ಆ ಸಂದರ್ಭದಲ್ಲಿ ಆಸ್ಪತ್ರೆಗಳಲ್ಲಿ ಬೆಡ್ ಸಿಗುತ್ತಿರಲಿಲ್ಲ, ಜೀವರಕ್ಷಕ ಉಪಕರಣಗಳ ಕೊರತೆಯಿಂದ ಸಾವಿನ ಸಂಖ್ಯೆ ಹೆಚ್ಚಾಗುವ ದುಸ್ಥಿತಿ ನಿರ್ಮಾಣವಾಗಿತ್ತು. ಆ ವೇಳೆ ಕೆ.ಹರೀಶ್‌ಗೌಡರೂ ಕೂಡ ಜಿಲ್ಲಾಡಳಿತ ಹಾಗೂ ತುಳಸಿದಾಸ ಆಸ್ಪತ್ರೆಗೆ ಲಕ್ಷಾಂತರ ರೂ. ಮೌಲ್ಯದ ಆಕ್ಸಿಜನ್ ಕಾನ್ಸನ್‌ಟ್ರೇಟರ್ಸ್ ಇನ್ನಿತರ ಉಪಕರಣಗಳನ್ನು ನೀಡಿ, ನೆರವಾಗಿದ್ದರು. ಅಲ್ಲದೆ ಹಾಲು–ತರಕಾರಿ ಕೊಳ್ಳುವುದಕ್ಕೂ ಆಗದ ಪರಿಸ್ಥಿತಿಯಲ್ಲಿದ್ದ ಬಡವರಿಗೆ ಹಲವು ತಿಂಗಳುಗಳ ಕಾಲ ಆಹಾರ ಒದಗಿಸುವ ಮಹಾನ್ ಸೇವೆಯನ್ನೂ ಕೆ.ಹರೀಶ್‌ಗೌಡರು ಮಾಡಿದರು.

ಯುವ ಸಮೂಹಕ್ಕೆ ಉದ್ಯೋಗ ಕಲ್ಪಿಸಿ ಸಾರ್ಥಕ ಹುಟ್ಟುಹಬ್ಬ

ಅಭಿಮಾನಿಗಳು, ಬೆಂಬಲಿಗರು, ಹಿತೈಷಿಗಳು, ಕುಟುಂಬದವರು ಪ್ರೀತಿಯಿಂದ ಅದ್ಧೂರಿಯಾಗಿ ಹುಟ್ಟುಹಬ್ಬ ಆಚರಿಸುವುದಕ್ಕಿಂತ ಮಿಗಿಲಾಗಿ ಕೆ.ಹರೀಶ್‌ಗೌಡ ಸಾರ್ಥಕ ರೀತಿಯಲ್ಲಿ ಜನ್ಮದಿನ ಆಚರಿಸುತ್ತಾರೆ. ಪ್ರತಿ ವರ್ಷ ಬೃಹತ್ ಉದ್ಯೋಗ ಮೇಳ ಆಯೋಜಿಸಿ ಸಾವಿರಾರು ಯುವಕ–ಯುವತಿಯರಿಗೆ ಉದ್ಯೋಗ ಕಲ್ಪಿಸಿಕೊಡುವ ಸತ್ಕಾರ್ಯವನ್ನು ನಡೆಸಿಕೊಂಡು ಬಂದಿದ್ದಾರೆ. ಜೆಡಿಎಸ್ ನಗರಾಧ್ಯಕ್ಷರಾಗಿದ್ದಾಗ ಏರ್ಪಡಿಸಿದ್ದ ಉದ್ಯೋಗ ಮೇಳದಲ್ಲಿ ಮೈಸೂರು ಮಾತ್ರವಲ್ಲದೆ ಸುಮಾರು 8 ಜಿಲ್ಲೆಗಳ ಸಾವಿರಾರು ಉದ್ಯೋಗಾಂಕ್ಷಿಗಳು ಭಾಗವಹಿಸಿದ್ದರು. ನೂರಕ್ಕೂ ಹೆಚ್ಚು ಪ್ರತಿಷ್ಠಿತ ಸಂಸ್ಥೆಗಳು ಭಾಗವಹಿಸಿ 2 ಸಾವಿರಕ್ಕೂ ಹೆಚ್ಚು ಜನರಿಗೆ ಉದ್ಯೋಗ ಖಾತರಿ ನೀಡಿದ್ದವು. ಯುವ ಸಮುದಾಯಕ್ಕೆ ಉದ್ಯೋಗ ಕಲ್ಪಿಸುವ ಸತ್ಕಾರ್ಯವನ್ನು ಕೆ.ಹರೀಶ್‌ಗೌಡ ಮುಂದುವರೆಸಿಕೊಂಡು ಬಂದಿದ್ದು, ಬಡ ಯುವಕರಿಗೆ ದಾರಿದೀಪವಾಗಿದ್ದಾರೆ.



ಚುನಾವಣೆಯಲ್ಲಿ ತಪ್ಪಿದ ಅವಕಾಶ; ಹಿತೈಷಿಗಳ ಸಲಹೆಗನುಸಾರ ನಡೆ

ಚಾಮರಾಜ ಕ್ಷೇತ್ರದ ಮನೆ ಮಗನಾಗಿ ಎಲ್ಲರೂ ಕಷ್ಟ–ಸುಖದಲ್ಲಿ ಭಾಗಿಯಾಗುವ ಕೆ.ಹರೀಶ್ ಗೌಡರಿಗೆ ರಾಜಕೀಯ ಶಕ್ತಿ ಸಿಗಬೇಕೆಂಬುದು ಅವರ ಹಿತೈಷಿಗಳ ಅಭಿಲಾಷೆಯಾಗಿತ್ತು. ಅದರಂತೆ ಕಳೆದ 2018ರ ವಿಧಾನ ಸಭಾ ಚುನಾವಣೆಯಲ್ಲಿ ಚಾಮರಾಜ ಕ್ಷೇತ್ರದಿಂದ ಜೆಡಿಎಸ್‌ನಿಂದ ಸ್ಪರ್ಧಿಸುವಂತೆ ಕೆ.ಹರೀಶ್‌ಗೌಡರಿಗೆ ಒತ್ತಡ ತಂದಿದ್ದರು. ಈ ನಿಟ್ಟಿನಲ್ಲಿ ಕ್ಷೇತ್ರಾದ್ಯಂತ ಕಾರ್ಯಕರ್ತರು, ಬೆಂಬಲಿಗರು, ಹಿತೈಷಿಗಳು ಹಾಗೂ ಸಂಬಂಧಿಗಳು ಸ್ವತಃ ಕಾರ್ಯಕ್ರಮ, ಸಭೆಗಳನ್ನು ನಡೆಸಿ ಕೆ.ಹರೀಶ್ ಗೌಡರಿಗೆ ಬೆಂಬಲ ವ್ಯಕ್ತಪಡಿಸಿದ್ದರು. ಆದರೆ ಅಂತಿಮ ಕ್ಷಣದಲ್ಲಿ ಜೆಡಿಎಸ್ ಟಿಕೆಟ್ ವಂಚಿತರಾಗಿದ್ದು ಅವರ ಹಿತೈಷಿಗಳಿಗೆ ಬರಸಿಡಿಲು ಬಡಿದಂತಾಯ್ತು. ಅವರ ಅಭಿಮಾನಿಗಳು, ಬೆಂಬಲಿಗರು, ಹಿತೈಷಿಗಳು ಅತೀವ ನೊಂದರು. ಕೆ.ಜಿ. ಕೊಪ್ಪಲು, ಗೋಕುಲಂ, ಒಂಟಿಕೊಪ್ಪಲು, ಸುಬ್ರಹ್ಮಣ್ಯನಗರ ಸೇರಿದಂತೆ ಚಾಮರಾಜ ಕ್ಷೇತ್ರದ ವಿವಿಧೆಡೆ ಸ್ವತಃ ಸಾರ್ವಜನಿಕ ಸಭೆ ನಡೆಸಿ, ಕೆ.ಹರೀಶ್ ಗೌಡರಿಗೆ ಧೈರ್ಯ ತುಂಬಿದರು. 'ನಿಷ್ಠಾವಂತ ನಾಯಕನಿಗೆ ನಮ್ಮ ಬೆಂಬಲ', 'ನಮ್ಮ ಶಾಸಕ– ನಮ್ಮ ಆಯ್ಕೆ' ಹೀಗೆ ವಿವಿಧ ಶೀರ್ಷಿಕೆ ಯಡಿ ಕಾರ್ಯಕ್ರಮ ನಡೆಸಿ, ಚುನಾವಣೆಯಲ್ಲಿ ಪಕ್ಷೇತರ ರಾಗಿ ಸ್ಪರ್ಧಿಸುವಂತೆ ಕೆ.ಹರೀಶ್ ಗೌಡರಿಗೆ ಆಗ್ರಹಿಸಿದರು. ಕ್ಷೇತ್ರದ ಜನರ ಅಭಿಪ್ರಾಯ, ಸೂಚನೆ, ಆಜ್ಞೆಯನ್ನು ಮೀರಲಾಗದ ಕೆ.ಹರೀಶ್‌ಗೌಡ ಅವರು ಸ್ವತಂತ್ರ ಅಭ್ಯರ್ಥಿ ಯಾಗಿ ಕಣಕ್ಕಿಳಿಯಬೇಕಾಯ್ತು. ಅಂತಿಮ ಕ್ಷಣದಲ್ಲಿ ಜನರ ನಿರ್ಧಾರದಂತೆ ಚುನಾವಣೆಯಲ್ಲಿ ಸ್ಪರ್ಧಿಸಿದ ಕೆ.ಹರೀಶ್ ಗೌಡರು, ಯಾವ ಪಕ್ಷ ಹಾಗೂ ನಾಯಕರ ಬೆಂಬಲವಿಲ್ಲದೆ ಸುಮಾರು 22 ಸಾವಿರ ಮತ ಗಳಿಸುವ ಮೂಲಕ ತಮ್ಮ ರಾಜಕೀಯ ಶಕ್ತಿ ಪ್ರದರ್ಶಿಸಿದರು. 'ನಿಮ್ಮ ಹಾಗೆ ನನಗೂ ಪೊಳ್ಳು ಆಶ್ವಾಸನೆಗಳಲ್ಲಿ ವಿಶ್ವಾಸವಿಲ್ಲ. ಬನ್ನಿ ಚಾಮರಾಜ ಕ್ಷೇತ್ರದ ಶ್ರೇಯೋಭಿವೃದ್ಧಿ, ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸೋಣ. ಕೈ ಜೋಡಿಸಿ' ಎಂಬ ಮನವಿಗೆ ಕ್ಷೇತ್ರದ ಜನ ಸ್ಪಂದಿಸಿ, ಹರೀಶ್ ಗೌಡರ ಕೈ ಬಲಪಡಿಸಿದರು. ಭವಿಷ್ಯದಲ್ಲಿ ಒಂದು ಗಟ್ಟಿ ರಾಜಕೀಯ ನಿರ್ಧಾರ ಕೈಗೊಳ್ಳುವ ನೈತಿಕ ಬೆಂಬಲ ನೀಡಿದರು.

ಪಾಲಿಕೆ ಚುನಾವಣೆಯಲ್ಲೂ ಕೆ.ಹರೀಶ್‌ಗೌಡರ ಶಕ್ತಿ ಪ್ರದರ್ಶನ

ವಿಧಾನಸಭಾ ಚುನಾವಣೆಯಲ್ಲಿ ಸೋತ ನಂತರ ಹತಾಶರಾಗಿ ಕುಳಿತುಕೊಳ್ಳದ ಕೆ.ಹರೀಶ್‌ಗೌಡ, ಕೊಟ್ಟ ಮಾತು ಇಟ್ಟ ಹೆಜ್ಜೆ ಹಿಂತೆಗೆದುಕೊಳ್ಳುವುದಿಲ್ಲ ಎನ್ನುವ ಮಾತಿಗೆ ಬದ್ಧರಾಗಿ ಸ್ವತಂತ್ರವಾಗಿಯೇ ಮುಂದುವರೆದರು. ಸೋಲು–ಗೆಲುವಿಗಿಂತ ಜನರ ಪ್ರೀತಿ–ವಿಶ್ವಾಸ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಹೆಜ್ಜೆ ಹಾಕಿದರು. ವಿಧಾನಸಭಾ ಚುನಾವಣೆ ಬಳಿಕ ಎದುರಾದ ಮೈಸೂರು ನಗರ ಪಾಲಿಕೆ ಚುನಾವಣೆಯಲ್ಲಿ ತಮ್ಮ ರಾಜಕೀಯ ಶಕ್ತಿ ತೋರುವಲ್ಲೂ ಸಫಲರಾದರು. ಕೆ.ಹರೀಶ್‌ಗೌಡರ ಬೆಂಬಲಿತ ಅಭ್ಯರ್ಥಿಗಳಿಗೆ ಚುನಾವಣೆಯಲ್ಲಿ ಜನ ಆಶೀರ್ವದಿಸಿದರು. ಸ್ಪರ್ಧಿಸಿದ್ದ ಐವರಲ್ಲಿ ಪೈಲ್ವಾನ್ ಶ್ರೀನಿವಾಸ್ ಹಾಗೂ ಕೊಪ್ಪಲು ಶಿವಕುಮಾರ್ ಗೆಲುವು ಸಾಧಿಸಿದರು. ಆ ಮೂಲಕ ಹರೀಶ್‌ಗೌಡರ ವೈಯಕ್ತಿಕ ವರ್ಚಸ್ಸು ರಾಜಕೀಯ ನಾಯಕರಿಗೂ ತಿಳಿಯಿತು.

ರಕ್ತದಾನ ಪ್ರೋತ್ಸಾಹಿಸಲು ಶಿಬಿರ

ಹುಟ್ಟುಹಬ್ಬದಲ್ಲಿ ಉದ್ಯೋಗ ಮೇಳ ಮಾತ್ರವಲ್ಲದೆ ಮತ್ತಷ್ಟು ಸಾರ್ಥಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿದ್ದಾರೆ. ನಗರದಲ್ಲೇ ಹುಟ್ಟಿ ಬೆಳೆದವರಿಗೂ ಅನಿರೀಕ್ಷಿತ ಹಾಗೂ ಆಪತ್ಕಾಲದಲ್ಲಿ ರಕ್ತ ಹೊಂದಿಸುವುದು ಕಷ್ಟ, ಅಂತಹದ್ದರಲ್ಲಿ ಹಳ್ಳಿಗಳಿಂದ ನಗರದ ಆಸ್ಪತ್ರೆಗಳಿಗೆ ಬರುವ ರೋಗಿಗಳಿಗೆ ತುರ್ತಾಗಿ ರಕ್ತ ಬೇಕಾದಾಗ ಅವರ ಸಹಾಯಕರು ದಿಕ್ಕು ತೋಚದಂತಾಗಿ ಪರಿತಪಿಸುತ್ತಾರೆ. ಇದನ್ನು ಮನಗಂಡ ಕೆ.ಹರೀಶ್‌ಗೌಡರು ರಕ್ತದಾನ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರಕ್ತದಾನ ಶಿಬಿರಗಳನ್ನು ನಡೆಸಿದ್ದಾರೆ. ಹುಟ್ಟುಹಬ್ಬದಲ್ಲಿ ನೂರಾರು ಅಭಿಮಾನಿಗಳು ರಕ್ತದಾನ ಮಾಡುವ ಮೂಲಕ ಹರೀಶ್‌ಗೌಡರಿಗೆ ಶುಭಾಶಯ ತಿಳಿಸುತ್ತಾರೆ.


ಆಪತ್ಕಾಲದ ಬಂಧು ಎನ್ನುವ ಜನ

ಕಷ್ಟ ಎಂದವರಿಗೆ ನೆರವಾಗಲು ಸದಾ ಸಿದ್ಧರಾಗಿರುವ ಕೆ.ಹರೀಶ್‌ಗೌಡ, ಹಿಂದೆ ಅತಿವೃಷ್ಟಿಯಿಂದ ಚಾಮರಾಜ ಕ್ಷೇತ್ರದ ಬಿ.ಎಂ.ಶ್ರೀನಗರದಲ್ಲಿ ಭಾರೀ ಅವಾಂತರ ಸೃಷ್ಟಿಯಾದಾಗ ಅಲ್ಲಿನ ಜನರ ನೆರವಿಗೆ ಧಾವಿಸಿದ್ದರು. ಮನೆಗಳೆಲ್ಲಾ ಜಲಾವೃತವಾಗಿ ನಿವಾಸಿಗಳ ಬದುಕು ಮೂರಾಬಟ್ಟೆಯಾಗಿತ್ತು. ಚರಂಡಿಗಳೆಲ್ಲಾ ತುಂಬಿ ರಸ್ತೆಯಲ್ಲಿ ಕೊಳಚೆ ನೀರು ಹರಿದು ರಾಡಿಯಾಗಿತ್ತು. ಹಲವೆಡೆ ಈ ರೀತಿಯ ಸಮಸ್ಯೆ ನಿರ್ಮಾಣವಾಗಿದ್ದರಿಂದ ನಗರ ಪಾಲಿಕೆ ತಕ್ಷಣಕ್ಕೆ ಸ್ಪಂದಿಸಲಿಲ್ಲ. ಪರಿಸ್ಥಿತಿಯನ್ನು ಅರಿತ ಕೆ.ಹರೀಶ್ ಗೌಡರು ತಮ್ಮ ಸ್ವಂತ ಖರ್ಚಿನಲ್ಲಿ ಜೆಸಿಬಿ, ಟಿಪ್ಪರ್‌ಗಳನ್ನು ತರಿಸಿ, ರಾಜಕಾಲುವೆಗಳ ಹೂಳೆತ್ತಿಸಿ, ಸರಾಗ ನೀರು ಹರಿವಿಗೆ ಅನುವು ಮಾಡಿಕೊಟ್ಟರು. ಇಂತಹ ಹತ್ತು ಹಲವು ಸೇವಾ ಕಾರ್ಯಗಳನ್ನು ನಡೆಸಿರುವ ಹರೀಶ್‌ಗೌಡರು ನಮ್ಮ ಆಪತ್ಕಾಲದ ಬಂಧುವಾಗಿದ್ದಾರೆ ಎಂದು ಅಲ್ಲಿನ ಜನ ನಿತ್ಯವೂ ನೆನೆಸುತ್ತಾರೆ.

ಜನರಲ್ಲಿ ಮನೆ ಮಗನ ಶಕ್ತಿ ಹೆಚ್ಚಿಸುವ ಅಭಿಲಾಷೆ

ಒಂದೂವರೆ ದಶಕದಿಂದ ವೈಯಕ್ತಿಕ ಬದುಕಿನ ವೈಭೋಗಕ್ಕೆ ತಿಲಾಂಜಲಿ ಇಟ್ಟು, ಸಾಮಾಜಿಕ ಬದುಕನ್ನೇ ಮಂತ್ರವಾಗಿಸಿಕೊಂಡಿರುವ ಕೆ.ಹರೀಶ್‌ಗೌಡ, ಚಾಮ ರಾಜ ಕ್ಷೇತ್ರದ ಜನರಿಗೆ ಮನೆ ಮಗನಂತಾಗಿದ್ದಾರೆ. ಅಧಿಕಾರವಿದ್ದೂ ಜವಾಬ್ದಾರಿ ನಿರ್ವಹಿಸುವುದು ಬಹಳ ಕಷ್ಟ ಎನ್ನುವ ಪರಿಸ್ಥಿತಿಯಲ್ಲಿ ಯಾವ ಅಧಿಕಾರವೂ ಇಲ್ಲದೆ ಜನ ಸೇವೆಗೆ ಬದುಕು ಮುಡುಪಾಗಿಡುವುದು ಸುಲಭ ಸಾಧ್ಯವಲ್ಲ. ಅಧಿಕಾರಕ್ಕೆ ಹಪಾ ಹಪಿಸುವವರ ನಡುವೆ ತಮ್ಮ ಜೀವನದ ಪ್ರವೃತ್ತಿಯೇನೋ ಎಂಬ ರೀತಿ ಜನಸೇವೆ ಕೆ.ಹರೀಶ್‌ಗೌಡರ ಸೇವಾ ಮಾದರಿಯಾಗಿದೆ. ಸಾಧ್ಯವಾದ ರೀತಿಯಲ್ಲೆಲ್ಲಾ ಜನರ ಸೇವೆಯಲ್ಲಿ ತೊಡಗಿದ್ದಾರೆ. ಪ್ರೀತಿ–ಸ್ನೇಹಕ್ಕೆ ತಲೆ ಬಾಗುವ ಹರೀಶ್ ಗೌಡ, ಯಾವ ಕಾರಣಕ್ಕೂ ಸ್ವಾಭಿಮಾನ ಬಿಟ್ಟು ನಡೆಯುವವರಲ್ಲ. ಈ ಕಾರಣದಿಂದಲೇ 9 ವರ್ಷಗಳ ಕಾಲ ತಮ್ಮದೇ ಆದ ರೀತಿಯಲ್ಲಿ ಸಂಘಟಿಸಿದ್ದ ಪಕ್ಷವನ್ನು ತೊರೆದು ಹೊರಬಂದರು. ಚಾಮರಾಜ ಕ್ಷೇತ್ರದಿಂದ ಟಿಕೆಟ್ ಕೈತಪ್ಪಿದಾಗ ಸ್ವತಂತ್ರವಾಗಿ ಸ್ಪರ್ಧಿಸಿ ಪರಾಜಿತರಾದರು. ಆದರೂ ಅವರ ಸಾಮಾಜಿಕ ಸೇವೆ ಮುಂದುವರೆದಿದೆ. ಅವರಿಗೆ ರಾಜಕೀಯವಾಗಿ ಶಕ್ತಿ ಸಿಕ್ಕರೆ ಸೇವೆ ಮತ್ತಷ್ಟು ವಿಸ್ತಾರವಾಗಿ ಬಡ ಜನರಿಗೆ ನೆರವಾಗುತ್ತದೆ. ಚಾಮರಾಜ ಕ್ಷೇತ್ರದ ಜನತೆ ಅವರ ಸಾತ್ವಿಕತೆಯನ್ನು ಎಂದೂ ಮರೆಯುವುದಿಲ್ಲ. ಏನೇ ಆದರೂ ಕೊನೆಯಲ್ಲಿ ಉಳಿಯುವುದು ಒಳ್ಳೆಯ ಗುಣ ಮಾತ್ರ. ಜನಾನುರಾಗಿ ಕೆ.ಹರೀಶ್ ಗೌಡರ ಸೇವೆಯನ್ನು ಮನಗಂಡು ಸಿದ್ದರಾಮಯ್ಯನವರು ಕಾಂಗ್ರೆಸ್‌ಗೆ ಕರೆದುಕೊಂಡಿದ್ದಾರೆ. ಮುಂದಿನ ಚುನಾವಣೆಯಲ್ಲಿ ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲು ಅವಕಾಶ ನೀಡುತ್ತಾರೆಂಬ ವಿಶ್ವಾಸವಿದೆ. ನಾವೂ ಕೂಡ ಮನೆ ಮಗನ ಗೆಲುವು ಕಾಣಲು ಕಾತುರರಾಗಿದ್ದೇವೆ ಎನ್ನುವುದು ಕ್ಷೇತ್ರದ ಜನರ ಆಶಯದ ನುಡಿಗಳಾಗಿವೆ.

ಪಾರಂಪರಿಕ ಕ್ರೀಡೆಗೆ ಉತ್ತೇಜನ



ಪಾರಂಪರಿಕ ಕ್ರೀಡೆ ಕುಸ್ತಿಗೆ ಕನ್ನೇಗೌಡನ ಕೊಪ್ಪಲು ಹೆಸರುವಾಸಿ. ಈ ವಾತಾವರಣದಲ್ಲಿ ಬೆಳೆದ ಕೆ.ಹರೀಶ್ ಗೌಡರೂ ಬಾಲ್ಯದಿಂದಲೇ ಕುಸ್ತಿ ಅಭ್ಯಾಸ ಮಾಡಿ, ಪೈಲ್ವಾನ್ ಆಗಿ ಹಲವು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ. ಮುಂದಿನ ಪೀಳಿಗೆಗೂ ಕುಸ್ತಿ ಪರಿಚಯಿಸಬೇಕು. ಈ ಕ್ರೀಡೆ ಮುಂದುವರೆಯಬೇಕು ಎಂಬ ಸದುದ್ದೇಶ ಹೊಂದಿರುವ ಕ್ರೀಡಾ ಪ್ರೇಮಿಗಳಲ್ಲಿ ಕೆ.ಹರೀಶ್ ಗೌಡರೂ ಒಬ್ಬರಾಗಿದ್ದಾರೆ. ಕುಸ್ತಿ ಕ್ರೀಡೆಯ ಬಗ್ಗೆ ಅಪಾರ ಆಸಕ್ತಿ ಹೊಂದಿರುವ ಇವರು ಯುವಕರಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ವಿಶೇಷ ದಿನಗಳಲ್ಲಿ ಕುಸ್ತಿ ಪಂದ್ಯಾವಳಿ ಆಯೋಜಿಸಿ ವಿಜೇತರಿಗೆ ಆಕರ್ಷಕ ಬಹುಮಾನ ಪ್ರಾಯೋಜಿಸುವ ಮೂಲಕ ಉತ್ಸಾಹ ತುಂಬುತ್ತಿದ್ದಾರೆ. ಕುಂಬಾರಕೊಪ್ಪಲಿನಲ್ಲಿ ಆಯೋಜಿಸಿದ್ದ ಕುಸ್ತಿ ಪಂದ್ಯಾವಳಿಯೊಂದರಲ್ಲಿ ದಿವಂಗತ ರೆಬೆಲ್ ಸ್ಟಾರ್ ಅಂಬರೀಶ್ ಪಾಲ್ಗೊಂಡು, ಕೆ.ಹರೀಶ್‌ಗೌಡರ ಕ್ರೀಡಾ ಆಸಕ್ತಿಯನ್ನು ಬಣ್ಣಿಸಿದ್ದರು. ಶಹಭಾಷ್ ಕಣ್ಲಾ... ಎಂದು ಬೆನ್ನು ತಟ್ಟಿದ್ದರು.

ಮೈಸೂರು ಮಿತ್ರ ಗುರುವಾರ 28 ಜುಲೈ 2022

ವಿರಾಜಪೇಟೆ ಪುರಸಭೆ ಪೀಠೋಪಕರಣ ಖರೀದಿ ಹಗರಣ

ಲೋಕಾಯುಕ್ತದಿಂದ ತನಿಖೆ ಆರಂಭ

ಪ್ರಕರಣ ಸಂಬಂಧ ದಾಖಲಾತಿಗಳನ್ನು ವಶಪಡಿಸಿಕೊಂಡ ಅಧಿಕಾರಿಗಳು



ವಿರಾಜಪೇಟೆ, ಜು.27– ಪುರಸಭೆ ಪೀಠೋಪಕರಣ ಖರೀದಿಯಲ್ಲಿ ನಡೆದಿದೆ ಎನ್ನಲಾದ ಹಗರಣದ ತನಿಖೆಯನ್ನು ಲೋಕಾಯುಕ್ತ ಕೈಗೆತ್ತಿಕೊಂಡಿದೆ.

ವಿರಾಜಪೇಟೆ ಪುರಸಭೆ (ಖರೀದಿ ವೇಳೆ ಪಟ್ಟಣ ಪಂಚಾಯಿತಿ ಆಗಿತ್ತು) ಕಚೇರಿಯ ಬಳಕೆಗಾಗಿ ಕಳೆದ ವರ್ಷ ಪೀಠೋಪಕರಣಗಳನ್ನು ಖರೀದಿ ಮಾಡಲಾಗಿತ್ತು. ಇದರಲ್ಲಿ ಭಾರೀ ಅವ್ಯವಹಾರ ನಡೆದಿರುವುದಾಗಿ ಲೋಕಾಯುಕ್ತಕ್ಕೆ ದೂರು ನೀಡಲಾಗಿತ್ತು. ಈ ಸಂಬಂಧ ಇಂದು ಮಡಿಕೇರಿಯಿಂದ ಆಗಮಿಸಿದ ಲೋಕಾಯುಕ್ತ ಡಿವೈಎಸ್‌ಪಿ ಎಂ.ಎಸ್.ಪವನ್‌ಕುಮಾರ್ ಪುರಸಭೆಯಿಂದ ಕಡತಗಳನ್ನು ಪಡೆದು ತನಿಖೆ ಆರಂಭಿಸಿದ್ದಾರೆ.

ಈ ಸಂದರ್ಭ ಪುರಸಭೆ ಮುಖ್ಯಾಧಿಕಾರಿ ಬಳಿ ಹಲವು ಪ್ರಶ್ನೆಗಳನ್ನು ಮುಂದಿಟ್ಟು ಅದಕ್ಕೆ ಲಿಖಿತ ರೂಪದಲ್ಲಿ ಉತ್ತರ ನೀಡುವಂತೆ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪುರಸಭೆ ಮುಖ್ಯಾಧಿಕಾರಿ ಚಂದ್ರಕುಮಾರ್ ಮತ್ತು ಪಂಚಾಯಿತಿ ರೆವಿನ್ಯೂ ಅಧಿಕಾರಿ ಸೋಮೇಶ್ ಪೇಚಿಗೆ ಸಿಲುಕಿದ್ದಾರೆ.

ಈ ಹಗರಣದ ಕುರಿತು ಪ್ರಥಮ ಬಾರಿಗೆ ಪಂಚಾಯಿತಿಯ ಮಾಸಿಕ ಸಭೆಯಲ್ಲಿ ಪ್ರತಿಪಕ್ಷದ ಸದಸ್ಯ ಸಿ.ಕೆ.ಪೃಥ್ವಿನಾಥ್ ನಿಯಮದಂತೆ ಇ ಟೆಂಡರ್ ಇಲ್ಲದೆ ನಾಲ್ಕು ಲಕ್ಷದ ತೊಂಭತ್ತೊಂದು ಸಾವಿರ ರೂ.ಗಳ ಪೀಠೋಕರಣ ಖರೀದಿ ಮಾಡಿರುವುದು ನಿಯಮಬಾಹಿರ ಹಾಗೂ ಮಾರುಕಟ್ಟೆಯಲ್ಲಿನ ದರಕ್ಕಿಂತ ನಾಲ್ಕುಪಟ್ಟು ದರ ನೀಡಿ ಖರೀದಿ ಮಾಡಿದ್ದು, ಅಕ್ರಮ ನಡೆದಿದೆ. ಈ ಬಗ್ಗೆ ತನಿಖೆ ನಡೆಯಬೇಕು ಎಂದು ಆಗ್ರಹಿಸಿದ್ದರು. ಇದರಿಂದ ಅಂದು ಸಭೆಯಲ್ಲಿ ಭಾರೀ ಕೋಲಾಹಲ ಸೃಷ್ಟಿಸಿತ್ತು.

ಬಳಿಕ ಕನ್ನಡ ರಕ್ಷಣಾ ವೇದಿಕೆಯ ಅಧ್ಯಕ್ಷ ಅನಿಲ್‌ಕುಮಾರ್ ಅವರು ಈ ಹಗರಣ ಕುರಿತು ಲೋಕಾಯುಕ್ತಕ್ಕೆ ದೂರು ನೀಡಿ ತನಿಖೆಗೆ ಕೋರಿದ್ದರು. ಅನಿಲ್‌ಕುಮಾರ್ ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿ ಮಾಸಿಕ ಸಭೆಯಲ್ಲಿ ಸದಸ್ಯ ಪೃಥ್ವಿನಾಥ್ ಮಾಡಿದ ಗಂಭೀರ ಆರೋಪದ ಬಗ್ಗೆ ಮಾಹಿತಿ ಹಕ್ಕಿನಲ್ಲಿ ವಿವರ ಬಯಸಿದಾಗ ಪಂಚಾಯಿತಿ ಸೂಕ್ತ ಮಾಹಿತಿ ನೀಡಲಿಲ್ಲ. ಪೀಠೋಪಕರಣ ಖರೀದಿಗೆ ಸಭೆಯ ಒಪ್ಪಿಗೆ ಇಲ್ಲ. ಖರೀದಿಯಲ್ಲಿ ಎಲ್ಲಾ ನಿಯಮ ನಿಬಂಧನೆಗಳನ್ನು ಗಾಳಿಗೆ ತೂರಲಾಗಿತ್ತು. ಇ ಟೆಂಡರ್ ಇಲ್ಲದಿರುವುದು, ಸೇರಿ ಕೆಲವು ಸಂದೇಹಗಳಿದ್ದು ಸರಕಾರದ ಹಣ ದುರುಪಯೋಗ ಆಗಬಾರದು ಎಂಬ ಕಾಳಜಿಯಿಂದ ಇದರ ಸಮಗ್ರ ತನಿಖೆಯಾಗಲೆಂದು ಲೋಕಾಯುಕ್ತಕ್ಕೆ ದೂರು ನೀಡಿದ್ದೆ ಎಂದು ತಿಳಿಸಿದರು. ಇದೀಗ ತನಿಖೆ ಆರಂಭವಾಗಿದ್ದು, ಈ ಹಗರಣದಲ್ಲಿ ಭಾಗಿಯಾಗಿರುವವರ ಬಣ್ಣ ಬಯಲಾಗುವ ಸಾಧ್ಯತೆಗಳಿವೆ.

ಕಿಟಕಿ ಸರಳು ಮುರಿದು ಅಕ್ಕಿ ತಿಂದ ಕಾಡಾನೆ

ಸೋಮವಾರಪೇಟೆ, ಜು.27– ಮನೆಯ ಕಿಟಕಿಯ ಸರಳನ್ನು ಮುರಿದ ಕಾಡಾನೆ ಅಕ್ಕಿಯನ್ನು ತಿಂದು ಹೋಗಿರುವ ಘಟನೆ ಸಮೀಪದ ಗಣಗೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ವಿಕಾಶ್ ಎಂಬವರ ಮನೆಗೆ ಬುಧವಾರ ಮುಂಜಾನೆ 3 ಗಂಟೆ ಸಮಯದಲ್ಲಿ ಬಂದ ಕಾಡಾನೆ ಕಿಟಕಿಯ ಸರಳನ್ನು ಮುರಿದು ಸೊಂಡಿಲ ಮುಖಾಂತರ 50 ಕೆ.ಜಿ. ತೂಕದ ಚೀಲದಿಂದ ಅಕ್ಕಿಯನ್ನು ತಿಂದಿದೆ. ಶಬ್ದದಿಂದ ಎಚ್ಚರಗೊಂಡ ವಿಕಾಶ್ ಮತ್ತು ಅವರ ತಾಯಿ ಪಾರ್ವತಿ ಬೊಬ್ಬೆ ಹೊಡೆದಿದ್ದಾರೆ. ನಂತರ ಕಾಡಾನೆ ಸ್ಥಳದಿಂದ ತೆರಳಿದೆ. ಬುಧವಾರ ಸ್ಥಳಕ್ಕೆ ಆರ್‌ಎಫ್‌ಓ ಚೇತನ್, ಫಾರೆಸ್ಟರ್ ರಾಕೇಶ್ ಸ್ಥಳ ಪರಿಶೀಲನೆ ನಡೆಸಿದರು. ಕಾಡಾನೆ ದಾಳಿಯಿಂದ ಮನೆಯ ಕಿಟಕಿ ಹಾಗೂ ಗೋಡೆಗೆ ಹಾನಿಯಾಗಿದೆ. ಸೂಕ್ತ ಪರಿಹಾರವನ್ನು ಕೊಡಬೇಕೆಂದು ವಿಕಾಶ್ ಒತ್ತಾಯಿಸಿದ್ದಾರೆ.

ಮಡಿಕೇರಿ ತಡೆಗೋಡೆ ತಾತ್ಕಾಲಿಕ ದುರಸ್ತಿ

• ಸಾವಿರಾರು ಮರಳು ಮೂಟೆ ಅಳವಡಿಸಿ ಮುಂಜಾಗ್ರತೆ • ಲಘು ವಾಹನಗಳ ಸಂಚಾರಕ್ಕೆ ಮುಕ್ತ



ಮಡಿಕೇರಿ,ಜು.27– ನಗರದ ಜಿಲ್ಲಾಡಳಿತ ಭವನದ ತಡೆಗೋಡೆ ಕುಸಿದ ಪ್ರದೇಶದಲ್ಲಿ ತಾತ್ಕಾಲಿಕ ದುರಸ್ತಿ ಕಾರ್ಯ ನಡೆಸಲಾಗಿದ್ದು, ಸಾವಿರಾರು ಮರಳು ಮೂಟೆಗಳನ್ನು ಅಳವಡಿಸಿ ತಡೆಗೋಡೆ ಮತ್ತಷ್ಟು ಕುಸಿಯದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ.

ಹೀಗಾಗಿ ಲಘು ವಾಹನಗಳ ಸಂಚಾರಕ್ಕೆ ಈ ರಸ್ತೆಯನ್ನು ಮುಕ್ತಗೊಳಿಸಲಾಗಿದೆ. ಜಿಲ್ಲಾಡಳಿತ ಭವನದ ಮುಂಭಾಗದ ರಾಷ್ಟ್ರೀಯ ಹೆದ್ದಾರಿಯಲ್ಲಿ 8 ಸೀಟ್‌ವರೆಗಿನ ವಾಹನಗಳು ದ್ವಿಮುಖವಾಗಿ ಸಂಚರಿಸಲು ಅವಕಾಶ ನೀಡಲಾಗಿದೆ. 8 ಸೀಟ್‌ಗಿಂತ ಹೆಚ್ಚಿನ ಸಾಮರ್ಥ್ಯದ 4 ಚಕ್ರ ವಾಹನಗಳು ಮಂಗಳೂರು ಕಡೆಗೆ ಏಕಮುಖವಾಗಿ ಸಂಚರಿಸಬಹುದಾಗಿದೆ. 8 ಸೀಟ್‌ಗಿಂತ ಹೆಚ್ಚಿನ ಸಾಮರ್ಥ್ಯದ 4 ಚಕ್ರ ವಾಹನಗಳು ಮಂಗಳೂರಿನಿಂದ ಮಡಿಕೇರಿ ಕಡೆಗೆ ಸಂಪಾಜೆ–ತಾಳತ್ತಮನೆ–ಮೇಕೇರಿ ಮಾರ್ಗವಾಗಿ ಏಕಮುಖವಾಗಿ ಸಂಚರಿಸಬಹುದಾಗಿದೆ. 16.2 ಟನ್ ಒಳಪಟ್ಟ ಸರಕು ಸಾಗಣೆ ವಾಹನಗಳು, ಖಾಸಗಿ ಮತ್ತು ಕೆಎಸ್‌ಆರ್ ಟಿಸಿ ಬಸ್‌ಗಳು, ಅನಿಲ, ರಸಗೊಬ್ಬರ ಹಾಗೂ ಇಂಧನ ಸಾಗಣೆ ವಾಹನಗಳು ಮಡಿಕೇರಿ–ತಾಳತ್ತಮನೆ ಹಾಗೂ ತಾಳತ್ತಮನೆ–ಮೇಕೇರಿ ಈ ಎರಡೂ ರಸ್ತೆಗಳಲ್ಲಿ ಏಕಮುಖವಾಗಿ ಸಂಚಾರ ನಡೆಸಲು ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ ಆದೇಶ ಹೊರಡಿಸಿದ್ದಾರೆ.

ಈ ಆದೇಶದಿಂದ ಮಡಿಕೇರಿ–ತಾಳತ್ತಮನೆ, ತಾಳತ್ತಮನೆ–ಮೇಕೇರಿ–ಮಡಿಕೇರಿ ರಸ್ತೆಯಲ್ಲಿ ವಾಹನಗಳ ದಟ್ಟಣೆ ಕಡಿಮೆಯಾಗಲಿದೆ. ಮಾತ್ರವಲ್ಲದೇ, ಲಘು ವಾಹನಗಳು ಹೆಚ್ಚುವರಿ 10 ಕಿ.ಮೀ ಕ್ರಮಿಸುವ ಅನಿವಾರ್ಯತೆಯಿಂದ ಮುಕ್ತಿ ಪಡೆದಿದ್ದು, ಸ್ಥಳೀಯರು ನಿಟ್ಟುಸಿರು ಬಿಡುವಂತಾಗಿದೆ.

ಶಾಲಾ ಬಾಲಕಿಯರನ್ನು ಹಿಂಬಾಲಿಸಿದ ಪೊಲೀಸ್ ಪೇದೆ

ಪೇದೆಯನ್ನು ಕೊಠಡಿಯಲ್ಲಿ ಕೂಡಿ ಹಾಕಿ ಹಿರಿಯ ಅಧಿಕಾರಿಗಳಿಗೆ ಒಪ್ಪಿಸಿದ ಗ್ರಾಮಸ್ಥರು

ವಿರಾಜಪೇಟೆ, ಜು.27– ಸಾರ್ವಜನಿಕ ಆಸ್ತಿ–ಪಾಸ್ತಿ, ಮಾನ ಪ್ರಾಣ ಕಾಪಾಡುವ ಮೂಲಕ ಕಾನೂನು ಪಾಲಿಸ ಬೇಕಾದ ಪೊಲೀಸ್ ಪೇದೆಯೇ ಶಾಲಾ ಬಾಲಕಿಯರನ್ನು ಹಿಂಬಾಲಿಸಿ ಅಸಭ್ಯವಾಗಿ ವರ್ತಿಸಿ ಸಿಕ್ಕಿ ಬಿದ್ದಿರುವ ಘಟನೆ ವರದಿಯಾಗಿದ್ದು, ಇದು ಬೇಲಿಯೇ ಎದ್ದು ಹೊಲ ಮೇಯ್ದ ಪ್ರಕರಣವಾಗಿದೆ.

ಶಾಲಾ ಬಾಲಕಿಯರನ್ನು ಹಿಂಬಾಲಿಸಿ ಅಸಭ್ಯವಾಗಿ ವರ್ತಿಸುವ ಮೂಲಕ ಕಿರುಕುಳ ನೀಡುತ್ತಿದ್ದ ಪೊಲೀಸ್ ಪೇದೆಯೊಬ್ಬನನ್ನು ಗ್ರಾಮಸ್ಥರೇ ಹಿಡಿದು ಕೊಠಡಿಯಲ್ಲಿ ಕೂಡಿ ಹಾಕಿ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಒಪ್ಪಿಸಿದ ಘಟನೆ ಸಮೀಪದ ಒಂಟಿಯಂಗಡಿಯಲ್ಲಿ ಸಂಭವಿಸಿದೆ. ವಿರಾಜಪೇಟೆ ಬಳಿಯ ಅಮ್ಮತ್ತಿ ಪೊಲೀಸ್ ಉಪ ಠಾಣೆಯ ಪೇದೆ ಚಂದ್ರಶೇಖರ್ ಎಂಬಾತನೇ ಇಂತಹ ಹೇಸಿಗೆ ಕೆಲಸ ಮಾಡಿ ಸಿಕ್ಕಿ ಬಿದ್ದವನಾಗಿದ್ದಾನೆ.

ಕಳೆದ ಕೆಲದಿನಗಳಿಂದ ಈತ ಶಾಲಾ ಬಾಲಕಿಯರನ್ನು ಹಿಂಬಾಲಿಸುವುದು, ಕೈ ಸನ್ನೆ ಮಾಡುವುದು, ಅಸಭ್ಯವಾಗಿ ವರ್ತಿಸುವುದನ್ನು ಕಂಡು ಶಾಲಾ ಬಾಲಕಿಯರು ಪೋಷಕರಿಗೆ ಮಾಹಿತಿ ನೀಡಿದ್ದು, ಮರು ದಿನವೂ ಬಾಲಕಿಯರು ತೆರಳುತ್ತಿದ್ದ ಆಟೋರಿಕ್ಷಾವನ್ನು ಹಿಂಬಾಲಿಸಿ ಬರುತ್ತಿದ್ದ ಪೊಲೀಸ್ ಪೇದೆಯನ್ನು ಒಂಟಿಯಂಗಡಿ ಗ್ರಾಮಸ್ಥರು ತಡೆದು ಪ್ರಶ್ನಿಸಿ ಬಳಿಕ ಕೊಠಡಿಯೊಂದರಲ್ಲಿ ಕೂಡಿ ಹಾಕಿ ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಬರುವವರೆಗೂ ಬಿಡುವುದಿಲ್ಲ ಎಂದು ಪಟ್ಟು ಹಿಡಿದರು.

ಬಳಿಕ ವಿಷಯ ತಿಳಿದ ಡಿವೈಎಸ್‌ಪಿ ನಿರಂಜನ್ ರಾಜೇ ಅರಸ್ ಸ್ಥಳಕ್ಕೆ ಆಗಮಿಸಿ ಗ್ರಾಮಸ್ಥರ ಮನವೊಲಿಸಿ ಸೂಕ್ತ ಕ್ರಮ ಕೈಗೊಳ್ಳುವ ಭರವಸೆ ನೀಡಿ ನಂತರ ಪೇದೆಯನ್ನು ಕರೆದೊಯ್ದರು. ವಿರಾಜಪೇಟೆ ಗ್ರಾಮಾಂತರ ಠಾಣೆಯಲ್ಲಿ ಆರೋಪಿ ವಿರುದ್ಧ ಪ್ರಕರಣ ದಾಖಲಾಗಿದೆ.

ಪ್ರವೀಣ್ ಹತ್ಯೆ ಖಂಡಿಸಿ ಗುಡ್ಡೆಹೊಸೂರಿನಲ್ಲಿ ಪ್ರತಿಭಟನೆ

ಗುಡ್ಡೆಹೊಸೂರು, ಜು.27– ಸುಳ್ಯದಲ್ಲಿ ಹಿಂದೂಪರ ಸಂಘಟನೆಯ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಹತ್ಯೆಯನ್ನು ಖಂಡಿಸಿ ಗುಡ್ಡೆಹೊಸೂರಿನಲ್ಲಿ ಹಿಂದೂಪರ ಸಂಘಟನೆ ಮತ್ತು ಬಿಜೆಪಿ ವತಿಯಿಂದ ಸಂಜೆ ಪ್ರತಿಭಟನೆ ನಡೆಸಲಾಯಿತು.

ಈ ಸಂದರ್ಭ ಇಲ್ಲಿನ ಬಿ.ಜೆ.ಪಿ ಶಕ್ತಿ ಕೇಂದ್ರದ ಪ್ರಮುಖರಾದ ಕುಡೆಕ್ಕಲ್ ನಿತ್ಯ ಮತ್ತು ಸಹಪ್ರಮುಖರಾದ ಪ್ರವೀಣ್, ಜಿಲ್ಲಾ ಬಿ.ಜೆ.ಪಿ ಕಾರ್ಯದರ್ಶಿ ಪುಷ್ಪನಾಗೇಶ್, ಎಬಿವಿಪಿಯ ಪ್ರಾಂತ್ಯ ಸಂಘಟನಾ ಕಾರ್ಯದರ್ಶಿ ಟಿ.ಎಸ್.ಜಯಪ್ರಕಾಶ್, ಗ್ರಾಪಂ ಸದಸ್ಯರಾದ ಪ್ರದೀಪ್, ಮಂಡೆಪಂಡ ಮಾದಪ್ಪ, ಜಿ.ಎಂ.ಸಲಿ, ಜಿ.ಎಂ.ವಿಶುಕುಮಾರ್, ಬಿ.ಎಸ್.ಧನಪಾಲ್, ಅಭಿಷೇಕ್(ಅಭಿ) ಮಹೇಶ್ ಮುಂತಾದವರು ಹಾಜರಿದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕರಿಂದ ಚಾಲನೆ



ಪಾಂಡವಪುರ, ಜು.27– ತಾಲೂಕಿನ ಕಟ್ಟೇರಿ ಹಾಗೂ ಅರಳಕುಪ್ಪೆ ಗ್ರಾಪಂ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಬುಧವಾರ ಶಾಸಕ ಸಿ.ಎಸ್.ಪುಟ್ಟರಾಜು ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ತಾಲೂಕಿನ ಅರಳಕುಪ್ಪೆ ಹಾಗೂ ಕಟ್ಟೇರಿ ಗ್ರಾಪಂ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಹೊಸಕನ್ನಂಬಾಡಿ ಗ್ರಾಮದ ಸರ್ವತೋಮುಖವಾದ ಅಭಿವೃದ್ಧಿಗೆ ಈಗಾಗಲೇ ಕ್ರಮ ವಹಿಸಲಾಗಿದೆ. ಗ್ರಾಮದಿಂದ ಕೆಆರ್‌ಎಸ್ ಹಿನ್ನೀರಿನ ವೇಣುಗೋಪಾಲಸ್ವಾಮಿ ದೇವಸ್ಥಾನಕ್ಕೆ ಸಂಪರ್ಕ ಕಲ್ಪಿಸುವಂತಹ ರಸ್ತೆ ಅಭಿವೃದ್ಧಿಗೆ ಈ ಹಿಂದೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ವಿ.ಸೋಮಣ್ಣ ಅವರು ಅನುದಾನ ಬಿಡುಗಡೆ ಮಾಡುವ ಭರವಸೆ ನೀಡಿದ್ದರು. ಆದರೆ, ಅನುದಾನ ಬಿಡುಗಡೆಯಾಗದ ಹಿನ್ನೆಲೆಯಲ್ಲಿ ರಸ್ತೆ ಅಭಿವೃದ್ಧಿಪಡಿಸಲು ಸಾಧ್ಯವಾಗಲಿಲ್ಲ. ಇದೀಗ ಕೆಆರ್‌ಎಸ್ ಅಣೆಕಟ್ಟೆಗೆ ಬಾಗಿನ ಅರ್ಪಿಸಲು ಬಂದಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅನುದಾನ ಬಿಡುಗಡೆ ಮಾಡುವ ಭರವಸೆ ನೀಡಿದ್ದು, ಶೀಘ್ರವೇ ರಸ್ತೆಯನ್ನು ಅಭಿವೃದ್ಧಿಪಡಿಸಲಾಗುವುದು ಎಂದರು.

ವಿವಿಧ ಯೋಜನೆಗೆ ಚಾಲನೆ: ಇದೇ ವೇಳೆ ಕಟ್ಟೇರಿ ಗ್ರಾಪಂ ವ್ಯಾಪ್ತಿಯ ಹೊಸಕನ್ನಂಬಾಡಿ 10ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಿ ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಚಾಲನೆ, ಬಸ್ತೀಹಳ್ಳಿ ಗ್ರಾಮದಲ್ಲಿ 12 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗಿರುವ ಜಗಜೀವನ್ ರಾಮ್ ಭವನ ಉದ್ಘಾಟನೆ, ಚಿಕ್ಕಾಯರಹಳ್ಳಿ ಗ್ರಾಮದ ಹೊರವಲಯದಲ್ಲಿ ಗ್ರಾಪಂ ವತಿಯಿಂದ 9.50 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗಿರುವ ಘನ ತ್ಯಾಜ್ಯ ನಿರ್ಮಾಣ ಘಟಕಕ್ಕೆ ಚಾಲನೆ, ಚಿಕ್ಕಾಯರಹಳ್ಳಿ ಗ್ರಾಮದಲ್ಲಿ 10 ಲಕ್ಷ ವೆಚ್ಚದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣಕ್ಕೆ ಭೂಮಿಪೂಜೆ, ಕಟ್ಟೇರಿ ಗ್ರಾಪಂನ ಪಕ್ಕದಲ್ಲಿರುವ ಹಳೇ ಕಟ್ಟಡದಲ್ಲಿ ಹೊಸದಾಗಿ ನಿರ್ಮಿಸಲಾಗಿರುವ ಡಿಜಿಟಲ್ ಗ್ರಂಥಾಲಯಕ್ಕೆ ಉದ್ಘಾಟನೆ, ಗ್ರಾಪಂ ಪಕ್ಕದಲ್ಲಿ 17.50 ಲಕ್ಷ ವೆಚ್ಚದಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ಸಲ್ಲಿಸಲಾಯಿತು.

ಅರಳಕುಪ್ಪೆ ಗ್ರಾಪಂ ವ್ಯಾಪ್ತಿಯ ಸೀತಾಪುರದಲ್ಲಿ ಭೂ ಸೇನಾ ನಿಗಮದಿಂದ 60 ಲಕ್ಷ ವೆಚ್ಚದಲ್ಲಿ ಸೀತಾಪುರ–ಅರಳಕುಪ್ಪೆ ಸಂಪರ್ಕಿಸುವ ರಸ್ತೆ ಅಭಿವೃದ್ಧಿ, 10 ಲಕ್ಷ ವೆಚ್ಚದಲ್ಲಿ ಪರಿಶಿಷ್ಟ ಕಾಲೋನಿಗೆ ಸಂಪರ್ಕಿಸುವ ಕಾಂಕ್ರೀಟ್ ರಸ್ತೆ ಅಭಿವೃದ್ಧಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣಾಭಿವೃದ್ಧಿ ಇಲಾಖೆಯಿಂದ 12 ಲಕ್ಷ ವೆಚ್ಚದಡಿ ನಿರ್ಮಿಸಲಾಗಿರುವ ನೂತನ ಅಂಗನವಾಡಿ ಕಟ್ಟಡಕ್ಕೆ ಚಾಲನೆ ನೀಡಲಾಯಿತು. ಅರಳಕುಪ್ಪೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 80 ಮಕ್ಕಳಿಗೆ ಬಿಸಿಯೂಟ ಯೋಜನೆಯಡಿ ಊಟದ ಜೊತೆಗೆ ಮೊಟ್ಟೆ, ಬಾಳೆಹಣ್ಣು ವಿತರಣೆಗೆ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ಕಟ್ಟೇರಿ ಗ್ರಾಪಂ ಅಧ್ಯಕ್ಷೆ ಸುಮಾ, ಉಪಾಧ್ಯಕ್ಷ ಲೋಕೇಶ್, ಮಾಜಿ ಉಪಾಧ್ಯಕ್ಷ ರಾಜೇಂದ್ರ, ಸದಸ್ಯರಾದ ರಮ್ಯ ರಘು, ನಾಗರತ್ನ, ಕೃಷ್ಣಮೂರ್ತಿ, ವಿಷ ಕಂಠೇಗೌಡ, ರಾಧಿಕಾ, ಅರಳಕುಪ್ಪೆ ಗ್ರಾಪಂ ಅಧ್ಯಕ್ಷೆ ಲಲಿತಮ್ಮ, ಉಪಾಧ್ಯಕ್ಷ ಪೇಡ ರವಿ, ಸದಸ್ಯರಾದ ಉಮೇಶ್, ಶಿವರಾಮು, ಅಶೋಕ್, ಸುನಂದಮ್ಮ, ವಿನುತಾ, ಪಿಎಸಿಎಸ್ ಅಧ್ಯಕ್ಷ ಎನ್.ವಿಶ್ವನಾಥ್, ಇಓ ಗಿರೀಶ್, ಬಿಇಓ ಲೋಕೇಶ್, ಎಂಜಿನಿಯರ್ ಕುಮಾರ್, ಕೃಷಿ ಸಹಾಯ ನಿರ್ದೇಶಕಿ ಪ್ರಿಯದರ್ಶಿನಿ, ತೋಟಗಾರಿಕೆ ಸಹಾಯಕಿ ನಿರ್ದೇಶಕಿ ಸೌಮ್ಯ, ರೇಷ್ಮೆ ಇಲಾಖೆ ನಿರ್ದೇಶಕ ರವಿಕುಮಾರ್, ಭೂ ಸೇನಾ ನಿಗಮದ ಎಇಇ ಮಂಜುನಾಥ್, ಎಇ ಪವಿತ್ರಾ, ಪಿಡಿಓಗಳಾದ ಮಹೇಶ್, ದೇವರಾಜು, ಮುಖಂಡರಾದ ಅಂಕೇಗೌಡ, ಸೋಮಾಚಾರಿ, ದೇಶವಳ್ಳಿ ಪ್ರಭಾಕರ್, ಗಂಗಾಧರ, ನಂದೀಶ್, ಪ್ರಶಾಂತ್, ಮಹೇಶ್, ಕಿಶೋರ, ರಾಮಕೃಷ್ಣ, ಸ್ವಾಮೀಗೌಡ, ಗಣೇಶ್, ನಾಗೇಗೌಡ ಹಾಜರಿದ್ದರು.

ಕಾರ್ಗಿಲ್ ವಿಜಯ ದಿವಸ್ ಆಚರಣೆ



ಮಂಡ್ಯ, ಜು.27– ಕಾರ್ಗಿಲ್‌ನಲ್ಲಿ ಪಾಕಿಸ್ತಾನಿ ಸೈನಿಕರ ವಿರುದ್ಧದ ಯುದ್ಧದಲ್ಲಿ ಭಾರತ ಜಯ ಸಾಧಿಸಿ 23 ವರ್ಷಗಳು ಕಳೆದ ಹಿನ್ನೆಲೆ ನಗರದ ಗಾಂಧಿಭವನದಲ್ಲಿ ಬುಧವಾರ ಕಲಾತಪಸ್ವಿ ಟ್ರಸ್ಟ್ ಮಂಡ್ಯ, ಡಾ.ಸಿ.ನಿಂಗರಾಜುಗೌಡ ಫೌಂಡೇಶನ್, ಚಿದಂಬರ ನಟೇಶ ನಾಟ್ಯ ಶಾಲೆ ಮಂಡ್ಯ ವತಿಯಿಂದ ಕಾರ್ಗಿಲ್ ವಿಜಯ ದಿವಸ ಆಚರಿಸಲಾಯಿತು.

ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯ ಡಾ.ಈ.ಸಿ.ನಿಂಗರಾಜುಗೌಡ ಮಾತನಾಡಿ, ದೇಶಕ್ಕಾಗಿ ತಮ್ಮ ಪ್ರಾಣ ತ್ಯಾಗ ಮಾಡಿದ ಭಾರತೀಯ ವೀರರನ್ನು ಸ್ಮರಿಸಲು ಕಾರ್ಗಿಲ್ ವಿಜಯ ದಿವಸವನ್ನು ದೇಶಾದ್ಯಂತ ಆಚರಿಸಲಾಗುತ್ತದೆ. 1999ರಲ್ಲಿ ಪಾಕಿಸ್ತಾನಿ ಪಡೆಗಳು ಆಕ್ರಮಿಸಿಕೊಂಡಿದ್ದ ಪರ್ವತ ಪ್ರದೇಶಗಳ ಮೇಲೆ ಭಾರತೀಯ ಸೈನಿಕರು ಹಿಡಿತ ಸಾಧಿಸಿದಾಗ ಕಾರ್ಗಿಲ್ ಯುದ್ಧವು ಕೊನೆಗೊಂಡಿತು. ಅಂದಿನಿಂದ ಜು. 26ರನ್ನು ಕಾರ್ಗಿಲ್ ವಿಜಯೋತ್ಸವ ಎಂದು ಆಚರಿಸಿ, ಮಕ್ಕಳಲ್ಲಿ ದೇಶಪ್ರೇಮ ಬೆಳೆಸುವುದು ಯೋಧರಿಗೆ ಗೌರವ ಸಲ್ಲಿಸುವುದು ಸಾಗುತ್ತಿದೆ ಎಂದರು.

ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ 527 ವೀರ ಯೋಧರಿಗೆ ಕಲಾತಪಸ್ವಿ ಟ್ರಸ್ಟ್‌ನ ವಿದ್ಯಾರ್ಥಿಗಳು ದೀಪ ನಮನ ಸಲ್ಲಿಸಿದರು. ಚಿದಂಬರ ನಟೇಶ ನಾಟ್ಯ ಶಾಲೆಯ ವಿದ್ಯಾರ್ಥಿಗಳು ದೇಶಭಕ್ತಿ ಗೀತೆಗೆ ನೃತ್ಯ ಪ್ರದರ್ಶನ ನೀಡಿದರು. ಕಾರ್ಯಕ್ರಮದಲ್ಲಿ ನಂಜಮ್ಮ–ಮೋಟೇಗೌಡ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ಕೆ.ಟಿ.ಹನುಮಂತು, ಭಜರಂಗ ಸೇನೆ ರಾಜ್ಯಾಧ್ಯಕ್ಷ ಡಿ.ಮಂಜುನಾಥ್, ಮಿಮ್ಸ್‌ನ ವೈದ್ಯರಾದ ಡಾ.ಪೂರ್ಣಿಮಾ, ಪೊದಾರ್ ಇಂಟರ್ ನ್ಯಾಷನಲ್ ಸ್ಕೂಲ್‌ನ ಪ್ರಾಂಶುಪಾಲ ವಿಜಯ್ ರಾಜ್‌ರೋಮನ್, ರಿಪಬ್ಲಿಕ್ ಸೆಂಟ್ರಲ್ ಸ್ಕೂಲ್‌ನ ಪ್ರಧಾನ ಕಾರ್ಯದರ್ಶಿ ಎಸ್.ಮಂಜು, ಚಿದಂಬರ ನಟೇಶ ನಾಟ್ಯ ಶಾಲೆ ನಿರ್ದೇಶಕಿ ವಿದುಷಿ ಸುನಿತಾ ನಂದಕುಮಾರ್, ಕರ್ನಾಟಕ ಲಲಿತ ಕಲಾ ಅಕಾಡೆಮಿ ಸದಸ್ಯ ವಿನೋದ್‌ಕುಮಾರ್, ಕಲಾವಿದರಾದ ಎಂ.ಶಿವಪ್ರಸಾದ್, ವಿದ್ಯಾಶ್ರೀ, ಲಾವಣ್ಯ, ಶ್ರೀಕಂಠೇಗೌಡ, ಲೋಹಿತ್‌ಕುಮಾರ್, ಕಲಾತಪಸ್ವಿ ಟ್ರಸ್ಟ್ ಕಾರ್ಯದರ್ಶಿ ಅನಿಲ್ ಕುಮಾರ್ ಸೇರಿದಂತೆ ಹಲವರಿದ್ದರು.

ಹಾಲಿನ ಉತ್ಪನ್ನಗಳ ಮೇಲಿನ ಜಿಎಸ್‌ಟಿ ರದ್ಧತಿಗೆ ಆಗ್ರಹಿಸಿ ಪ್ರತಿಭಟನೆ

ಮದ್ದೂರು, ಜು.27– ಹಾಲು ಹಾಗೂ ಹಾಲಿನ ಉತ್ಪನ್ನ, ಹೈನುಗಾರಿಕೆ ಯಂತ್ರೋಪಕರಣಗಳ ಮೇಲೆ ಹಾಕಿರುವ ಜಿಎಸ್‌ಟಿ ತೆರಿಗೆ ರದ್ದುಪಡಿಸಲು ಆಗ್ರಹಿಸಿ ಮದ್ದೂರು ತಾಲೂಕು ಕಚೇರಿ ಮುಂಭಾಗ ಬುಧವಾರ ಮದ್ದೂರು ತಾಲೂಕು ಹಾಲು ಉತ್ಪಾದಕ ರೈತರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕರ್ನಾಟಕ ಪ್ರಾಂತ ರೈತ ಸಂಘ ತಾಲೂಕು ಪ್ರಧಾನ ಕಾರ್ಯದರ್ಶಿ ಟಿ.ಯಶವಂತ ಮಾತನಾಡಿ, ರೈತರ ಆದಾಯ ದುಪ್ಪಟ್ಟು ಮಾಡುವುದಾಗಿ ಹೇಳಿದ್ದ ನರೇಂದ್ರ ಮೋದಿ ಅವರು ಈಗ ರೈತರ ಉತ್ಪನ್ನಗಳಿಗೆ ತೆರಿಗೆ ಹಾಕುವ ಮೂಲಕ ರೈತರ ನಷ್ಟವನ್ನು ದುಪ್ಪಟ್ಟುಗೊಳಿಸುತ್ತಿದ್ದಾರೆ. ಯಾವುದೇ ಕಾರಣಕ್ಕೂ ರೈತರ ಉತ್ಪನ್ನಗಳಿಗೆ ತೆರಿಗೆ ಹಾಕುವುದಿಲ್ಲ ಎಂದು ಸಂಸತ್ತಿನಲ್ಲಿ ನೀಡಿದ್ದ ಭರವಸೆಗೆ ವಿರುದ್ಧವಾಗಿ ಜಿಎಸ್‌ಟಿ ಹಾಕುವ ಮೂಲಕ ವಚನ ದ್ರೋಹ ಎಸಗಿದ್ದಾರೆ ಎಂದು ಆರೋಪಿಸಿದರು.

ಗೆಜ್ಜಲಗೆರೆ ಪ್ರಾಥಮಿಕ ಸಹಕಾರ ಸಂಘದ ನಿರ್ದೇಶಕ ಚಂದ್ರಶೇಖರ್ ಮಾತನಾಡಿ, ಜಿಲ್ಲೆಯ ಜನರು ತಮ್ಮ ಜೀವನೋಪಾಯಕ್ಕೆ ಹೈನುಗಾರಿಕೆ ಅವಲಂಬಿಸಿದ್ದಾರೆ. ಈಗಾಗಲೇ ನಷ್ಟದಲ್ಲಿರುವ ಜಿಲ್ಲೆಯ ಹೈನುಗಾರಿಕೆಯನ್ನು ಜಿಎಸ್‌ಟಿ ತೆರಿಗೆ ಸಂಪೂರ್ಣವಾಗಿ ಮುಳುಗಿಸಿ, ಜಿಲ್ಲಾ ಹಾಲು ಒಕ್ಕೂಟವನ್ನು ಮುಚ್ಚುವಂತಹ ಪರಿಸ್ಥಿತಿ ಉಂಟಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ತಾಲೂಕಿನ 20 ಪ್ರಾಥಮಿಕ ಹಾಲು ಉತ್ಪಾದಕ ಸಹಕಾರ ಸಂಘಗಳು ಜಿಎಸ್‌ಟಿ ತೆರಿಗೆ ರದ್ದುಪಡಿಸಲು ಆಗ್ರಹಿಸಿ ಸಂಗ್ರಹಿಸಿದ್ದ 1,268 ಹೈನುಗಾರ ರೈತರ ಸಹಿಗಳನ್ನು ಒಳಗೊಂಡ ಹಕ್ಕೊತ್ತಾಯ ಪತ್ರವನ್ನು ತಹಸೀಲ್ದಾರ್ ಟಿ.ಎನ್.ನರಸಿಂಹಮೂರ್ತಿ ಅವರ ಮೂಲಕ ಕೇಂದ್ರ ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ಅವರಿಗೆ ಕಳುಹಿಸಲಾಯಿತು. ಪ್ರತಿಭಟನೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕು ಮುಖಂಡರಾದ ಜವರೇಗೌಡ, ಟಿ.ಆರ್.ಸಿದ್ದೇಗೌಡ, ರಾಮಣ್ಣ, ಶಿವು, ಹೊನ್ನಯ್ಯ, ಮಹದೇವಸ್ವಾಮಿ, ಉಮೇಶ್, ರುದ್ರೇಶ್, ರಮೇಶ್, ಅರುಣ್‌ಕುಮಾರ್, ರವೀಂದ್ರ, ರಾಮಲಿಂಗೇಗೌಡ ಇದ್ದರು.



ಅಪರಿಚಿತ ಯುವತಿ ಶವ ಪತ್ತೆ

ಭಾರತೀನಗರ, ಜು.27– ಇಲ್ಲಿಗೆ ಸಮೀಪದ ಹೆಚ್.ಹೊಸೂರು ಗ್ರಾಮದ ಹೊರವಲಯದ ಹೆಬ್ಬಾಳ ಚನ್ನಯ್ಯ ನಾಲೆಯಲ್ಲಿ ಅಪರಿಚಿತ ಯುವತಿ ಶವ ಪತ್ತೆಯಾಗಿದೆ.

ಸುಮಾರು 20 ರಿಂದ 25 ವರ್ಷದ ಈಕೆಯ ಶವ ಪತ್ತೆಯಾಗಿದ್ದು, ಬಲಗೈಯಲ್ಲಿ ಚಿಕ್ಕಮ್ಮ, ಸಿದ್ದರಾಜು ಎಂದು ಹಚ್ಚೆ ಹಾಕಿಸಿಕೊಂಡಿದ್ದಾರೆ.

ಮಂಡ್ಯ ಜಿಲ್ಲಾಸ್ಪತ್ರೆಯ ಶವಾಗಾರದಲ್ಲಿ ಮೃತದೇಹವನ್ನು ಇರಿಸಲಾಗಿದ್ದು, ವಾರಸುದಾರರು ಯಾರಾದರೂ ಇದ್ದಲ್ಲಿ ಕೆ.ಎಂ.ದೊಡ್ಡಿಯ ಪೊಲೀಸ್ ಠಾಣೆ ಸಂಪರ್ಕಿಸಬೇಕೆಂದು ಪೊಲೀಸರು ಕೋರಿದ್ದಾರೆ. ಈ ಸಂಬಂಧ ಕೆ.ಎಂ. ದೊಡ್ಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬಿಆರ್‌ಟಿನಲ್ಲಿ ಕಾಡಾನೆ ತುಳಿದು ವಾಚರ್ ಸಾವು



ಯಳಂದೂರು, ಜು.27–ಕರ್ತವ್ಯಕ್ಕೆಂದು ಬೈಕ್‌ನಲ್ಲಿ ತೆರಳುತ್ತಿದ್ದ ಅರಣ್ಯ ವೀಕ್ಷಕರೊಬ್ಬರು ಕಾಡಾನೆ ದಾಳಿಗೆ ಮೃತಪಟ್ಟಿದ್ದು, ಇವರ ಪುತ್ರ ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ಬಿಆರ್‌ಟಿ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದ ಕೆ.ಗುಡಿ ವಲಯದಲ್ಲಿ ಬುಧವಾರ ನಡೆದಿದೆ.

ಕೆ.ಗುಡಿ ಬಳಿಯ ಕನ್ನೇರಿ ಕಾಲೋನಿ ನಿವಾಸಿ ಕಿಶೋರ್ ಕುಮಾರ್ (44) ಮೃತಪಟ್ಟ ವಾಚರ್. ಬೈಕ್‌ನ ಹಿಂಬದಿ ಕುಳಿತಿದ್ದ ಅವರ ಪುತ್ರ ಮಾದೇಗೌಡ(20) ಪ್ರಾಣಾಪಾಯದಿಂದ ಪಾರಾಗಿದ್ದು, ಸಣ್ಣಪುಟ್ಟ ಗಾಯಗಳಿಂದ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮೂಲತಃ ಪುಣಜನೂರು ವಲಯದ ವಾಚರ್ ಆಗಿರುವ ಕಿಶೋರ್ ಅವರು ಹೆಚ್ಚುವರಿ ನಿಯೋಜನೆ ಮೇರೆಗೆ ಯಳಂದೂರು ವಲಯದಲ್ಲಿ ಕೆಲಸ ಮಾಡುತ್ತಿದ್ದರು. ಬುಧವಾರ ಬೆಳಗ್ಗೆ ಪುತ್ರನನ್ನು ಕರೆದುಕೊಂಡು ಸೀಮೆಟಿ ಕಳ್ಳತಡೆ ಶಿಬಿರದತ್ತ ಕರ್ತವ್ಯಕ್ಕೆ ಹಾಜರಾಗಲು ಬೈಕ್‌ನಲ್ಲಿ ತೆರಳುತ್ತಿದ್ದರು. ಈ ಸಂದರ್ಭದಲ್ಲಿ ಕುಕ್ಕತ್ತಿಕೂಡು ಸಮೀಪ ಏಕಾಏಕಿ ಕಾಡಾನೆಯೊಂದು ಬೈಕ್ ಅಡ್ಡ ಬಂದು ದಾಳಿ ನಡೆಸಿದೆ. ಇದರಿಂದ ಬೈಕ್‌ನಿಂದ ಕೆಳಗೆ ಬಿದ್ದ ಕಿಶೋರ್ ಕುಮಾರ್ ಅವರನ್ನು ಆನೆ ತುಳಿದು ಸಾಯಿಸಿದೆ. ದಾಳಿಯಿಂದ ಮಾದೇಗೌಡ ಗಾಯಗೊಂಡರು.

ಗಾಯಾಳು ಚೀರಾಡುತ್ತಿದ್ದ ಶಬ್ದ ಕೇಳಿ ಇದೇ ಮಾರ್ಗದಲ್ಲಿ ಕೂಲಿ ಕೆಲಸಕ್ಕೆ ಹೊನ್ನಮೇಟಿಗೆ ತೆರಳುತ್ತಿದ್ದ ಕನ್ನೇರಿ ಕಾಲೋನಿಯ ನಿವಾಸಿಗಳು ಸ್ಥಳಕ್ಕೆ ಧಾವಿಸಿ ಮಾದೇಗೌಡನನ್ನು ರಕ್ಷಿಸಿ, ಅರಣ್ಯ ಇಲಾಖೆ ಸುದ್ದಿ ಮುಟ್ಟಿಸಿದ್ದಾರೆ.

ವನ್ಯಜೀವಿ ಮಂಡಳಿ ಸದಸ್ಯ ಮಲ್ಲೇಶಪ್ಪ, ಅರಣ್ಯ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಬಳಿಕ ಮೃತದೇಹವನ್ನು ಜಿಲ್ಲಾಸ್ಪತ್ರೆಗೆ ಸಾಗಿಸಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ನಗರದ ಸುಲ್ತಾನ್ ಷರೀಫ್ ವೃತ್ತದಲ್ಲಿರುವ ಬಿಆರ್‌ಟಿ ಕಚೇರಿಗೆ ತರಲಾಯಿತು. ಬಿಆರ್‌ಟಿಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಜಿ. ಸಂತೋಷ್ ಕುಮಾರ್, ಎಸಿಎಫ್ ಸುರೇಶ್ ಸೇರಿದಂತೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಿಶೋರ್‌ಕುಮಾರ್ ಮೃತರ ಅಂತಿಮ ದರ್ಶನ ಪಡೆದರು. ಬಳಿಕ ದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ಶಾಲೆಗೆ ಬಂದ ಸಲಗ: ತಾಲೂಕಿನ ಬಿಳಿಗಿರಿರಂಗನ ಬೆಟ್ಟದಲ್ಲಿರುವ ಸರ್ಕಾರಿ ಮೊರಾರ್ಜಿ ವಸತಿ ಶಾಲೆಯ ಆವರಣಕ್ಕೆ ಬುಧವಾರ ಬೆಳಗ್ಗೆ ಸಲಗ ಲಗ್ಗೆ ಇಟ್ಟು ಆತಂಕ ಸೃಷ್ಟಿಸಿತು. ವಿದ್ಯಾರ್ಥಿಗಳು ಭಯಭೀತರಾದರು. ತಕ್ಷಣ ಶಾಲಾ ಸಿಬ್ಬಂದಿ ಅರಣ್ಯ ಇಲಾಖೆಗೆ ಸುದ್ದಿ ಮುಟ್ಟಿಸಿದರು. ಅರಣ್ಯಾಧಿಕಾರಿ ವರುಣ್ ನೇತೃತ್ವದ ತಂಡ ಸ್ಥಳಕ್ಕೆ ಧಾವಿಸಿ ಇಲಾಖೆಯ ಸಲಗವನ್ನು ಶಾಲೆಯ ಆವರಣದಿಂದ ಹೊರಗಡೆ ಓಡಿಸುವಲ್ಲಿ ಯಶಸ್ವಿಯಾದರು. ಅದೃಷ್ಟವಶಾತ್ ಯಾವುದೇ ಅಹಿತಕರ ಘಟನೆ ನಡೆದಿಲ್ಲ. ಪ್ರತಿದಿನ ಗೇಟ್ ಬಳಿ ಸಲಗ ಪ್ರತ್ಯಕ್ಷವಾಗಿ ಅಲ್ಲಲ್ಲಿ ಲದ್ದಿ ಇಟ್ಟು ಹೋಗುತ್ತಿತ್ತು. ಕೆಲವು ದಿನಗಳ ಹಿಂದೆ ಗೇಟ್ ಅನ್ನು ಕೂಡ ಮುರಿದಿತ್ತು.

ರೈತರು, ಜನಸಾಮಾನ್ಯರಿಗೆ ವಿದ್ಯುತ್ ಯೋಜನೆಗಳ ಅರಿವು ಅಗತ್ಯ



ಚಾಮರಾಜನಗರ, ಜು.27–ವಿದ್ಯುತ್ ಕ್ಷೇತ್ರದ ಬೆಳವಣಿಗೆಗಾಗಿ ಇಂಧನ ಇಲಾಖೆಯಿಂದ ಜಾರಿಗೊಳಿಸಿರುವ ಕಾರ್ಯಕ್ರಮಗಳು ಹಾಗೂ ಯೋಜನೆಗಳ ಬಗ್ಗೆ ಜನಸಾಮಾನ್ಯರು ಹಾಗೂ ರೈತಾಪಿ ವರ್ಗದವರಿಗೆ ವ್ಯಾಪಕ ಅರಿವು ಮೂಡಿಸುವ ಕೆಲಸವಾಗಬೇಕು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಪಂ, ಎನ್‌ಟಿಪಿಸಿ, ಕೇಂದ್ರ ಭಾರತ ಸರ್ಕಾರದ ವಿದ್ಯುತ್ ಸಚಿವಾಲಯ ಹಾಗೂ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಇನ್ನಿತರ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ 'ಉಜ್ವಲ ಭಾರತ, ಉಜ್ವಲ ಭವಿಷ್ಯ' ಕುರಿತು ಆಯೋಜಿಸಿದ್ದ ವಿದ್ಯುತ್ ಮಹೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಂತ್ರಜ್ಞಾನ ಅಭಿವೃದ್ಧಿಯಿಂದಾಗಿ ವಿದ್ಯುತ್ ಉತ್ಪಾದನೆ ಮತ್ತು ಪೂರೈಕೆಯಲ್ಲಿ ಇಂದು ಭಾರತ ಸ್ವಾವಲಂಬಿಯಾಗಿದೆ. ಬಡವರಿಗೆ ಭಾಗ್ಯಜ್ಯೋತಿ, ಬೆಳಕು ಯೋಜನೆ, ಕುಟೀರ ಜ್ಯೋತಿ ಸೇರಿದಂತೆ ಇನ್ನಿತರೆ ಜನಪರ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದು, ಈ ಬಗ್ಗೆ ಅರಿವು ಮೂಡಿಸಬೇಕು. ಗ್ರಾಮೀಣ ರೈತರು ಮತ್ತು ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಯೋಜನೆಯ ಸೌಲಭ್ಯ ಸಮರ್ಪಕವಾಗಿ ತಲುಪಿಸಬೇಕು ಎಂದು ಸಲಹೆ ನೀಡಿದರು.

ನಗರಸಭೆ ಅಧ್ಯಕ್ಷೆ ಸಿ.ಎಂ.ಆಶಾ ನಟರಾಜು ಕಾರ್ಯಕ್ರಮ ಉದ್ಘಾಟಿಸಿ, ದಿನನಿತ್ಯದ ಜೀವನದಲ್ಲಿ ಎಲ್ಲರಿಗೂ ವಿದ್ಯುತ್ ಅವಶ್ಯಕ. ಕೃಷಿ ಕ್ಷೇತ್ರದ ಪ್ರಗತಿಗಾಗಿ ಆದ್ಯತೆ ನೀಡಿ ರೈತರಿಗೆ ಅಗತ್ಯವಿರುವಷ್ಟು ವಿದ್ಯುತ್ ಪೂರೈಸಬೇಕು ಎಂದರು.

ಚಾಮರಾಜನಗರ–ಕೊಡಗು ವೃತ್ತದ ಅಧೀಕ್ಷಕ ಇಂಜಿನಿಯರ್ ಎಲ್.ಸೋಮರಾಜು ಮಾತನಾಡಿ, ದೇಶವು 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವವನ್ನು ಆಚರಿಸುತ್ತಿರುವ ಹಿನ್ನೆಲೆಯಲ್ಲಿ ವಿದ್ಯುತ್ ಯೋಜನೆ, ಸಾಧನೆಗಳ ಕುರಿತು ಜಾಗೃತಿ ಮೂಡಿಸಲು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಇಂದು 'ಉಜ್ವಲ ಭಾರತ ಉಜ್ವಲ ಭವಿಷ್ಯ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ನೆರೆ ರಾಷ್ಟ್ರಗಳಿಗೂ ವಿದ್ಯುತ್ ಪೂರೈಸುವಷ್ಟು ಸಾಮರ್ಥ್ಯವನ್ನು ಭಾರತ ಹೊಂದಿದೆ. ಶೇ. 40ರಷ್ಟು ವಿದ್ಯುತ್ ಅನ್ನು 2030ರೊಳಗೆ ನವೀಕರಿಸಬಹುದಾದ ಇಂಧನದ ಮೂಲಕ ಉತ್ಪಾದಿಸುವಂತೆ ವಿಶ್ವಸಂಸ್ಥೆ ಭಾರತಕ್ಕೆ ಗುರಿ ನೀಡಿತ್ತು. ಆದರೆ ಈ ಗುರಿಯನ್ನು 2020ರಲ್ಲಿ ತಲುಪಲು ದೇಶವು ಯಶಸ್ವಿಯಾಗಿದೆ ಎಂದರು.

ಚಾ.ವಿ.ಸ.ನಿ ಕಾರ್ಯ ಮತ್ತು ಪಾಲನೆ ವಿಭಾಗದ ಇಇ ಆರ್.ವಸಂತ್‌ಕುಮಾರ್ ಪ್ರಾಸ್ತವಿಕ ನುಡಿಗಳನ್ನಾಡಿದರು. ಚಾ.ವಿ.ಸ.ನಿ. ನಿಗಮದ ಚಾಮರಾಜನಗರ–ಕೊಡಗು ವೃತ್ತದ ಲೆಕ್ಕಾಧಿಕಾರಿ ಸುಲೋಚನಾ, ಎನ್‌ಟಿಪಿಸಿ ನೋಡೆಲ್ ಅಧಿಕಾರಿ ಸೇತು ಮಾಧವನ್, ಚಾಮರಾಜನಗರ ವಿಭಾಗದ ಲೆಕ್ಕಾಧಿಕಾರಿ ಮಹೇಶ್, ಇತರರು ಕಾರ್ಯಕ್ರಮದಲ್ಲಿದ್ದರು.

ಜು.31, ಸೇವಾ ಕಾರ್ಯದೊಂದಿಗೆ ಧ್ರುವನಾರಾಯಣ್ ಹುಟ್ಟುಹಬ್ಬ ಆಚರಣೆ



ಚಾಮರಾಜನಗರ, ಜು.27–ಕೆಪಿಸಿಸಿ ಕಾರ್ಯಾಧ್ಯಕ್ಷರು ಹಾಗೂ ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರ 61ನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ಜು.31 ರಂದು ಭಾನುವಾರ ಅವರ ಅಭಿಮಾನಿ ಬಳಗದಿಂದ ಜಿಲ್ಲಾದ್ಯಂತ ಸೇವಾ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದ ಕಚೇರಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಧ್ರುವನಾರಾಯಣ್ ಅಭಿಮಾನಿ ಬಳಗದಿಂದ ಪ್ರತಿವರ್ಷವೂ ಅರ್ಥಪೂರ್ಣವಾಗಿ ಅವರ ಹುಟ್ಟುಹಬ್ಬ ಆಚರಿಸಿಕೊಂಡು ಬರಲಾಗಿದೆ. ಈ ಬಾರಿಯೂ ಬೃಹತ್ ಉಚಿತ ಕಣ್ಣಿನ ತಪಾಸಣಾ ಶಿಬಿರ ಹಾಗೂ ಸ್ವಯಂಪ್ರೇರಿತ ರಕ್ತದಾನ ಶಿಬಿರವನ್ನು ಅಂದು ನಗರದ ರೈಲ್ವೆ ನಿಲ್ದಾಣದ ಬಳಿಯ ಮಾಂಗಲ್ಯಂ ಕನ್ವೆನ್ಷನ್ ಹಾಲ್‌ನಲ್ಲಿ ಬೆಳಗ್ಗೆ 8ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಹಮ್ಮಿಕೊಳ್ಳಲಾಗಿದೆ. ವೇದಿಕೆ ಕಾರ್ಯಕ್ರಮವನ್ನು ಸರ್ವಧರ್ಮಗುರುಗಳು ಉದ್ಘಾಟಿಸುವರು ಎಂದು ತಿಳಿಸಿದರು.

2013ರಲ್ಲಿ ನಗರದ ಸೇಂಟ್ ಜೋಸೆಫ್ ಮಕ್ಕಳಿಗೆ ಪುಸ್ತಕ, ಪರಿಕರ ವಿತರಿಸುವ ಮೂಲಕ ಸರಳವಾಗಿ ಆಚರಿಸಲಾಯಿತು. ಅದೇ ರೀತಿ 2014ರಲ್ಲಿ ಕೆ.ಗುಡಿ ಆಶ್ರಯ ಶಾಲೆಗೆ ಪುಸ್ತಕ ಮತ್ತು ಬಟ್ಟೆ ವಿತರಣೆ, 2015ರಲ್ಲಿ ಬೃಹತ್ ಉಚಿತ ಕಣ್ಣಿನ ತಪಾಸಣೆ, 2016ರಲ್ಲಿ ಉಚಿತ ಆರೋಗ್ಯ ತಪಾಸಣೆ, 2017ರಲ್ಲಿ ಉಚಿತ ಸಾಮೂಹಿಕ ವಿವಾಹದಂತಹ ಸೇವಾ ಕಾರ್ಯಕ್ರಮಗಳ ಮೂಲಕ ಸುಮಾರು 10 ವರ್ಷಗಳಿಂದಲೂ ಅಭಿಮಾನಿ ಬಳಗದಿಂದ ಅರ್ಥಪೂರ್ಣವಾಗಿ ಧ್ರುವನಾರಾಯಣ್ ಹುಟ್ಟುಹಬ್ಬ ಆಚರಿಸಿಕೊಂಡು ಬರಲಾಗಿದ್ದು, ಈ ಬಾರಿಯೂ ಸೇವಾ ಕಾರ್ಯದೊಂದಿಗೆ ಹುಟ್ಟುಹಬ್ಬ ಆಚರಿಸಲಾಗುತ್ತಿದೆ ಎಂದರು. ಬಳಗದ ಅಧ್ಯಕ್ಷ ಕಾಗಲವಾಡಿ ಚಂದ್ರು ಮಾತನಾಡಿದರು. ಪತ್ರಿಕಾಗೋಷ್ಠಿಯಲ್ಲಿ ಆರ್.ಧ್ರುವನಾರಾಯಣ್ ಅಭಿಮಾನಿ ಬಳಗದ ಪ್ರಧಾನ ಕಾರ್ಯದರ್ಶಿ ಎಲ್‌ಐಸಿ ನಾಗನಾಯಕ, ಕೆಪಿಸಿಸಿ ಸದಸ್ಯ ಸೈಯದ್ ರಫೀ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಕೆ.ಪಿ.ಸದಾಶಿವಮೂರ್ತಿ, ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿ.ಎ. ಮಹದೇವ ಶೆಟ್ಟಿ, ಚೂಡಾ ಮಾಜಿ ಸದಸ್ಯ ಶ್ರೀಕಾಂತ್ ಹಾಜರಿದ್ದರು.

ಶಂಕರೇಶ್ವರಸ್ವಾಮಿಬೆಟ್ಟದಲ್ಲಿ ಇಂದು ವಿಶೇಷ ಪೂಜೆ

ಚಾಮರಾಜನಗರ, ಜು.27–ತಾಲೂಕಿನ ಯಡಿಯೂರು–ಮಂಗಲ ಗ್ರಾಮಗಳ ನಡುವೆ ಇರುವ ಶ್ರೀಶಂಕರೇಶ್ವರ ಬೆಟ್ಟದಲ್ಲಿ ಭೀಮನ ಅಮಾವಾಸ್ಯೆ ಅಂಗವಾಗಿ ಜು.28 ರಂದು ವಿಶೇಷ ಪೂಜೆ, ಬಿಲ್ವಾರ್ಚನೆ, ಪಂಚಾಮೃತಾಭಿಷೇಕ, ಹುಲಿವಾಹನೋತ್ಸವ, ಭಕ್ತಾದಿಗಳಿಗೆ ಅನ್ನಸಂತರ್ಪಣೆ ನಡೆಯಲಿದೆ.

ಕಾರ್ಯಕ್ರಮದ ಅಂಗವಾಗಿ ಜಾನಪದ ಗಾಯಕ ಡಾ.ಮಳವಳ್ಳಿ ಮಹದೇವಸ್ವಾಮಿ ಅವರಿಂದ ಮಲೆಮಹದೇಶ್ವರಸ್ವಾಮಿ ಕುರಿತ ಹಾಡುಗಾರಿಕೆ ನಡೆಯಲಿದೆ. ಸುತ್ತಮುತ್ತಲ ಗ್ರಾಮಗಳ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು ಎಂದು ಮಂಗಲ, ಯಡಿಯೂರು, ಮಹಂತಾಳಪುರ, ಹುಲ್ಲೇಪುರ, ಕರಡಿಮೋಳೆ, ಹೊಸೂರು ಗ್ರಾಮಸ್ಥರು ಪ್ರಕಟಣೆಯಲ್ಲಿ ಕೋರಿದ್ದಾರೆ.

‘ಎನ್‌ಇಪಿ–2020’ ಶಿಕ್ಷಣ ವ್ಯವಸ್ಥೆಯ ಬದಲಾವಣೆಯಲ್ಲ, ಉನ್ನತ ಪರಿವರ್ತನೆ

ಮೈಸೂರು ವಿವಿ ಸಂಸ್ಥಾಪನಾ ದಿನಾಚರಣೆ ಉದ್ಘಾಟಿಸಿ ತಮಿಳುನಾಡು ರಾಜ್ಯಪಾಲ ಆರ್.ಎನ್.ರವಿ ಅಭಿಮತ



ಮೈಸೂರು,ಜು.27(ಪಿಎಂ)– ದೇಶದ ಪ್ರಜೆಗಳು ಸರಿಯಾದ ಜ್ಞಾನ, ಸೂಕ್ತ ಕೌಶಲ್ಯ ಹೊಂದುವುದು ದೇಶದ ಬೆಳವಣಿಗೆಗೆ ನೇರ ಸಂಬಂಧ ಹೊಂದಿದೆ. ಈ ನಿಟ್ಟಿನಲ್ಲಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿ–2020 (ಎನ್‌ಇಪಿ) ಪ್ರಮುಖ ಪಾತ್ರ ವಹಿಸಲಿದ್ದು, ‘ಎನ್‌ಇಪಿ–2020’ ಶಿಕ್ಷಣ ವ್ಯವಸ್ಥೆಯ ಬದಲಾವಣೆಯಲ್ಲ. ಬದಲಿಗೆ ಅದು ಉನ್ನತ ಪರಿವರ್ತನೆ ಎಂದು ನಿವೃತ್ತ ಐಪಿಎಸ್ ಅಧಿಕಾರಿಗಳೂ ಆದ ತಮಿಳುನಾಡು ರಾಜ್ಯಪಾಲ ಆರ್.ಎನ್.ರವಿ ಅಭಿಪ್ರಾಯಪಟ್ಟರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಬುಧವಾರ ಹಮ್ಮಿಕೊಂಡಿದ್ದ ವಿಶ್ವವಿದ್ಯಾನಿಲಯದ ಸಂಸ್ಥಾಪನಾ ದಿನಾಚರಣೆಯನ್ನು ವಿವಿ ಸಂಸ್ಥಾಪಕರೂ ಆದ ಅಂದಿನ ಮೈಸೂರು ಸಂಸ್ಥಾನದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಚಿತ್ರಪಟಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಉದ್ಘಾಟಿಸಿ, ಅವರು ಮಾತನಾಡಿದರು.

ಭಾರತೀಯ ಜ್ಞಾನ ಪರಂಪರೆಯೊಂದಿಗೆ ಹೊರತಂದಿರುವ ಎನ್‌ಇಪಿ–2020 ನಮ್ಮ ಯುವ ಜನತೆಯಲ್ಲಿ ಆತ್ಮವಿಶ್ವಾಸ ಮೂಡಿಸಲಿದೆ. ಕಳೆದ 7 ದಶಕಗಳಿಂದ ಭಾರತದಲ್ಲಿ ಲಕ್ಷಾಂತರ ಮಂದಿ ಪದವೀಧರರಾಗಿ ಹೊರಹೊಮ್ಮಿದ್ದಾರೆ. ಅಂತೆಯೇ ಅದರಲ್ಲಿ ಸಾಕಷ್ಟು ಮಂದಿ ನಿರುದ್ಯೋಗ ಸಮಸ್ಯೆ ಎದುರಿಸಿದ್ದಾರೆ. ಉದ್ಯೋಗಕ್ಕಾಗಿಯೇ ಪದವಿ ಎಂಬ ಮನೋಭಾವ ಬಹುತೇಕ ಮಂದಿಯಲ್ಲಿದ್ದು, ಪಶ್ಚಿಮದಿಂದ (ಪಾಶ್ಚಿಮಾತ್ಯ) ಬರುವುದೆಲ್ಲವೂ ಶ್ರೇಷ್ಠ ಎಂಬುದನ್ನು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಬಿಂಬಿಸಿರುವುದೇ ಇಂತಹ ಪರಿಸ್ಥಿತಿಗೆ ಕಾರಣ. ಹೀಗಾಗಿ ಮಕ್ಕಳು ಮತ್ತು ಯುವ ಜನತೆಯಲ್ಲಿ ಕೌಶಲ್ಯ ಬೆಳೆಸಿ ಉದ್ಯೋಗಕ್ಕೆ ಪೂರಕ ವಾತಾವರಣ ಕಲ್ಪಿಸುವ ಆಶಯದಿಂದ ಎನ್‌ಇಪಿ–2020 ಅನುಷ್ಠಾನಗೊಳಿಸಲಾಗುತ್ತಿದೆ ಎಂದು ತಿಳಿಸಿದರು.

ನೂತನ ಎನ್‌ಇಪಿಯಲ್ಲಿ ಅಳವಡಿಸಲಾಗಿರುವ ಪಠ್ಯಕ್ರಮವು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ವೃದ್ಧಿಸುತ್ತದೆ. ಪಶ್ಚಿಮದ (ಪಾಶ್ಚಿಮಾತ್ಯ) ಜ್ಞಾನವು ‘ಮಾನವನೇ ಸರ್ವೋಚ್ಚ’ ಎಂಬುದನ್ನು ಕೇಂದ್ರೀಕರಿಸಿದರೆ, ನಮ್ಮ ಭಾರತೀಯ ಸಂಸ್ಕೃತಿ ‘ಮಾನವೀಯ ಮೌಲ್ಯ’ದ ಮಹತ್ವದ ಮೇಲೆ ಬೆಳಕು ಚೆಲ್ಲುತ್ತದೆ. ಮನುಷ್ಯ ಸಂಘ ಜೀವಿ. ಎಲ್ಲಾ ಜೀವಿಗಳ ಜೊತೆ ಹೊಂದಿಕೊಂಡು ಬದುಕಬೇಕು. ಪ್ರಕೃತಿಯನ್ನು ಗೌರವಿಸಿ, ಆರಾಧಿಸಬೇಕು ಎಂಬ ಭಾರತೀಯ ಪರಂಪರೆಯಲ್ಲಿ ಹುದುಗಿರುವ ಮೌಲ್ಯಗಳನ್ನು ನೂತನ ಎನ್‌ಇಪಿ ಒಳಗೊಂಡಿದೆ. ಈ ನಿಟ್ಟಿನಲ್ಲಿ ನೂತನ ಎನ್‌ಇಪಿ ಸಮರ್ಪಕ ಅನುಷ್ಠಾನ ಮುಖ್ಯವಾಗಿದ್ದು, ರಾಜ್ಯದಲ್ಲಿ ನೂತನ ಎನ್‌ಇಪಿ ಅನುಷ್ಠಾನಗೊಳಿಸುವಲ್ಲಿ ಮೈಸೂರು ವಿವಿ ಪ್ರಥಮ ಎಂಬುದು ಸಂತಸದ ವಿಷಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಬ್ರಿಟಿಷರು ಹಂತ–ಹಂತವಾಗಿ ನಾನಾ ಪ್ರದೇಶಗಳನ್ನು ವಶಪಡಿಸಿಕೊಳ್ಳುತ್ತಾ ತಮ್ಮ ಆಡಳಿತ ವಿಸ್ತರಿಸಿದರು. ಇದೇ ಸಮಯದಲ್ಲಿ ಅಮೆರಿಕಾವನ್ನು ವಸಾಹತುವನ್ನಾಗಿ ಮಾಡಿಕೊಂಡಿದ್ದ ಅವರಿಗೆ ಅಲ್ಲಿ ದೊಡ್ಡ ಮಟ್ಟದ ಕ್ರಾಂತಿ ಎದುರಾಯಿತು. ಈ ಕ್ರಾಂತಿಯು ಭಾರತದಲ್ಲಿ ಪ್ರಭಾವ ಉಂಟು ಮಾಡುವುದನ್ನು ತಪ್ಪಿಸಲು ಮುಂದಾದ ಬ್ರಿಟಿಷರು, ನಮ್ಮ ಪಾರಂಪರಿಕ ಶಿಕ್ಷಣ ಪದ್ಧತಿ ಹಾಳುಗೆಡವಿದರು. ತಮ್ಮ ಆಡಳಿತದ ಅನುಕೂಲಕ್ಕೆ ತಕ್ಕಂತೆ ಕೆಲಸ ಮಾಡಲಷ್ಟೇ ಲಾಯಕ್ಕಾಗುವ ಶಿಕ್ಷಣವನ್ನು ದೇಶದ ಪ್ರಜೆಗಳಿಗೆ ಕಲ್ಪಿಸಿದರು. ಆ ಮೂಲಕ ಭಾರತದ ಆಚಾರ–ವಿಚಾರ, ಸಂಸ್ಕೃತಿ, ಕಲೆ, ಸಂಗೀತ, ರಾಜಕೀಯ ಚರಿತ್ರೆ ಸೇರಿದಂತೆ ಎಲ್ಲವನ್ನೂ ಯೂರೋಪ್‌ಮಯ ಮಾಡಿ, ಪಶ್ಚಿಮದ್ದೆಲ್ಲವೂ ಶ್ರೇಷ್ಠ ಎಂಬ ನಂಬಿಕೆ ಹುಟ್ಟಿಸಿದರು. ಈಗಲೂ ಆ ಪ್ರಭಾವ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿದ್ದು, ನಮ್ಮ ಪಾರಂಪರಿಕ ಶಿಕ್ಷಣ ವ್ಯವಸ್ಥೆ ಕಡೆಗೆ ಪರಿವರ್ತನೆ ಹೊಂದುವ ಸಮಯ ಈಗ ಬಂದಿದೆ ಎಂದು ಹೇಳಿದರು.

ಒಮ್ಮೆ ಬ್ರಿಟಿಷ್ ಸಾಮ್ರಾಜ್ಯದಿಂದ ಮದ್ರಾಸ್ ಬಂದರಿಗೆ ಹಡಗಿನ ಮೂಲಕ ಸಾವಿರಾರು ಟನ್ ಕಬ್ಬಿಣ ಬಂತು. ಆದರೆ ಇದನ್ನು ಖರೀದಿಸಲು ಯಾರೂ ಮುಂದೆ ಬರಲಿಲ್ಲ. ಇದಕ್ಕೆ ಕಾರಣ ಭಾರತದಲ್ಲಿ ಗುಡಿ ಕೈಗಾರಿಕೆಗಳು ಬಹಳ ಸದೃಢವಾಗಿದ್ದವು. ತಮಗೆ ಅಗತ್ಯವಿರುವ ವಸ್ತುಗಳನ್ನು ಸ್ಥಳೀಯವಾಗಿಯೇ ಉತ್ಪಾದನೆ ಮಾಡಿಕೊಳ್ಳುವ ಕೌಶಲ್ಯ ಹೊಂದಿದ್ದರು. ಹಾಗಾಗಿ ಈ ಕಬ್ಬಿಣ ಖರೀದಿಗೆ ಯಾರೂ ಮುಂದೆ ಬರಲಿಲ್ಲ. ಇದನ್ನು ಮನಗಂಡ ಬ್ರಿಟಿಷರು ತಮ್ಮ ವ್ಯಾಪಾರಕ್ಕೆ ಪೂರಕವಾಗಿ ಕೈಗಾರಿಕ ಕೇಂದ್ರೀಕೃತ ವ್ಯವಸ್ಥೆ ತಂದರು. ಆ ಮೂಲಕ ನಮ್ಮ ದೇಶದ ಗುಡಿ ಕೈಗಾರಿಕೆಗಳ ಪರಂಪರೆಗೆ ಹಿನ್ನಡೆ ಉಂಟಾಗುವಂತೆ ಮಾಡಿದರು. ಹೀಗಾಗಿ ನಮ್ಮ ಕೌಶಲ್ಯ ಪರಂಪರೆಯ ಪುನರುಜ್ಜೀವನಗೊಳಿಸಿ, ಸ್ವಾವಲಂಬಿ ಭಾರತ ನಿರ್ಮಾಣಕ್ಕೆ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಮುನ್ನುಡಿ ಬರೆಯಲಿದೆ ಎಂದು ಪ್ರತಿಪಾದಿಸಿದರು.

ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅತಿಥಿಯಾಗಿ ಪಾಲ್ಗೊಂಡಿದ್ದರು. ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ಆಡಳಿತಾಂಗ ಕುಲಸಚಿವ ಪ್ರೊ.ಆರ್.ಶಿವಪ್ಪ ಸೇರಿದಂತೆ ವಿವಿಯ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಮುಮ್ಮಡಿ ಕೃಷ್ಣರಾಜ ಒಡೆಯರ್ ಸ್ಥಾಪಿಸಿದ ‘ರಾಜಾ ಫ್ರೀ ಸ್ಕೂಲ್’ ಮೈಸೂರು ವಿವಿ ಸ್ಥಾಪನೆಗೆ ಪ್ರೇರಣೆ

ಮುಮ್ಮಡಿ ಕೃಷ್ಣರಾಜ ಒಡೆಯರ್ ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಶಿಕ್ಷಣ ಕಲ್ಪಿಸಲು ಸ್ಥಾಪಿಸಿದ ರಾಜಾ ಫ್ರೀ ಸ್ಕೂಲ್, ಮುಂದೆ ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಮೈಸೂರು ವಿವಿ ಸ್ಥಾಪನೆಗೆ ಪ್ರೇರಣೆಯಾಯಿತು ಎಂದು ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಮೈಸೂರು ವಿವಿ ಸಂಸ್ಥಾಪನಾ ದಿನದ ಸ್ಮರಣೆ ವೇಳೆ ವಿವಿ ಸ್ಥಾಪನೆಗೆ ಪೂರಕವಾದ ಘಟನೆಗಳನ್ನು ನೆನೆಯಬೇಕು. ನಾಲ್ವಡಿ ಅವರ ತಾತಾ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ‘ರಾಜಾ ಫ್ರೀ ಸ್ಕೂಲ್’ ಸ್ಥಾಪಿಸಿದರು. ಅದು ಮುಂದೆ ಮೈಸೂರು ವಿವಿ ಸ್ಥಾಪನೆಗೆ ಪ್ರೇರಣೆಯಾಯಿತು. ಆರ್ಥಿಕವಾಗಿ ಹಿಂದುಳಿದವರಿಗೆ ಈ ರಾಜಾ ಫ್ರೀ ಸ್ಕೂಲ್‌ನಲ್ಲಿ ಶಿಕ್ಷಣದ ವ್ಯವಸ್ಥೆ ಮಾಡಿದ್ದರು. ಅದು ಬೆಳೆದು 10ನೇ ಚಾಮರಾಜ ಒಡೆಯರ್ ಕಾಲದಲ್ಲಿ ಹೆಚ್ಚು ವಿಸ್ತರಿಸಿತು ಎಂದು ತಿಳಿಸಿದರು. ನಂತರ ನಾಲ್ವಡಿಯವರ ಕಾಲದಲ್ಲಿ ಮೈಸೂರಿಗರು ಉನ್ನತ ಶಿಕ್ಷಣ ಪಡೆಯಲು ಮದ್ರಾಸ್‌ಗೆ ಹೋಗಬೇಕಾದ ಪರಿಸ್ಥಿತಿ ಇತ್ತು. ನಮ್ಮ ರಾಜ್ಯದಲ್ಲೇ ಉನ್ನತ ಶಿಕ್ಷಣವನ್ನೂ ಪಡೆಯಲಿ ಎಂಬ ಕಾರಣಕ್ಕೆ ಮೈಸೂರು ವಿವಿ ಸ್ಥಾಪನೆ ಮಾಡಲಾಯಿತು. ಎಲ್ಲದರಲ್ಲೂ ಮೊದಲು ಎನ್ನುವ ಹೆಗ್ಗಳಿಕೆ ಹೊಂದಿರುವ ಮೈವಿವಿ, ಅದನ್ನು ಮುಂದುವರಿಸಿಕೊಂಡು ಹೋಗಲಿ ಎಂದು ಆಶಿಸಿದರು.

ಮೈಸೂರು ವಿವಿಗೆ ರಾಷ್ಟ್ರೀಯ ವಿವಿ ಸ್ಥಾನ ಪ್ರಾಪ್ತವಾಗಲಿ

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ವಿವಿ ಸ್ಥಾಪಿಸಿ ಇಂದಿಗೆ 106 ವರ್ಷಗಳು ಕಳೆದಿವೆ. ಅವರು ನಾಡಿನ ಏಳಿಗೆಗಾಗಿ ದುಡಿದ ಶ್ರೇಷ್ಠ ದೊರೆ ಎಂದು ಸ್ಮರಿಸಿದ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ಮೈಸೂರು ವಿವಿಗೆ ರಾಷ್ಟ್ರೀಯ ವಿಶ್ವವಿದ್ಯಾನಿಲಯದ ಸ್ಥಾನ ಆದಷ್ಟು ಶೀಘ್ರದಲ್ಲಿ ಪ್ರಾಪ್ತವಾಗಲಿ ಎಂದು ಆಶಿಸುವುದಾಗಿ ತಿಳಿಸಿದರು. ನಾಲ್ವಡಿ ಅವರನ್ನು ಮಹಾತ್ಮ ಗಾಂಧಿಯವರು ‘ರಾಜರ್ಷಿ’ ಎಂದು ಬಣ್ಣಿಸಿದ್ದಾರೆ. ನಾಲ್ವಡಿಯವರು ಇಟ್ಟ ಒಂದೊಂದು ಹೆಜ್ಜೆಯೂ ನಾಡಿನ ಪ್ರಗತಿಯ ಮೈಲುಗಲ್ಲು. ಅವರು 1916ರ ಜು.27ರಂದು ಮೈಸೂರು ವಿವಿ ಅಸ್ತಿತ್ವಕ್ಕೆ ತಂದರು ಎಂದು ಹೇಳಿದರು. ಮದ್ರಾಸ್ ವಿವಿ ಒಪ್ಪಿದರೆ ಮಾತ್ರವೇ ಮೈಸೂರು ವಿವಿ ಅಸ್ತಿತ್ವಕ್ಕೆ ಬರಬಹುದು ಎಂಬ ಷರತ್ತು ವಿಧಿಸಿದ್ದ ಸಂದರ್ಭ ಅದು. ಊಟಿಯಲ್ಲಿ ಜರುಗಿದ ಮದ್ರಾಸ್ ವಿವಿ ಸಿಂಡಿಕೇಟ್ ಸಭೆಯಲ್ಲಿ ಸದಸ್ಯರು, ಮೈಸೂರು ವಿವಿ ಸ್ಥಾಪನೆಗೆ ತೀವ್ರ ವಿರೋಧ ವ್ಯಕ್ತಪಡಿಸಿದರು. ಈ ವೇಳೆ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಸರ್ ಎಂ.ವಿಶ್ವೇಶ್ವರಯ್ಯ ಅವರ ಮನವೊಲಿಸುವಲ್ಲಿ ಸಫಲರಾದರು. 1916 ಅ.12ರಂದು ನಾಲ್ವಡಿಯವರು ಮೈಸೂರು ವಿವಿಯ ಮೊದಲ ಸೆನೆಟ್ ಸಭೆ ಉದ್ದೇಶಿಸಿ ಭಾಷಣ ಮಾಡಿದರು. ಸಣ್ಣ ತೊರೆಯಾಗಿ ಉದ್ಭವವಾದ ನಮ್ಮ ಮೈಸೂರು ವಿವಿ, ದಶಕಗಳು ಉರುಳಿದಂತೆ ಹಿಗ್ಗುತ್ತ ಇಂದು ವಿಶಾಲವಾದ ನದಿಯಾಗಿ ಹರಿಯುತ್ತಿದೆ. ಈ ಪ್ರಗತಿಗೆ ಕಾರಣರಾದ ಎಲ್ಲಾ ಹಿರಿಯರು ಮತ್ತು ಶಿಕ್ಷಣ ತಜ್ಞರನ್ನು ಅತ್ಯಂತ ಗೌರವದಿಂದ ನೆನೆಯುತ್ತೇನೆ ಎಂದರು.

ಉಕ್ರೇನ್‌ನಿಂದ ವಾಪಸ್ಸಾದ ವೈದ್ಯಕೀಯ ವಿದ್ಯಾರ್ಥಿಗಳ ಸ್ಥಿತಿ ಅತಂತ್ರ

- ಅನಿಶ್ಚಿತತೆಯಲ್ಲಿ ಮೈಸೂರಿನ 30ಕ್ಕೂ ಅಧಿಕ ವಿದ್ಯಾರ್ಥಿಗಳ ಭವಿಷ್ಯ; ಪೋಷಕರಲ್ಲೂ ಆತಂಕ
- ಆರಂಭದಲ್ಲಿ ನೀಡಿದ ಸರ್ಕಾರ, ಜನಪ್ರತಿನಿಧಿಗಳ ಭರವಸೆ ಬರೀ ಹೋಳು...

ಮೈಸೂರು, ಜು.27(ಎಂಟಿವೈ)–ಯುದ್ಧಪೀಡಿತ ಉಕ್ರೇನ್‌ನಿಂದ ವಾಪಸ್ಸಾದ ಮೈಸೂರಿನ 30ಕ್ಕೂ ಹೆಚ್ಚು ವೈದ್ಯಕೀಯ ವಿದ್ಯಾರ್ಥಿಗಳು ಸರ್ಕಾರ ತಮ್ಮ ಭವಿಷ್ಯದ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಅನಿಶ್ಚಿತತೆಗೀಡಾಗಿದ್ದು, ಇವರ ಪೋಷಕರೂ ಚಿಂತೆಗೀಡಾಗಿದ್ದಾರೆ.

ಉಕ್ರೇನ್ ಮೇಲೆ ರಷ್ಯಾ ಯುದ್ಧ ಸಾರಿದ್ದರಿಂದ ಭಾರತೀಯ ವಿದ್ಯಾರ್ಥಿಗಳು ಮಾರ್ಚ್‌ನಲ್ಲಿ ತಾಯ್ನಾಡಿಗೆ ಮರಳಿದ್ದರು. ಇದೀಗ ತಮ್ಮ ಮುಂದಿನ ಭವಿಷ್ಯದ ಬಗ್ಗೆ ಚಿಂತಾಕ್ರಾಂತರಾಗಿದ್ದಾರೆ. ಭಾರತಕ್ಕೆ ಮರಳಿದ ಬಳಿಕವೂ ಆನ್‌ಲೈನ್ ತರಗತಿಗಳಿಗೆ ಹಾಜರಾಗುತ್ತಿದ್ದ ವಿದ್ಯಾರ್ಥಿಗಳು ಜುಲೈನಿಂದ ಆಗಸ್ಟ್ ಎರಡನೇ ವಾರದವರೆಗೆ ಕಾಲೇಜಿಗೆ ರಜೆ ಇದೆ. ಆದರೆ ಉಕ್ರೇನ್‌ನಲ್ಲಿ ಇನ್ನೂ ಆತಂಕದ ಪರಿಸ್ಥಿತಿ ಮುಂದುವರೆದಿರುವುದರಿಂದ ಸದ್ಯಕ್ಕೆ ಉಕ್ರೇನ್‌ಗೆ ಮರಳಲು ಸಾಧ್ಯವಾಗದಂತಹ ಸ್ಥಿತಿ ನಿರ್ಮಾಣವಾಗಿದೆ. ಹಾಗಾಗಿ ಭವಿಷ್ಯದ ಬಗ್ಗೆ ಚಿಂತಿತರಾಗಿದ್ದಾರೆ.

ಮಂಕಾದ ಆಶಾವಾದ: ಮಾನವೀಯ ನೆಲೆಗಟ್ಟಿನಲ್ಲಿ ಇಲ್ಲೇ ಶಿಕ್ಷಣ ಮುಂದುವರೆಸಲು ಅವಕಾಶ ಸಿಗುತ್ತದೆ ಎಂಬ ನಿರೀಕ್ಷೆಯಲ್ಲಿದ್ದ ವಿದ್ಯಾರ್ಥಿಗಳಿಗೆ ಕೇಂದ್ರ ಆರೋಗ್ಯ ಖಾತೆ ರಾಜ್ಯ ಸಚಿವ ಡಾ. ಭಾರತಿ ಪ್ರವೀಣ್ ಪವಾರ್, ರಾಜ್ಯಸಭೆಯಲ್ಲಿ ನೀಡಿದ ಹೇಳಿಕೆ ಆತಂಕಕ್ಕೆ ಕಾರಣವಾಗಿದೆ. ಉಕ್ರೇನ್‌ನಿಂದ ಮರಳಿರುವ ವೈದ್ಯಕೀಯ ವಿದ್ಯಾರ್ಥಿಗಳನ್ನು ಭಾರತದ ಯಾವುದೇ ವೈದ್ಯಕೀಯ ಕಾಲೇಜಿಗೆ ವರ್ಗಾಯಿಸಿಕೊಳ್ಳಲು ಹಾಗೂ ಅವರ ಶಿಕ್ಷಣ ಮುಂದುವರೆಸುವುದಕ್ಕೆ ಅವಕಾಶ ನೀಡಲು ನ್ಯಾಷನಲ್ ಮೆಡಿಕಲ್ ಕೌನ್ಸಿಲ್ ಅನುಮತಿ ನೀಡಿಲ್ಲ. ಆದ ಕಾರಣ ಇಂತಹ ವಿದ್ಯಾರ್ಥಿಗಳಿಗೆ ಯಾವುದೇ ಖಾತರಿ ನೀಡಲಾಗದು ಎಂದು ಲಿಖಿತ ಹೇಳಿಕೆ ನೀಡಿದ್ದು, ಈ ವಿದ್ಯಾರ್ಥಿಗಳ ಗಾಯದ ಮೇಲೆ ಬರೆ ಎಳೆದಂತಾಗಿದೆ.

ವಿದೇಶದಿಂದ ನಾನಾ ಕಾರಣಕ್ಕೆ ವಾಪಸ್ಸಾದ ವಿದ್ಯಾರ್ಥಿಗಳಿಗೆ ಭಾರತೀಯ ವೈದ್ಯಕೀಯ ಮಂಡಳಿ ಕಾಯಿದೆ 1956 ಮತ್ತು ರಾಷ್ಟ್ರೀಯ ವೈದ್ಯಕೀಯ ಆಯೋಗದ ಕಾಯಿದೆ 2019ರನ್ವಯ ಸ್ವದೇಶಿ ವಿವಿಗಳಲ್ಲಿ ಶಿಕ್ಷಣ ಮುಂದುವರೆಸಲು ಅವಕಾಶ ಕಲ್ಪಿಸಿಲ್ಲ. ಈ ನಿಟ್ಟಿನಲ್ಲಿ ಉಕ್ರೇನ್‌ನಿಂದ ವಾಪಸ್ಸಾದ ಭಾರತೀಯ ವಿದ್ಯಾರ್ಥಿಗಳಿಗೆ ನಮ್ಮಲ್ಲಿ ಅವಕಾಶ ಕಲ್ಪಿಸಲಾಗದು ಎಂದು ಕೇಂದ್ರ ಸಚಿವರು ಸ್ಪಷ್ಟಪಡಿಸಿದ್ದಾರೆ.

ಆನ್‌ಲೈನ್‌ನಲ್ಲಿ ಪಾಠ: ಉಕ್ರೇನ್‌ನ ಝಪೋರಿಝಿಯಾ ವೈದ್ಯಕೀಯ ವಿಶ್ವವಿದ್ಯಾಲಯದ ಅಂತಿಮ ವರ್ಷದ ವಿದ್ಯಾರ್ಥಿ, ಮೈಸೂರಿನ ಜನತಾನಗರದ ನಿವಾಸಿ ಪುಟ್ಟಮಾದೇಗೌಡರ ಮಗ ಪಿ.ಶ್ರೀಗಣೇಶ್ ‘ಮೈಸೂರು ಮಿತ್ರ’ನೊಂದಿಗೆ ಮಾತನಾಡಿ, ಉಕ್ರೇನ್ ಮೇಲೆ ರಷ್ಯಾ ಯುದ್ಧ ಮುಂದುವರೆಸಿದ್ದರಿಂದ ಮಾರ್ಚ್ ತಿಂಗಳಲ್ಲಿ ನಾವು ಭಾರತಕ್ಕೆ ಮರಳಿದ್ದೇವೆ. ಆನ್‌ಲೈನ್‌ನಲ್ಲಿ ಜೂನ್ ಅಂತ್ಯದವರೆಗೂ ನಮಗೆ ಪಾಠ ಮಾಡಿದ್ದಾರೆ. ನಾವು ಓದುತ್ತಿರುವ ವಿಶ್ವವಿದ್ಯಾನಿಲಯ, ತಾಳ್ಮೆ ಕಳೆದುಕೊಳ್ಳಬೇಡಿ. ನಿಮಗೆ ಶಿಕ್ಷಣ ಮುಂದುವರೆಸಲು ಅಗತ್ಯ ಕ್ರಮ ಕೈಗೊಳ್ಳುತ್ತೇವೆ. ಒಂದು ವೇಳೆ ಬೇರೆ ದೇಶದ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡುವುದರ ಬಗ್ಗೆಯೂ ಚಿಂತಿಸುತ್ತಿರುವುದಾಗಿ ಹೇಳಿದ್ದಾರೆ. ಆದರೆ ನಮ್ಮ ಭವಿಷ್ಯದ ಬಗ್ಗೆ ಆತಂಕ ಕಾಡುತ್ತಿದೆ ಎಂದರು.


ನೆರವಿಗೆ ಧಾವಿಸುತ್ತಿಲ್ಲ: ಎರಡನೇ ವರ್ಷದ ವೈದ್ಯಕೀಯ ವಿದ್ಯಾರ್ಥಿನಿ ಪ್ರಿಯಾಂಕಾ ಗುರುಮಲ್ಲೇಶ್ ಮಾತನಾಡಿ, ನಮಗೆ ಮುಂದೇನು ಮಾಡಬೇಕು ಎಂಬ ಗೊಂದಲದಲ್ಲಿದ್ದೇವೆ. ನಮಗೆ ಈಗ ಆಗಸ್ಟ್ ಅಂತ್ಯದವರೆಗೆ ರಜಾ ನೀಡಲಾಗಿದೆ. ಜೂನ್‌ವರೆಗೆ ಆನ್‌ಲೈನ್ ತರಗತಿಗೆ ಹಾಜರಾಗಿದ್ದೇನೆ. ಮುಂದಿನ ಸೆಮಿಸ್ಟರ್‌ಗೆ ಶುಲ್ಕ ಪಾವತಿಸುವಂತೆ ನಾನು ವ್ಯಾಸಂಗ ಮಾಡುತ್ತಿದ್ದ ವಿಶ್ವವಿದ್ಯಾಲಯ ಸಂದೇಶ ಕಳಿಸಿದೆ. ಆದರೆ ನಾನು ಏನು ಮಾಡಬೇಕೆಂಬ ಗೊಂದಲದಲ್ಲಿದ್ದೇನೆ. ಇತ್ತ ಯುದ್ಧ ಮುಂದುವರಿದಿದೆ. ಕೇಂದ್ರ ಮತ್ತು ಕರ್ನಾಟಕ ಸರ್ಕಾರಗಳಿಂದ ಯಾವುದೇ ಸಹಾಯ ಅಥವಾ ಮಾರ್ಗದರ್ಶನವಿಲ್ಲ. ನಾವು ಭಾರತಕ್ಕೆ ಬಂದಾಗ, ನಮಗೆ ಎಲ್ಲಾ ಸಹಾಯದ ಭರವಸೆ ನೀಡಿದ್ದರು. ಆದರೆ ಈಗ ಯಾರೂ ಕಿವಿಗೊಡುತ್ತಿಲ್ಲ ಎಂದು ವಿಷಾದಿಸಿದರು.



ಘಾನಾ ಮತ್ತು ನೈಜೀರಿಯಾ ಅವಕಾಶ: ಹೆಸರು ಹೇಳಲಿಚ್ಛಿಸದ ವಿದ್ಯಾರ್ಥಿನಿಯೊಬ್ಬರು ಮಾತನಾಡಿ, ಸೆಪ್ಟೆಂಬರ್‌ನಲ್ಲಿ ಆನ್‌ಲೈನ್‌ನಲ್ಲಿ ಮುಂದಿನ ಸೆಮಿಸ್ಟರ್ ಪ್ರಾರಂಭವಾಗುತ್ತದೆ. ಇದು ವೈದ್ಯಕೀಯ ಅಧ್ಯಯನಕ್ಕೆ ಸಾಕಾಗುವುದಿಲ್ಲ. ಕರ್ನಾಟಕ ವೈದ್ಯಕೀಯ ಶಿಕ್ಷಣ ಸಚಿವರು ಭಾರತೀಯ ಕಾಲೇಜುಗಳಲ್ಲಿ ಶಿಕ್ಷಣವನ್ನು ಮುಂದುವರೆಸುವುದು ಸೇರಿದಂತೆ ಎಲ್ಲಾ ಸಹಾಯದ ಭರವಸೆ ನೀಡಿದ್ದರು. ಆದರೆ ಈಗ ಮೌನವಾಗಿದ್ದಾರೆ. ಘಾನಾ ಮತ್ತು ನೈಜೀರಿಯಾದಂತಹ ದೇಶಗಳು ಉಕ್ರೇನ್‌ನಿಂದ ಹಿಂದಿರುಗಿದ ವಿದ್ಯಾರ್ಥಿಗಳಿಗೆ ಶಿಕ್ಷಣ ಮುಂದುವರೆಸಲು ಅವಕಾಶ ನೀಡಿವೆ. ಆದರೆ ನಮ್ಮ ದೇಶದಲ್ಲಿ ಯಾಕೆ ಅವಕಾಶ ನೀಡುತ್ತಿಲ್ಲ ಎಂದು ಪ್ರಶ್ನಿಸಿದ್ದಾರೆ.

ಪೋಷಕರ ಮನವಿ: ಉಕ್ರೇನ್‌ನಿಂದ ವಾಪಸ್ಸಾಗಿರುವ ಶ್ರೀಗಣೇಶ್ ತಂದೆ ಪುಟ್ಟಮಾದೇಗೌಡ ಹಾಗೂ ಪ್ರಿಯಾಂಕಾ ತಂದೆ ಗುರುಮಲ್ಲೇಶ್ ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಾನವೀಯತೆಯ ನೆಲೆಗಟ್ಟಿನಲ್ಲಿ ಉಕ್ರೇನ್‌ನಿಂದ ವಾಪಸ್ಸಾಗಿರುವ ವೈದ್ಯಕೀಯ ವಿದ್ಯಾರ್ಥಿಗಳಿಗೆ ಶಿಕ್ಷಣ ಮುಂದುವರೆಸಲು ಅವಕಾಶ ಮಾಡಿಕೊಡಬೇಕು. ಮಕ್ಕಳ ಮುಂದಿನ ಭವಿಷ್ಯ ಕಮರದಂತೆ ನೋಡಿಕೊಳ್ಳುವ ನಿಟ್ಟಿನಲ್ಲಿ ನಿರ್ಣಯವೊಂದನ್ನು ತೆಗೆದುಕೊಳ್ಳಬೇಕು ಎಂದು ಮನವಿ ಮಾಡಿದರು.







ಕರ್ನಾಟಕ ಸರ್ಕಾರದ ಏಕೈಕ ಜಾಹೀರಾತು ಸಂಸ್ಥೆಯಾದ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ನೂತನ ಅಧ್ಯಕ್ಷರಾಗಿ ಎಂ.ಎಸ್.ಕರೀಗೌಡ್ರ ಅವರು ಬುಧವಾರ ಅಧಿಕಾರ ಸ್ವೀಕರಿಸಿದರು. ಈ ವೇಳೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸಿದ್ದಲಿಂಗಪ್ಪ ಬಿ.ಪೂಜಾರಿ, ನಿರ್ದೇಶಕ ವೀರೇಶ್ ಸಂಗಳದ, ಎಚ್.ಆರ್.ತೀರ್ಥಲಿಂಗಪ್ಪ ಉಪಸ್ಥಿತರಿದ್ದರು.

ಪ್ರವೀಣ್ ಹತ್ಯೆ ಖಂಡಿಸಿ ಮೈಸೂರಲ್ಲಿ ಪ್ರತಿಭಟನೆ



ಮೈಸೂರು,ಜು.27(ಎಂಕೆ)–ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಕಾರ್ಯಕಾರಿಣಿ ಸದಸ್ಯ ಪ್ರವೀಣ್ ನೆಟ್ಟಾರ್ ಹತ್ಯೆ ಖಂಡಿಸಿ ಮೈಸೂರು ನಗರ ಬಿಜೆಪಿ ಯುವ ಮೋರ್ಚಾ ವತಿಯಿಂದ ಪ್ರತಿಭಟನೆ ನಡೆಸಿ, ಕ್ಯಾಂಡಲ್ ಮೆರವಣಿಗೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ನಗರದ ಗಾಂಧಿವೃತ್ತದಲ್ಲಿ ಜಮಾವಣೆಗೊಂಡ ಕಾರ್ಯಕರ್ತರು ಪ್ರವೀಣ್ ನೆಟ್ಟಾರ್ ಹಂತಕರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರಲ್ಲದೆ, ಸಾರ್ವಜನಿಕ ಸ್ಥಳದಲ್ಲಿ ಗುಂಡಿಟ್ಟು ಕೊಲ್ಲುವಂತೆ ಒತ್ತಾಯಿಸಿದರು.

ನೆರವು: ರಾಜ್ಯ ಯುವ ಮೋರ್ಚಾ ವತಿಯಿಂದ ಪ್ರವೀಣ್ ಕುಟುಂಬಕ್ಕೆ 30–35 ಲಕ್ಷ ರೂ. ಸಂಗ್ರಹಿಸಿ ಕುಟುಂಬಸ್ಥರಿಗೆ ನೀಡುವ ಮೂಲಕ ಸಾಂತ್ವನ ಹೇಳಲಾಗುವುದು. ಬಿಜೆಪಿ ಯುವ ಮೋರ್ಚಾ ಸದಸ್ಯರೆಲ್ಲರೂ ಅವರ ಕುಟುಂಬದವರಾಗಿದ್ದು, ಸದಾ ಅವರೊಂದಿಗಿರುತ್ತೇವೆ ಎಂದರು. ಇದೇ ವೇಳೆ ಪ್ರವೀಣ್ ಭಾವಚಿತ್ರ ಹಿಡಿದು, ಕ್ಯಾಂಡಲ್ ಬೆಳಗಿಸಿ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಬಳಿಕ ಗಾಂಧಿವೃತ್ತದ ಸುತ್ತಲೂ ಮೆರಣಿಗೆ ನಡೆಸಲಾಯಿತು. ಬಿಜೆಪಿ ಯುವ ಮೋರ್ಚಾ ರಾಜ್ಯ ಉಪಾಧ್ಯಕ್ಷ ಜಯಶಂಕರ್, ನಗರ ಯುವಮೋರ್ಚಾ ಅಧ್ಯಕ್ಷ ಎಂ.ಜೆ.ಕಿರಣ್‌ಗೌಡ, ಕಾರ್ಯದರ್ಶಿ ಸಂತೋಷ್, ಭರತ್, ಸಚಿನ್, ಮನು ಶೈವ, ಮಧು, ಅರ್ಜುನ್, ಪ್ರಜ್ವಲ್, ನರಸಿಂಹ ಮೂರ್ತಿ, ಬದ್ರಿ ಪ್ರಸಾದ್, ಪಂಕಜ್, ಕೀರ್ತಿರಾಜ್ ಮತ್ತಿತರರಿದ್ದರು.

ಮೈಸೂರು ಮಿತ್ರ 43 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮೈಸೂರಿಗೆ ಮಾರುಹೋದ 'ಟೇಸ್ಟ್ ಇಂಡಿಯಾ' ಸಂಜೀವ್ ಕಪೂರ್ !



ಮೈಸೂರು-ಬೆಂಗಳೂರು ರಸ್ತೆಯ ಪೂಜಾರಿ ಫಿಶ್‌ಲ್ಯಾಂಡ್‌ನಲ್ಲಿ ಸಂಜೀವ್ ಕಪೂರ್. ಚಿತ್ರದಲ್ಲಿ ಹೋಟೆಲ್‌ನ ನದೀಮ್ ಅಹಮದ್ ಇದ್ದಾರೆ.

ಮೈಸೂರು, ಜು.27(ಜಿಎ)- ಭಾರತದ ಪ್ರಸಿದ್ಧ ಬಾಣಸಿಗ ಸಂಜೀವ್ ಕಪೂರ್ ಮೈಸೂರಿಗೆ ಆಗಮಿಸಿದ್ದರು ಅವರು ಸಾಂಸ್ಕೃತಿಕ ನಗರಿಯ ಊಟೋಪಚಾರ, ಕಲೆ, ಸಂಸ್ಕೃತಿ ಹಾಗೂ ಪಾರಂಪರಿಕ ಕಟ್ಟಡಗಳ ವಿನ್ಯಾಸಕ್ಕೆ ಮಾರು ಹೋಗಿದ್ದಾರೆ.

ತಮ್ಮ ನೂತನ ಕಾರ್ಯಕ್ರಮ 'ಟೇಸ್ಟ್ ಇಂಡಿಯಾ'ಗಾಗಿ ದೇಶದ ಪ್ರಮುಖ ನಗರಗಳ ಊಟೋಪಚಾರ ಕಲೆ, ಕೃಷಿ, ನೃತ್ಯ, ಕಟ್ಟಡಗಳ ವಿನ್ಯಾಸಗಳ ಬಗ್ಗೆ ಚಿತ್ರೀಕರಣದಲ್ಲಿ ತೊಡಗಿದ್ದು, ಇಂದು ಮೈಸೂರಿನಲ್ಲಿ ತಂತಾರು ನಡುವೆಯೇ 'ಮೈಸೂರು ಮಿತ್ರ' ನೊಂದಿಗೆ ಸಂತೋಷದಿಂದ ಮಾತನಾಡಿದರು.

ಮೈಸೂರು ಪ್ಯಾಲೆಸ್ ಸಿಟಿ. ಇಲ್ಲಿನ ಅರಮನೆ ಮತ್ತು ದಸರಾ ಮರೆಯಲು ಸಾಧ್ಯವೇ?. ನಾನು ಐಟಿಡಿಸಿಯಲ್ಲಿದ್ದಾಗ ಲಲಿತ ಮಹಲ್ ಹೋಟೆಲ್‌ನಲ್ಲಿ ಕೆಲಸ ಮಾಡಿದ್ದೇನೆ. ಒಮ್ಮೆ ನಮ್ಮ ತಾಯಿಯನ್ನು ಕರೆದುಕೊಂಡು ಇಲ್ಲಿಗೆ ಬಂದಿದ್ದೆ ಎಂದರು.

'ಟೇಸ್ಟ್ ಇಂಡಿಯಾ' ಹೊಸ ಶೋ ಆರಂಭವಾಗುತ್ತಿದ್ದು, ಆ ಹಿನ್ನೆಲೆಯಲ್ಲಿ ಭಾರತದ ಪ್ರಮುಖ ಸ್ಥಳಗಳಿಗೆ ಭೇಟಿ ನೀಡಿ ಅಲ್ಲಿನ ಊಟೋಪಚಾರ ಕಟ್ಟಡ ವಿನ್ಯಾಸ, ಸಂಸ್ಕೃತಿ ಮತ್ತು ಕೃಷಿ ಬಗ್ಗೆ ಚಿತ್ರೀಕರಣ ಮಾಡುತ್ತಿದ್ದೇವೆ. ಈಗಾಗಲೇ ಬನಾರಸ್, ಕೋಲ್ಕತಾದಲ್ಲಿ ಚಿತ್ರೀಕರಣ ಪೂರ್ಣಗೊಂಡಿದೆ. ಸದ್ಯ ಕರ್ನಾಟಕದ ಪ್ರಮುಖ ನಗರಗಳಾದ ಮೈಸೂರು ಮತ್ತು ಬೆಂಗಳೂರಿನಲ್ಲಿ ಶೂಟ್ ಮಾಡುತ್ತಿದ್ದೇವೆ. ಮೈಸೂರಿನಲ್ಲಿ ನಮ್ಮ ತಂಡ ಇಂದು ಅನೇಕ ಹೋಟೆಲ್‌ಗಳಿಗೆ ಭೇಟಿ ನೀಡಿತ್ತು. ಇಲ್ಲಿನ ತಟ್ಟೆ ಇಡ್ಲಿ, ಮಿಲ್ಕಿ ಹೋಟೆಲ್, ಮೈಲಾರಿ ದೋಸೆ ಸೇರಿದಂತೆ ಬೆಳಗ್ಗೆಯಿಂದ 20ಕ್ಕೂ ಹೆಚ್ಚು ಹೋಟೆಲ್‌ಗಳಲ್ಲಿ ಚಿತ್ರೀಕರಣ ಮಾಡಲಾಗಿದೆ. ಇಂದು ರಾತ್ರಿ ಅಂತಿಮವಾಗಿ ಮೈಸೂರು-ಬೆಂಗಳೂರು ರಸ್ತೆಯಲ್ಲಿರುವ ಪೂಜಾರಿ ಫಿಷ್ ಲ್ಯಾಂಡ್‌ನಲ್ಲಿ ಚಿತ್ರೀಕರಣ ಮಾಡಿದೆವು. ಈ ಹೋಟೆಲ್ ಸಹ ಅದ್ಭುತವಾಗಿದೆ. ಹೊರಗಿನಿಂದ ನೋಡಿದರೆ ಇದು ಏನೇನಿಲ್ಲವೆಂಬಂತೆ ಕಾಣುತ್ತದೆ. ಆದರೆ ಇಲ್ಲಿನ ಊಟೋಪಚಾರ ಮತ್ತು ಹೋಟೆಲ್ ವಿನ್ಯಾಸವು ಅತ್ಯಂತ ವಿಶೇಷವಾಗಿದ್ದು ಮನ ಸೆಳೆಯುತ್ತದೆ. ಈಗ ಮದ್ದೂರಿನ ವಡೆ ಸವಿಯಲು ತೆರಳುತ್ತಿದ್ದೇವೆ ಎಂದರು.

ಆಯ್ಕೆ ಮಾಡಿಕೊಂಡಿರುವ ನಗರಗಳಿಗೆ ಹೋಗುವ ಮಾರ್ಗದುದ್ದಕ್ಕೂ ಚಿತ್ರೀಕರಣ ಮಾಡುತ್ತೇವೆ. ಒಂದು ನಗರ ಚಿತ್ರೀಕರಿಸಲು 6 ದಿನಗಳು ತೆಗೆದುಕೊಳ್ಳುತ್ತದೆ. ಪ್ರತಿ ನಗರದ ಬಗ್ಗೆ ಸವಿವರವಾಗಿ 1 ಗಂಟೆ ಶೋ ಪ್ರಸಾರವಾಗಲಿದೆ. ಕೆಲವೇ ತಿಂಗಳಲ್ಲಿ ಈ ಶೋ ವಿಶ್ವ ಮಟ್ಟದಲ್ಲಿ ಲಾಂಚ್ ಆಗಲಿದೆ. ಆಹಾರದ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಹೇಗೆ ಎಂಬುದೇ 'ಟೇಸ್ಟ್ ಇಂಡಿಯಾ'ದ ಪ್ರಮುಖ ಉದ್ದೇಶವಾಗಿದೆ. ಕೊರೊನಾ ನಂತರ ಜನರು ಪ್ರತಿಯೊಂದು ಆಹಾರ ಪದಾರ್ಥದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳುವುದು ಹೇಗೆ ಎಂದು ಆಲೋಚಿಸಿ ಮಾಡುತ್ತಿದ್ದಾರೆ. ಅದಕ್ಕೆ ಈ ಶೋ ಸಹಕಾರಿಯಾಗಲಿದೆ ಎಂದರು.

ಐಸಿಸಿ ಪುರುಷರ ಕ್ರಿಕೆಟ್ ಸಮಿತಿಗೆ ವಿವಿಎಸ್ ಲಕ್ಷ್ಮಣ್ ನೇಮಕ

ನವದೆಹಲಿ: ಭಾರತದ ಬ್ಯಾಟಿಂಗ್ ದಿಗ್ಗಜ ವಿವಿಎಸ್ ಲಕ್ಷ್ಮಣ್ ಅವರನ್ನು ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಪುರುಷರ ಕ್ರಿಕೆಟ್ ಸಮಿತಿಗೆ ನೇಮಕ ಮಾಡಲಾಗಿದೆ ಎಂದು ಕ್ರಿಕೆಟ್‌ನ ಜಾಗತಿಕ ಆಡಳಿತ ಮಂಡಳಿ ತಿಳಿಸಿದೆ. ವಿವಿಎಸ್ ಲಕ್ಷ್ಮಣ್ ಮತ್ತು ನ್ಯೂಜಿಲೆಂಡ್ ಮಾಜಿ ನಾಯಕ ಡೇನಿಯಲ್ ವೆಟ್ಟೋರಿ ಅವರನ್ನು ಪ್ರಸ್ತುತ ಆಟಗಾರ ಪ್ರತಿನಿಧಿಗಳಾಗಿ ನೇಮಿಸಲಾಗಿದೆ.

ಒಂದನೇ ಪುಟದಿಂದ

ದೊಡ್ಡಬಳ್ಳಾಪುರ ಜನೋತ್ಸವ ರದ್ದು

ಈ ಹಿನ್ನೆಲೆಯಲ್ಲೇ ನಮ್ಮ ಸರ್ಕಾರ ಕೈಗೊಂಡ ಜನಪರ ಕಾರ್ಯಕ್ರಮಗಳ ವಿವರಣೆ ಹಾಗೂ ಮುಂದಿನ ದಿನಗಳಲ್ಲಿ ಕೈಗೊಳ್ಳಬಹುದಾದ ಕಾರ್ಯಕ್ರಮಗಳ ಬಗ್ಗೆ ಭರವಸೆ ನೀಡಲು ಜನೋತ್ಸವ ಏರ್ಪಡಿಸಲಾಗಿತ್ತೇ ಹೊರತು, ಸಂಭ್ರಮಿಸುವುದಕ್ಕಾಗಿ ಅಲ್ಲ ಎಂದರು. ಬೆಳಗ್ಗೆಯಿಂದ ಹಲವಾರು ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದರೂ ಇಂದು ಪ್ರವೀಣ್ ಕುಟುಂಬದವರ ಆಕ್ರಂದನ ಹಾಗೂ ಈ ಹಿಂದೆ ಹರ್ಷನ ಕುಟುಂಬದವರ ಆಕ್ರಂದನವನ್ನು ನೋಡಿ ನಾಳೆ ಜನೋತ್ಸವ ಕಾರ್ಯಕ್ರಮ ನಡೆಸಲು ಮನಸ್ಸು ಒಪ್ಪಲಿಲ್ಲ. ಹೀಗಾಗಿ ಮನಸಾಕ್ಷಿಗನುಗುಣವಾಗಿ ನಾಳಿನ ಕಾರ್ಯಕ್ರಮವನ್ನು ರದ್ದುಪಡಿಸಲಾಗಿದೆ ಎಂದು ಮುಖ್ಯಮಂತ್ರಿಗಳು ಹೇಳಿದರು. ಈ ವೇಳೆ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಸಚಿವ ಡಾ. ಕೆ. ಸುಧಾಕರ್ ಉಪಸ್ಥಿತರಿದ್ದರು.

ಭಯೋತ್ಪಾದನಾ ನಿಗ್ರಹ ಕಮಾಂಡೋ ಪಡೆ

ಕೃತ್ಯಗಳಲ್ಲಿ ಭಾಗಿಯಾಗಿವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಭಿತ್ತಿಪತ್ರಗಳಲ್ಲಿ ಪಿಎಫ್‌ಐ ಸಂಘಟನೆಯನ್ನು ನಿಷೇಧಿಸಲಾಗಿತ್ತು. ಅದಕ್ಕೆ ತಡೆ ತರಲಾಗಿದೆ. ಯಾವುದೇ ಸಂಘಟನೆಯನ್ನು ನಿಷೇಧಿಸಬೇಕಾದರೆ ಅದಕ್ಕೆ ಬಹಳಷ್ಟು ಕಠಿಣ ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಇತರ ರಾಜ್ಯ ಸರ್ಕಾರಗಳ ಜೊತೆಯಲ್ಲೂ ಸಮಾಲೋಚನೆ ನಡೆಸಿ, ಸೂಕ್ತ ಕ್ರಮ ಕೈಗೊಳ್ಳಲು ಚಿಂತನೆ ನಡೆದಿದೆ. ಸಮಾಜ ವಿರೋಧಿ ಹಾಗೂ ದೇಶ ವಿರೋಧಿ ಶಕ್ತಿಗಳ ಪಾಪದ ಕೊಡ ತುಂಬಿದಂತಾಗಿದೆ. ಹೀಗಾಗಿ ಈ ಶಕ್ತಿಗಳನ್ನು ದಮನ ಮಾಡುವ ಸಲುವಾಗಿ ಹಾಲಿ ಇರುವ ಭಯೋತ್ಪಾದನಾ ನಿಗ್ರಹ ದಳಗಳ ಹೊರತಾಗಿ ಇಂತಹ ಶಕ್ತಿಗಳ ದಮನಕ್ಕಾಗಿಯೇ ಹೊಸದಾಗಿ 'ಭಯೋತ್ಪಾದನಾ ನಿಗ್ರಹ ಕಮಾಂಡೋ ಪಡೆ'ಯನ್ನು ರಚಿಸಲಾಗುವುದು. ಈ ಪಡೆಗೆ ಪ್ರತ್ಯೇಕವಾದ ಗುಪ್ತಚರ ವಿಭಾಗವನ್ನು ನೀಡಲಾಗುವುದು. ಹಾಗೂ ವಿಶೇಷ ತರಬೇತಿ ಮತ್ತು ಅಗತ್ಯ ಪರಿಕರಗಳನ್ನು ಒದಗಿಸಲಾಗುವುದು ಎಂದು ಘೋಷಿಸಿದ ಮುಖ್ಯಮಂತ್ರಿಗಳು, ಯುವ ಜನತೆಯ ಭಾವನೆ ಹಾಗೂ ಆಕ್ರೋಶ ನಾನೂ ಅರ್ಥ ಮಾಡಿಕೊಂಡಿದ್ದೇನೆ. ಖಂಡಿತವಾಗಿಯೂ ಇಂತಹ ಶಕ್ತಿಗಳ ಹುಟ್ಟಡಗಿಸಲಾಗುತ್ತದೆ. ನಾನು ಗೃಹಸಚಿವನಾಗಿದ್ದಾಗ ಇಂತಹ ಶಕ್ತಿಗಳ ಕೆಲ ವ್ಯಕ್ತಿಗಳನ್ನು ತಿಹಾರ್ ಜೈಲಿಗೆ ಕಳುಹಿಸಲಾಗಿತ್ತು. ಡಿ.ಜೆ.ಹಳ್ಳಿ ಮತ್ತು ಕೆ.ಜಿ.ಹಳ್ಳಿ ಗಲಾಟೆ ವೇಳೆ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗಿದೆ. ಶಿವಮೊಗ್ಗ ಹರ್ಷ ಕೊಲೆಯಾದಾಗ ಕೆಲವೇ ದಿನಗಳಲ್ಲಿ ಹಂತಕರನ್ನು ಬಂಧಿಸಲಾಗಿದೆ. ಇನ್ನು ಮುಂದೆ ಇಂತಹ ಕೃತ್ಯಗಳಿಗೆ ಅವಕಾಶವಾಗದಂತೆ ಎಲ್ಲಾ ರೀತಿಯ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದರು.

ಪ್ರವೀಣ್ ನೆಟ್ಟಾರು ಅಂತ್ಯಕ್ರಿಯೆ

ಸಂಪ್ರದಾಯದಂತೆ ಅಂತ್ಯಸಂಸ್ಕಾರ ನೆರವೇರಿಸಲಾಯಿತು. ಮಂತ್ರ ಪಠಣದ ಬಳಿಕ ಮನೆ ಸಮೀಪದಲ್ಲೇ ಪ್ರವೀಣ್ ಚಿತೆಗೆ ಮೂವರು ಮಾವಂದಿರಾದ ಶೀನಪ್ಪ ಪೂಜಾರಿ, ಲಿಂಗಪ್ಪ ಪೂಜಾರಿ, ಲೋಕೇಶ್ ಪೂಜಾರಿ ಅಗ್ನಿ ಸ್ಪರ್ಶ ಮಾಡಿದ್ದಾರೆ.

ಆಕ್ರೋಶ: ಬಿಜೆಪಿ ನಾಯಕ ಪ್ರವೀಣ್ ನೆಟ್ಟಾರು ಹತ್ಯೆ ಖಂಡಿಸಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತಿಭಟನೆಗಳು ನಡೆಯುತ್ತಿದ್ದು ಹಿಂದೂ ಪರ ಕಾರ್ಯಕರ್ತರು ರಸ್ತೆಗಿಳಿದು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಬೆಳ್ಳಾರೆಯಲ್ಲಿ ಪ್ರತಿಭಟನೆ ವೇಳೆ ಹಿಂದೂ ಕಾರ್ಯಕರ್ತರು ಹಾಗೂ ಪೊಲೀಸರ ನಡುವೆ ವಾಗ್ವಾದ ನಡೆದಿದೆ. ಪ್ರತಿಭಟನಾಕಾರರು ಕಲ್ಲು ತೂರಾಟ ನಡೆಸಿದ್ದರಿಂದ ಗುಂಪನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದರು. ಲಾಠಿ ಚಾರ್ಜ್‌ನಿಂದಾಗಿ ಹಲವು ಕಾರ್ಯಕರ್ತರಿಗೆ ಗಾಯವಾಗಿದ್ದು ಪರಿಸ್ಥಿತಿ ಉದ್ವಿಗ್ನಗೊಂಡಿದೆ. ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸಚಿವ ಸುನೀಲ್ ಕುಮಾರ್, ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್ ಬೆಳ್ಳಾರೆ ಗ್ರಾಮಕ್ಕೆ ಭೇಟಿ ನೀಡಿ ಮೃತ ಪ್ರವೀಣ್ ನೆಟ್ಟಾರು ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಲು ಯತ್ನಿಸಿದ್ದರು. ಈ ವೇಳೆ ಹಿಂದೂ ಕಾರ್ಯಕರ್ತರು ನಳಿನ್ ಕುಮಾರ್ ಕಟೀಲ್ ಕಾರಿಗೆ ಮುತ್ತಿಗೆ ಹಾಕಿದರು. ಆಕ್ರೋಶಗೊಂಡ ಕಾರ್ಯಕರ್ತರು ಕಟೀಲ್ ಅವರ ಕಾರನ್ನು ಪಲ್ಟಿ ಮಾಡಲು ಯತ್ನಿಸಿದ್ದು ಸದ್ಯವಾಗಿದ್ದ ಟೈರ್‌ಗಳಿಂದ ಗಾಳಿ ಹೊರಬಿಟ್ಟರು.

ಅಂತ್ಯಸಂಸ್ಕಾರದ ವೇಳೆ ಭಾಷಣ ಮಾಡಲು ಆರಂಭಿಸಿದ ಕಲ್ಲಡ್ಕ ಪ್ರಭಾಕರ್ ಭಟ್ ಅವರನ್ನು ತೀವ್ರ ತರಾಟೆ ತೆಗೆದುಕೊಂಡ ಹಿಂದೂ ಪರ ಕಾರ್ಯಕರ್ತರು ನಳಿನ್ ಕುಮಾರ್ ಕಟೀಲ್, ಸುನೀಲ್‌ಕುಮಾರ್ ಹಾಗೂ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಕಾರ್ಯಕರ್ತರ ಆಕ್ರೋಶದ ಮುಂದೆ ಏನೂ ಮಾತನಾಡಲು ಸಾಧ್ಯವಾಗದೇ ಮುಖಂಡರು ಸುಮ್ಮನೆ ಕುಳಿತುಕೊಳ್ಳಬೇಕಾಯಿತು. ಅತ್ತ ನಳಿನ್ ಕುಮಾರ್ ಕಟೀಲ್ ಕಾರನ್ನು ಕಾರ್ಯಕರ್ತರು ಪಲ್ಟಿ ಮಾಡಲು ಯತ್ನಿಸಿ, ಪಂಕ್ಚರ್ ಮಾಡಿದ್ದರಿಂದ ಎಚ್ಚೆತ್ತುಕೊಂಡ ಪೊಲೀಸರು, ಮುಖಂಡರಿಗೆ ರಕ್ಷಣೆ ನೀಡಿ ಸ್ಥಳದಿಂದ ಕರೆದೊಯ್ದರು.

ಶ್ರೀರಾಮ ಸಕ್ಕರೆ ಕಾರ್ಖಾನೆ ಆರಂಭವಾಗುವವರೆಗೆ ಕೆ.ಆರ್.ನಗರ ತಾಲೂಕಿನ ಕಬ್ಬು ಇತರ ಕಾರ್ಖಾನೆಗೆ ಸಾಗಾಟ

ಶಾಸಕ ಸಾ.ರಾ.ಮಹೇಶ್ ಅಧ್ಯಕ್ಷತೆಯಲ್ಲಿ ರೈತರು, ಸಕ್ಕರೆ ಕಾರ್ಖಾನೆ ಅಧಿಕಾರಿಗಳ ಸಭೆಯಲ್ಲಿ ನಿರ್ಧಾರ



ಮೈಸೂರು, ಜು.27(ಆರ್‌ಕೆಬಿ)- ಚುಂಚನಕಟ್ಟೆಯಲ್ಲಿರುವ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆ ಪ್ರಾರಂಭವಾಗುವವರೆಗೂ ಕೆ.ಆರ್.ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬೆಳೆದ ಕಬ್ಬು ಅರಿಯಲು ಬುಧವಾರ ಕೆ.ಆರ್. ನಗರ ಶಾಸಕ ಸಾ.ರಾ.ಮಹೇಶ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವಿವಿಧ ಕಾರ್ಖಾನೆಗಳು ಸಮ್ಮತಿಸಿದ್ದು, ಅದಕ್ಕೆ ಅನುಮತಿ ನೀಡಿ, ನಿರ್ಣಯ ಕೈಗೊಳ್ಳಲಾಯಿತು.

ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ಚುಂಚನಕಟ್ಟೆ ಸಹಕಾರ ಸಕ್ಕರೆ ಕಾರ್ಖಾನೆ ಮತ್ತು ಪಾಂಡವಪುರ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಲು ಆಗಿರುವ ವಿಳಂಬದಿಂದಾಗಿ ಕಬ್ಬು ಬೆಳೆಗಾರರಿಗೆ ತೊಂದರೆಯಾಗಿರುವುದನ್ನು ಮನಗಂಡ ಶಾಸಕ ಸಾ.ರಾ.ಮಹೇಶ್ ಸಭೆಯಲ್ಲಿ ವಿವಿಧ ಕಾರ್ಖಾನೆಗಳ ಮಾಲೀಕರು ಮತ್ತು ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಚರ್ಚಿಸಿದರು.

ಕ್ಷೇತ್ರ ವ್ಯಾಪ್ತಿಯ ಕಬ್ಬು ಬೆಳೆಗಾರರಿಂದ 12ರಿಂದ 16 ತಿಂಗಳು ಕಳೆದಿರುವ ಕಬ್ಬಿನ ಕಟಾವು ಮತ್ತು ಸಾಗಣಿಕೆ ಮಾಡಲು ಆಗಿರುವ ತೊಂದರೆಯನ್ನು ಕಬ್ಬು ಬೆಳೆಗಾರರಿಂದ ಆಲಿಸಿದರು. ಸಭೆಯಲ್ಲಿ ಭಾಗವಹಿಸಿದ್ದ ಕೋರಮಂಡಲ್ ಷುಗರ್ಸ್, ಚಾಮುಂಡೇಶ್ವರಿ ಷುಗರ್ಸ್, ಬಣ್ಣಾರಿ ಷುಗರ್ಸ್ ಕಾರ್ಖಾನೆಗಳ ವ್ಯವಸ್ಥಾಪಕರೊಂದಿಗೆ ಸುದೀರ್ಘ ಚರ್ಚೆ ನಡೆಸಿದರು. ಬಳಿಕ ಸಮಯ ಮೀರುತ್ತಿರುವ ಕಬ್ಬು ಕಟಾವಿಗೆ ಸಹಕರಿಸುವಂತೆ ತಿಳಿಸಿದರು.

ಶಾಸಕರ ಸಲಹೆಯನ್ನು ಪರಿಗಣಿಸಿದ ಕಾರ್ಖಾನೆಗಳ ವ್ಯವಸ್ಥಾಪಕ ನಿರ್ದೇಶಕರು, ಕಬ್ಬು ಕಟಾವಿಗೆ, ಸಾಗಣಿಕೆಗೆ ಒಪ್ಪಿಗೆ ನೀಡಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಸಾ.ರಾ.ಮಹೇಶ್, ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆ ಪ್ರಾರಂಭ ಕಾರಣಾಂತರದಿಂದ ವಿಳಂಬವಾಗಿದೆ. ಹಾಗಾಗಿ ಕೆ.ಆರ್.ನಗರ ತಾಲೂಕಿನ ಕಬ್ಬು ಬೆಳೆಗಾರರಿಂದ 13, 14 ತಿಂಗಳಿಂದ ಕಬ್ಬು ಖರೀದಿ ಮತ್ತು ಸಾಗಾಣಿಕೆಯಲ್ಲಿ ತೊಂದರೆಯಾಗಿತ್ತು. ಆಗಸ್ಟ್ ತಿಂಗಳಲ್ಲಿ ಕಾರ್ಖಾನೆ ಆರಂಭಗೊಳ್ಳಲಿದೆ. ಅಲ್ಲಿಯವರೆಗೆ ರೈತರಿಗೆ ತೊಂದರೆಯಾಗದ ರೀತಿಯಲ್ಲಿ ಕಬ್ಬು ಖರೀದಿ, ಸಾಗಾಣಿಕೆ ಮಾಡುವಂತೆ ತಿಳಿಸಲಾಗಿದೆ ಹೀಗಾಗಿ ನಾಳೆಯಿಂದಲೇ ಕಬ್ಬು ಕಟಾವು ಆರಂಭವಾಗಲಿದೆ ಎಂದು ತಿಳಿಸಿದರು.

ಸಭೆಯಲ್ಲಿ ಮೈಸೂರು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕಿ ಕುಮುದಾ, ಶ್ರೀರಾಮ ಸಕ್ಕರೆ ಕಾರ್ಖಾನೆಯ ಪ್ರಧಾನ ವ್ಯವಸ್ಥಾಪಕ ಬೋರೇಗೌಡ, ಚಾಮುಂಡೇಶ್ವರಿ ಸಹಕಾರ ಸಕ್ಕರೆ ಕಾರ್ಖಾನೆಯ ದೇವೇಗೌಡ, ಬಣ್ಣಾರಿ ಸಕ್ಕರೆ ಕಾರ್ಖಾನೆಯ ಸತೀಶ್, ಕಬ್ಬು ಸಾಗಾಟ ಲಾರಿ ಮಾಲೀಕರ ಸಂಘದ ತಿಮ್ಮೇಗೌಡ, ಜಯರಾಂ, ಮುನ್ನ, ಹರೀಶ್ ಇನ್ನಿತರರು ಉಪಸ್ಥಿತರಿದ್ದರು.

ಹುಲ್ಲಹಳ್ಳಿ ಸರ್ಕಲ್‌ನಲ್ಲಿ ಶಾಸಕ ಜಮೀರ್ ವಿರುದ್ಧ ಪ್ರತಿಭಟನೆ

ಒಕ್ಕಲಿಗ ಸಮುದಾಯದವರಲ್ಲಿ ಕ್ಷಮೆಯಾಚಿಸಲು ಆಗ್ರಹ



ನಂಜನಗೂಡು, ಜು.27- ಒಕ್ಕಲಿಗ ಸಮುದಾಯದ ಬಗ್ಗೆ ಕೇವಲವಾಗಿ ಮಾತನಾಡಿರುವ ಶಾಸಕ ಜಮೀರ್ ಅಹಮ್ಮದ್ ಕೂಡಲೇ ಸಮುದಾಯದವರಲ್ಲಿ ಕ್ಷಮೆಯಾಚಿಸಬೇಕು,ಇಲ್ಲದಿದ್ದರೆ ರಾಜ್ಯಾದ್ಯಂತ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ತಾಲ್ಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಎನ್.ನರಸಿಂಹಸ್ವಾಮಿ ಎಚ್ಚರಿಕೆ ನೀಡಿದ್ದಾರೆ.

ನಗರದ ಹುಲ್ಲಹಳ್ಳಿ ವೃತ್ತದಲ್ಲಿ ಬುಧವಾರ ಶಾಸಕ ಜಮೀರ್ ಅಹಮ್ಮದ್ ವಿರುದ್ಧ ತಾಲೂಕು ಒಕ್ಕಲಿಗರ ಸಂಘ ಆಯೋಜಿಸಿದ್ದ ಪ್ರತಿಭಟನಾ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಒಕ್ಕಲಿಗ ಮುಖಂಡರ ಕೃಪಕಟಾಕ್ಷದಿಂದ ರಾಜಕೀಯ ಸ್ಥಾನಮಾನ ಪಡೆದುಕೊಂಡ ಜಮೀರ್ ಅಹಮ್ಮದ್, ಒಕ್ಕಲಿಗ ಸಮುದಾಯದ ಎಚ್.ಡಿ.ಕುಮಾರಸ್ವಾಮಿ, ಡಿ.ಕೆ.ಶಿವಕುಮಾರ್ ಹಾಗೂ ಸಮುದಾಯದ ವಿರುದ್ಧ ಅವಹೇಳನಕಾರಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಶಾಸಕರು ತಮ್ಮ ಉದ್ದಟತನದ ಹೇಳಿಕೆಗಳಿಗೆ ಕಡಿವಾಣ ಹಾಕಬೇಕು, ರಾಜ್ಯದಲ್ಲಿ ಜಾತಿ-ಜಾತಿಗಳ ನಡುವಿನ ಸಾಮರಸ್ಯವನ್ನು ಹಾಳುಮಾಡುತ್ತಿರುವ ಜಮೀರ್ ಅಹಮ್ಮದ್ ಅವರನ್ನು ಶಾಸಕ ಸ್ಥಾನದಿಂದ ವಜಾಮಾಡಬೇಕು ಎಂದು ಹೇಳಿದರು.

ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ನಿಗಮದ ಮಾಜಿ ಅಧ್ಯಕ್ಷ ಎನ್.ಆರ್. ಕೃಷ್ಣಪ್ಪ ಗೌಡ ಮಾತನಾಡಿ, ಶಾಸಕ ಜಮೀರ್ ಅಹಮ್ಮದ್ ಅವರ ಉದ್ದಟತನದ ಹೇಳಿಕೆಗಳಿಂದ ಒಕ್ಕಲಿಗ ಸಮಾಜ ಕ್ರೋಧಗೊಂಡಿದೆ. ಜಮೀರ್ ಅಹಮ್ಮದ್ ಒಕ್ಕಲಿಗರ ಗುರುಗಳಾದ ಆದಿ ಚುಂಚನಗಿರಿ ಮಠದ ನಿರ್ಮಲಾನಂದ ಸ್ವಾಮೀಜಿ ಬಳಿಗೆ ತೆರಳಿ ಬೇಷರತ್ ಕ್ಷಮೆಯಾಚಿಸಬೇಕು, ಇಲ್ಲದಿದ್ದರೆ ಜಮೀರ್ ಅಹಮ್ಮದ್ ವಿರುದ್ಧ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಶಾಸಕ ಜಮೀರ್ ಅಹಮ್ಮದ್ ಭಾವಚಿತ್ರವನ್ನು ಬೆಂಕಿ ಹಚ್ಚಿ ದಹಿಸಲಾಯಿತು. ಪ್ರತಿಭಟನಕಾರರು ಹುಲ್ಲಹಳ್ಳಿ ವೃತ್ತದಲ್ಲಿ ಮಾನವ ಸರಪಳಿ ರಚಿಸಿ ರಸ್ತೆ ತಡೆ ನಡೆಸಿದರು.

ಪ್ರತಿಭಟನೆಯಲ್ಲಿ ನಂಜನಗೂಡು ಕೈಗಾರಿಕೆಗಳ ಸಂಘದ ಅಧ್ಯಕ್ಷ ರಾವ್ ಪ್ರಸಾದ್, ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಪ್ರವೀಣ್ ಕುಮಾರ್ ಮುಖಂಡರಾದ ಈ.ಮಹದೇವ ಕುಮಾರ್, ಕಿಟ್ಟಪ್ಪ ಎಸ್.ವಿಜಯ್ ಕುಮಾರ್, ದೇವರಸನಹಳ್ಳಿ ಆನಂದ್, ಸತೀಶ್‌ಗೌಡ, ಭಾಸ್ಕರ್ ಗೌಡ, ಗೋವರ್ಧನ್, ಮಂಜುನಾಥ್, ಈರೇಗೌಡನಹುಂಡಿ ಸತೀಶ್ , ಗೋಪಾಲ್, ನಾಗರಾಜ್, ಬಿ.ರಾಮು, ಕೆ. ಪ್ರಕಾಶ್, ಶಿವರಾಮ್, ರಾಚಪ್ಪ ಶಿವ ಕುಮಾರ್, ರವಿ ಕುಮಾರ್, ದೀಪಕ್, ಉಮೇಶ್, ಅವಿನಾಶ್ ಗೌಡ, ಅರುಣ್ ಗೌಡ ಉಪಸ್ಥಿತರಿದ್ದರು.

ಕೆಸರುಗದ್ದೆಯಂತಾದ ನಾಡಕಚೇರಿ ರಸ್ತೆ ದುರಸ್ತಿಗೆ ಮನವಿ

ಬೆಟ್ಟದಪುರ, ಜು.27- ಪಿರಿಯಾಪಟ್ಟಣ ತಾಲೂಕಿನ ಬೆಟ್ಟದ ಪುರದ ನಾಡ ಕಚೇರಿಯ ಮುಂಭಾಗ ಮಳೆಯಿಂದ ಕೆಸರು ಗದ್ದೆಯಂತಾಗಿದ್ದು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿದೆ. ಅಲ್ಲದೆ ಮಳೆ, ಬಿಸಿಲಿನಿಂದ ರಕ್ಷಣೆಗೆ ಯಾವುದೇ ಚಾವಣಿ ಇಲ್ಲ. ಆದ್ದರಿಂದ ತಕ್ಷಣವೇ ನಾಡ ಕಚೇರಿಗೆ ಹೋಗುವ ರಸ್ತೆ ಸರಿಪಡಿಸಬೇಕೆಂದು ರೈತ ಮುಖಂಡ ಕೃಷ್ಣೇಗೌಡ ಆಗ್ರಹಿಸಿದ್ದಾರೆ.

ಸಾಲಭಾದೆ ತಾಳಲಾರದೆ ರೈತ ಆತ್ಮಹತ್ಯೆ

ಮಲ್ಲುಂಡಿ, ಜು.27- ಸಾಲಭಾದೆ ತಾಳಲಾರದೆ ರೈತ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಂಜನಗೂಡು ತಾಲೂಕಿನ ಕೊತ್ತನಹಳ್ಳಿ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ಸಿದ್ದನಾಯಕ(38) ಆತ್ಮಹತ್ಯೆಗೆ ಶರಣಾದ ರೈತ. ಈತ ಬಂಡೀಪುರ ಕಾಡಂಚಿನ ಪ್ರದೇಶದಲ್ಲಿ 6 ಎಕರೆ ಜಮೀನು ಹೊಂದಿದ್ದು, ಸುಮಾರು 3 ಲಕ್ಷ ಕೈ ಸಾಲ ಮಾಡಿ ಬೆಳೆ ಬೆಳೆದಿದ್ದ. ತಮ್ಮ ಜಮೀನು ಬಂಡೀಪುರ ಕಾಡಂಚಿನ ಪ್ರದೇಶದಲ್ಲಿ ಇರುವುದರಿಂದ ಬೆಳೆದ ಫಸಲನ್ನು ಕಾಡು ಪ್ರಾಣಿಗಳು ನಾಶ ಮಾಡುತ್ತಿದ್ದು, ತಾನು ಮಾಡಿದ ಸಾಲ ತೀರಿಸಲಾಗುತ್ತಿಲ್ಲ ಎಂದು ಮನನೊಂದು ಬುಧವಾರ ಬೆಳಗ್ಗೆ ಆತ್ಮಹತ್ಯೆಗೆ ಶರಣಾಗಿದ್ದಾರೆ. ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಸ್ಥಳಕ್ಕೆ ಭೇಟಿ ನೀಡಿದ ಹುಲ್ಲಹಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ಕೃಷ್ಣಕಾಂತ ಕೋಳಿ, ಸರ್ಕಲ್ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ್ ತಳವಾರ್ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಬೇಡಿಕೆ ಈಡೇರಿಕೆಗೆ ಬಿಡದ ಪಟ್ಟು ಕಾಡಾನೆಗಳ ಸೆರೆ ಕಾರ್ಯಾಚರಣೆಯಲ್ಲಿ ಭಾಗವಹಿಸಲು ಮಾವುತರ ನಿರಾಕರಣೆ

ಹನಗೋಡು, ಜು.27- ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಪಟ್ಟು ಹಿಡಿದಿರುವ ಮಾವುತರು. ರಾಮನಗರ ಭಾಗದಲ್ಲಿ ಉಪಟಳ ನೀಡುತ್ತಿರುವ ಎರಡು ಕಾಡಾನೆಗಳ ಸೆರೆ ಕಾರ್ಯಾಚರಣೆಗೆ ಹೋಗಲು ನಿರಾಕರಿಸಿದ್ದಾರೆ.

ಕೆಲ ದಿನಗಳಿಂದ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಈಗಾಗಲೇ ಮಾವುತರ ಕೇಂದ್ರ ಸಂಘದ ಆಶ್ರಯದಲ್ಲಿ ಪ್ರತಿಭಟನೆ ನಡೆಸಲಾಗುತ್ತಿದ್ದು, ಅವು ಈಡೇರುವವರೆಗೂ ಯಾವುದೇ ಕಾರ್ಯಾಚರಣೆಯಲ್ಲೂ ಭಾಗವಹಿಸುವುದಿಲ್ಲ ಎಂದು ಮತ್ತಿಗೋಡು ಆನೆ ಶಿಬಿರದ ಮಾವುತರು ತಿಳಿಸಿದ್ದಾರೆ.



ರಾಮನಗರ ಅರಣ್ಯ ಅಧಿಕಾರಿಗಳು ಭೀಮ, ಮಹಾರಾಷ್ಟ್ರ ಭೀಮ, ಗಣೇಶ ಆನೆ ಕಾರ್ಯಾಚರಣೆಗೆ ಬೇಕೆಂದು ಮನವಿ ಮಾಡಿದ್ದರು. ಅವುಗಳನ್ನು ಸೆರೆ ಹಿಡಿದು ಕಾಲರ್ ಐಡಿ ಹಾಕಬೇಕಾಗಿದೆ. ಆ ಸಂಬಂಧ ನಾಗರಹೊಳೆ ಎಸ್‌ಎಫ್ ಸತೀಶ್ ಅವರು ಮಂಗಳವಾರ ಸಂಜೆ ಮತ್ತಿಗೋಡುವಿಗೆ ಆಗಮಿಸಿ ಮಾವುತರನ್ನು ಕಾರ್ಯಾಚರಣೆಗೆ ತೆರಳಲು ತಿಳಿಸಿದರು. ಆದರೆ ಅವರ ಮನವಿಯನ್ನು ನಿರಾಕರಿಸಿದ್ದಾರೆ. ಜೊತೆಗೆ ಡಿಸಿಎಫ್ ಮತ್ತು ಎಸಿಎಫ್ ಅವರು ಆನೆ ಕ್ಯಾಂಪಿನ ಮಾವುತರೊಂದಿಗೆ ಮಾತನಾಡಿ ಮನವೊಲಿಕೆಗೆ ಪ್ರಯತ್ನ ಪಟ್ಟರೂ ಪಟ್ಟು ಸಡಿಲಿಸಲಿಲ್ಲ. ಬೇಡಿಕೆ ಈಡೇರಿಕೆ ನಂತರವೇ ಕಾರ್ಯಾಚರಣೆಗೆ ತೆರಳುತ್ತೇವೆ ಎಂದು ತಿಳಿಸಿದ್ದಾರೆ. ಕರ್ನಾಟಕ ರಾಜ್ಯದ ಯಾವುದೇ ಕಡೆಯಿಂದಲೂ ಆನೆಗಳು ಕಾರ್ಯಾಚರಣೆಗೆ ತೆರಳಲು ಆನೆಗಳು ಹೋಗುವುದಿಲ್ಲ ಎಂದು ಆನೆ ಮಾವುತ ಮತ್ತು ಕಾವಾಡಿಗಳ ಸಂಘ ತಿಳಿಸಿದೆ.

ಲಾರಿ ಚಾಲಕ ನಾಪತ್ತೆ




ಮಲ್ಲುಂಡಿ, ಜು.27- ಲಾರಿ ಚಾಲಕ ನಾಪತ್ತೆಯಾಗಿರುವ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ನಂಜನಗೂಡು ತಾಲೂಕಿನ ಕಾರ್ಯ ಗ್ರಾಮದ ದೇವರಾಜು (29) ಇವರು ಬೆಂಗಳೂರಿನಲ್ಲಿ ಲಾರಿ ಚಾಲಕರಾಗಿ ಕೆಲಸ ಮಾಡುತ್ತಿದ್ದು, ಗ್ರಾಮಕ್ಕೆ ತಿಂಗಳಿಗೊಮ್ಮೆ ಬಂದು ಹೋಗುತ್ತಿದ್ದರು. ಅದೇ ರೀತಿ ಮಾರ್ಚ್ 3 ರಂದು ಬೆಳಗ್ಗೆ 8 ಗಂಟೆ ಸಮಯದಲ್ಲಿ ಲಾರಿ ಡ್ರೈವರ್ ಕೆಲಸಕ್ಕೆಂದು ಮನೆಯಿಂದ ಹೊರಗೆ ಹೋದವರು ಇದುವರೆಗೂ ವಾಪಸು ಬಂದಿರುವುದಿಲ್ಲ ಎಂದು ಪತ್ನಿ ದೂರಿನಲ್ಲಿ ತಿಳಿಸಿದ್ದಾರೆ. ಈತನ ಸುಳಿವು ಸಿಕ್ಕದಲ್ಲಿ ದೂರವಾಣಿ ಸಂಖ್ಯೆ 0821-2201111, 9480805066 ಸಂಪರ್ಕಿಸಲು ಕೋರಿದೆ.

ದುರ್ವ್ಯಸನಗಳಿಂದ ದೂರ ಉಳಿಯುವ ಸಂಕಲ್ಪ ಮಾಡಿ

ಸುತ್ತೂರು ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಕರೆ

ತಿ.ನರಸೀಪುರ, ಜು.27- ಮನುಷ್ಯ ದುಶ್ಚಟಗಳಿಗೆ ಬಲಿಯಾಗುವುದು ಸುಲಭ. ಅದರಿಂದ ಹೊರ ಬರುವುದು ಬಹಳ ಕಷ್ಟವಾದ ಕಾರಣ. ದುರ್ವ್ಯಸನಗಳಿಂದ ದೂರ ಉಳಿಯುವ ಸಂಕಲ್ಪ ಮಾಡುವಂತೆ ಸುತ್ತೂರು ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಕರೆ ನೀಡಿದರು.



ಪಟ್ಟಣದ ಜೆಎಸ್‌ಎಸ್ ಸಭಾಭವನದಲ್ಲಿ ಸುತ್ತೂರು ಜಗದ್ಗುರು ವೀರಸಿಂಹಾಸನ ಮಹಾ ಸಂಸ್ಥಾನ ಮಠ, ಜೆಎಸ್‌ಎಸ್ ವಿದ್ಯಾಪೀಠ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಕಾರದೊಡನೆ ನಡೆದ ಹತ್ತು ದಿನಗಳ ಅವಧಿಯ ಕುಡಿತ ಚಟ ಬಿಡಿಸುವ ಶಿಬಿರದ ಸಮಾರೋಪ ಸಮಾರಂಭದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಕುಡಿತ ಕಲಿಯಲು ಕೆಲವರು ಕಾರಣ ಹೇಳುತ್ತಾರೆ. ಆದರೆ ಅವು ಕಾರಣಗಳಲ್ಲ. ಕುಡಿತವನ್ನು ಬಿಡಲು ಪ್ರತಿನಿತ್ಯ ಕುಡಿಯುವ ವ್ಯಕ್ತಿ ಇಂದು ನಾನು ಕುಡಿಯುವುದಿಲ್ಲ ಎಂಬ ಮನಸ್ಥಿತಿಯನ್ನು ಬೆಳೆಸಿಕೊಳ್ಳಬೇಕು ಎಂದರು.

ದುರಭ್ಯಾಸಗಳನ್ನು ಬೆಳೆಸಿಕೊಳ್ಳಬಾರದು. ಸದ್ಭಾವನೆಯಿಂದ, ಸನ್ನಡತೆಯಿಂದ ಬದುಕುವುದನ್ನು ಕಲಿಸಿಕೊಳ್ಳಬೇಕು. ಯಾವುದೇ ಕಾರಣಕ್ಕೂ ದುಶ್ಚಟಗಳಿಗೆ ಬಲಿಯಾಗಬಾರದು. ಕುಡಿತದಿಂದಾಗಿ ಸಾಮಾಜಿಕ ದುಷ್ಪರಿಣಾಮಗಳ ಬಗ್ಗೆ ತಿಳಿದಾಗಲೇ ನಿಮಗೆ ಅರಿವಾಗುತ್ತದೆ. ಸಮಾಜಮುಖಿ ಚಿಂತನೆಗಳ ಅಳವಡಿಸಿಕೊಂಡು ದುಶ್ಚಟಗಳಿಂದ ಮುಕ್ತರಾಗುವಂತೆ ಅವರು ಕಿವಿಮಾತು ಹೇಳಿದರು.

ಶಾಸಕ ಎಂ.ಅಶ್ವಿನ್‌ಕುಮಾರ್ ಮಾತನಾಡಿ, ಶಿಬಿರದ ಬಳಿಕ ಕುಡಿತದಿಂದ ಮುಕ್ತರಾಗಿ ಹೊಸ ಜೀವನ ರೂಪಿಸಿಕೊಳ್ಳಲು ಸುತ್ತೂರು ಶ್ರೀಗಳು ನಿಮಗೊಂದು ಅವಕಾಶ ಕಲ್ಪಿಸಿದ್ದಾರೆ. ಮತ್ತೆ ವ್ಯಸನದತ್ತ ಸುಳಿಯದೇ ಉತ್ತಮವಾದ ಜೀವನಕ್ಕಾಗಿ ಪೂರಕವಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು. ನೀವು ಸಮಾಜಕ್ಕೆ ಮಾದರಿಯಾಗುವಂತೆ ಸಲಹೆ ಮಾಡಿದರು. ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ ಚಿಂತನೆಗಳಿಗೆ ಅಗತ್ಯ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಜೆಎಸ್‌ಎಸ್ ಮಠ ಹಾಗೂ ಸಂಸ್ಥೆಗಳು ನಮ್ಮ ಹೆಮ್ಮೆ ಎಂದು ಅಭಿಪ್ರಾಯಪಟ್ಟರು.

ವಾಟಾಳು ಡಾ.ಸಿದ್ದಲಿಂಗಶಿವಚಾರ್ಯ ಸ್ವಾಮೀಜಿ, ಎಂಎಲ್ ಹುಂಡಿಯ ಗೌರಿಶಂಕರ ಸ್ವಾಮೀಜಿ ಮಾತನಾಡಿದರು. ಸುತ್ತೂರು ಮಠದ ಕಿರಿಯ ಸ್ವಾಮೀಜಿ, ಸೇತುವೆ ಮಠದ ಸಹಜಾನಂದ ಸ್ವಾಮೀಜಿ, ಚುಂಚನಹಳ್ಳಿ ಚನ್ನಬಸವಸ್ವಾಮೀಜಿ, ಪುರಸಭಾಧ್ಯಕ್ಷ ಮದನ್‌ರಾಜ್, ಡಾ. ಸೋಮಶೇಖರ್, ವೀರಶೈವ ಮಹಾಸಭಾದ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ, ಕೆ.ಎನ್. ಪ್ರಭುಸ್ವಾಮಿ, ಹೋಟೆಲ್ ರಾಜಣ್ಣ ಜಿ.ಎಲ್. ಉಮೇಶ್, ವ್ಯವಸ್ಥಾಪಕ ಯೋಗೇಶ್, ಮಾಜಿ ಪಪಂ ಅಧ್ಯಕ್ಷ ವಿರೇಶ್, ಶಸ್ತ್ರಚಿಕಿತ್ಸಾ ತಜ್ಞ ಡಾ. ರೇವಣ್ಣ, ಜಿಪಂ ಮಾಜಿ ಸದಸ್ಯ ಜಯಪಾಲ್ ಭರಣಿ, ಪುರಸಭಾ ಸದಸ್ಯ ಕಿರಣ್, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ತೋಂಟೇಶ್, ಮೂಗೂರು ಕುಮಾರಸ್ವಾಮಿ, ಜ್ಞಾನೇಂದ್ರಮೂರ್ತಿ, ಡೇರಿ ಗುರುಮೂರ್ತಿ, ಶಂಭುದೇವನಪುರ ರಮೇಶ್, ನಾಗೇಶ್, ಕಿರಗಸೂರು ಮಹದೇವಸ್ವಾಮಿ, ಬೆನಕನಹಳ್ಳಿ ವಿಜಯ್, ಕುಮಾರ್, ಕಾರ್ ಮಲ್ಲಪ್ಪ, ರಾಜೇಶ್ ಮತ್ತಿತರರು ಇದ್ದರು.

ದಿಕ್ಕು ತಪ್ಪುತ್ತಿರುವ ಯುವ ಜನತೆ

ಪ್ರಸಕ್ತ ಸನ್ನಿವೇಶದಲ್ಲಿ ಯುವ ಜನತೆ ದಿಕ್ಕು ತಪ್ಪುತ್ತಿದ್ದು, ಸ್ವೇಚ್ಛೆಯ ಜೀವನವನ್ನು ಸ್ವಾತಂತ್ರ್ಯ ಎಂದು ಬದುಕುತ್ತಿದ್ದಾರೆ. ಪಾರ್ಟಿ ಸಂಸ್ಕೃತಿಯೇ ಜೀವನ ಎಂಬ ತಪ್ಪು ಕಲ್ಪನೆಯಿಂದ ಬದುಕುತ್ತಿದ್ದಾರೆ. ದುಂದು ವೆಚ್ಚದ ಬದುಕು, ವಿವಾಹಗಳಿಗೆ ಕಡಿವಾಣ ಹಾಕಬೇಕಿದೆ. ಗ್ರಾಮಾಂತರ ಪ್ರದೇಶದ ಜನರು ಕುಡಿತದ ಮೋಹಕ್ಕೆ ಬಲಿಯಾಗಬಾರದು.

-ಡಾ ಎಲ್. ಎಲ್ ಭಾರತೀಶಂಕರ್, ಮಾಜಿ ಶಾಸಕರು



ಮೈಸೂರು ನಗರ ಚಾಮರಾಜ ಕ್ಷೇತ್ರದ
ಜನಪ್ರಿಯ ಕಾಂಗ್ರೆಸ್ ಮುಖಂಡರಾದ
ಶ್ರೀ ಕೆ.ಹರೀಶ್‌ಗೌಡರ
ಹುಟ್ಟುಹಬ್ಬದ
50ನೇ ವರ್ಷದ
ಪ್ರಯುಕ್ತ
ಬೃಹತ್
ಉದ್ಯೋಗ ಮೇಳ
ದಿನಾಂಕ : 28–07–2022ನೇ ಗುರುವಾರ ಬೆಳಗ್ಗೆ 9 ಗಂಟೆ
ಸ್ಥಳ : ಮೈಸೂರು ಒನ್ ಮೈದಾನ, ಡಾಕ್ಟರ್ಸ್ ಕಾರ್ನರ್,
ಗೋಕುಲಂ, ಮೈಸೂರು
ಸರ್ವರಿಗೂ ಸುಸ್ವಾಗತ